ನಮ್ಮ ಮಾನಸ

ಸಂಪುಟ : 3 ಅಕ್ಟೋಬರ್ 2009 ಸಂಚಿಕೆ : 6




ನನ್ನ ಕಣ್ಣುಗಳ
ಬೆಳಕನ್ನು ಪ್ರಶ್ನಿಸುವ ಮೂಲಕವಷ್ಟೇ
ನಿನ್ನ ಕಣ್ಣುಗಳ ಸುಳ್ಳಿನಿಂದ ಪ್ರಕಾಶಿಸುವುದನ್ನು
ನಾನು ತಿರಸ್ಕರಿಸ ಬಲ್ಲೆ.

"ರಕ್ತ, ಮಾಂಸಗಳಿಂದ ಕೂಡಿದ ಇಂತಹ ಮನುಷ್ಯರೊಬ್ಬರು
ಈ ಭೂಮಿಯ ಮೇಲೆ ನಡೆದಾಡಿದ್ದರು ಎನ್ನುವುದನ್ನು
ಮುಂದಿನ ಪೀಳಿಗೆಯ ಜನ ನಂಬುವುದು ಕಷ್ಟ"

–ಆಲ್ಬರ್ಟ್ ಐನ್‌ಸ್ಟೀನ್, ಜಗದ್ವಿಖ್ಯಾತ ವಿಜ್ಞಾನಿ

ಬಾಪೂಜಿಗೆ ನಮನ



ಅಕ್ಟೋಬರ್ 2, ಭಾರತದ ಹೆಮ್ಮೆಯ ರಾಷ್ಟ್ರಪಿತ
ಮಹಾತ್ಮ ಗಾಂಧೀಜಿಯವರ ಜನ್ಮದಿನ.
ಅವರು ಭಾರತ ಸ್ವಾತಂತ್ರ್ಯ ಸಂಗ್ರಾಮದ ಮಹಾಚೇತನ.
ಸತ್ಯ – ಅವರ ಬದುಕಿನ ಆದರ್ಶ.
ಶಾಂತಿ – ಅವರ ದಿವ್ಯ ಮಂತ್ರ.
ಅಹಿಂಸೆ – ಅವರ ಹೋರಾಟದ ಪರಮ ಅಸ್ತ್ರ.
ಸರಳತೆ – ಅವರ ಜೀವನಶೈಲಿ
ಗಾಂಧೀಜಿಯವರ ಸ್ವರಾಜ್ಯದ ಕನಸನ್ನು ನನಸು ಮಾಡಲು
ಅವರು ಸಾಗಿದ ಹಾದಿಯೇ ನಮಗೆ ಮಾರ್ಗದರ್ಶಿ.

ಅಹಿಂಸೆ ಮತ್ತು ಸೋದರತೆಯ ಪರಿಪಾಲನೆಯೇ
ನಾವು ರಾಷ್ಟ್ರಪಿತನಿಗೆ ಸಲ್ಲಿಸುವ ಗೌರವ

– ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಕರ್ನಾಟಕ ವಾರ್ತೆ

ನಮ್ಮ ಮಾನಸ

ಅಕ್ಟೋಬರ್ 2009
ಸಂಪುಟ : 3 ಸಂಚಿಕೆ : 6

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
© : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ
2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ), ಅನಂತರ 'ಮಾನಸ', ಈಗ 'ನಮ್ಮ ಮಾನಸ'

ಸಂಪಾದಕೀಯ

'ವರದಕ್ಷಿಣೆ' ಅಲ್ಲ; ಅವಳಿಗೆ ಆಸ್ತಿಯಲ್ಲಿ ಹಕ್ಕು ಸಿಗಲಿ

80ರ ದಶಕದಲ್ಲಿ ದೆಹಲಿಯ ಹಲವು ಮಹಿಳಾ ಸಂಘಟನೆಗಳು ವರದಕ್ಷಿಣೆ ಹಾಗೂ ವಧು ದಹನಕ್ಕೆ ಸಂಬಂಧಿಸಿದ ಮತ್ತು ಭಾರತೀಯ ಕುಟುಂಬಗಳಲ್ಲಿ ಮಹಿಳೆಯರ ಸ್ಥಾನಮಾನವನ್ನು ಕುರಿತು ಮೂಲಭೂತವಾದ ಪ್ರಶ್ನೆಗಳನ್ನು ಎತ್ತಿದವು. ವಧುದಹನ, ವರದಕ್ಷಿಣೆಯ ಸಾವು, ಕೌಟುಂಬಿಕ ದೌರ್ಜನ್ಯಕ್ಕೆ ಬಲಿಯಾದ ಹೆಣ್ಣುಮಕ್ಕಳ ಸಾವುಗಳನ್ನು ಪೊಲೀಸರು ಸಾಮಾನ್ಯವಾಗಿ 'ಅಸಹಜ ಸಾವು' ಅಥವಾ ಆತ್ಮಹತ್ಯೆಯೆಂದು ಮುಚ್ಚಿಹಾಕಿಬಿಡುತ್ತಿದ್ದರು. ಪೊಲೀಸರ ವರದಿಯಂತೆ ದಿನಪತ್ರಿಕೆಗಳೂ ಒಂದೆರಡು ಸಾಲುಗಳಲ್ಲಿ ಸಾವುಗಳನ್ನು ಯಾಂತ್ರಿಕವಾಗಿ ವರದಿ ಮಾಡುತ್ತಿದ್ದವು.

ವರದಕ್ಷಿಣೆಯ ಸಾವುಗಳಿಗೆ ಸಂಬಂಧಿಸಿದಾಗ ಗಂಡನ ಮನೆಯವರು ಸಾಂದರ್ಭಿಕ ಸಾಕ್ಷಿಗಳನ್ನು ನಾಶಪಡಿಸುವುದು ಸಾಮಾನ್ಯವಾಗಿತ್ತು. ಪೊಲೀಸ್ ಇಲಾಖೆಯಲ್ಲಿನ ಭ್ರಷ್ಟಾಚಾರ ಹಾಗೂ ಕಾನೂನಿನಲ್ಲಿರುವ ಮಿತಿಗಳಿಂದಾಗಿ ಆರೋಪಿಗಳು ತಪ್ಪಿಸಿಕೊಳ್ಳುತ್ತಿದ್ದರು. ನ್ಯಾಯಾದಲ್ಲಿನ ವಿಳಂಬ ಗತಿಯಿಂದಾಗಿ ನ್ಯಾಯ ಪಡೆಯುವ ಅಪೇಕ್ಷೆಯೂ ಹುಸಿಯಾಗುತ್ತಿತ್ತು. ಸಾಕ್ಷಿಗಳಿಲ್ಲದೆ ಪ್ರಕರಣವನ್ನು ಸಾಬೀತು ಪಡಿಸುವುದಾದರೂ ಹೇಗೆ? ಮಹಿಳಾ ಸಂಘಟನೆಗಳು ನೊಂದ ಮಹಿಳೆಯರಿಗೆ ನ್ಯಾಯ ದೊರಕಿಸಿ ಕೊಡಲು ಹೊಸ ಮಾದರಿಯ ಪ್ರತಿಭಟನಾ ಕಾರ್ಯಗಳನ್ನು ಹಮ್ಮಿಕೊಂಡರು. ಆರೋಪಿಯ ಮನೆಯ ಮುಂದೆ ಪ್ರತಿಭಟನೆ ಮಾಡುವುದು, ಕರಪತ್ರವನ್ನು ಹಂಚುವುದು, ಘೋಷಣೆಯನ್ನು ಕೂಗುವುದು, ನ್ಯಾಯಾಲಯ ನೀಡಿದ ಪಕ್ಷಪಾತದಿಂದ ಕೂಡಿದ ತೀರ್ಪನ್ನು ನ್ಯಾಯಾಲಯದ ಆವರಣದಲ್ಲೆ ವಿರೋಧಿಸುವುದು – ಹೀಗೆ ಸಾರ್ವಜನಿಕವಾಗಿ ಮಹಿಳೆಯರು ತಮ್ಮ ಧ್ವನಿಯನ್ನು ಎತ್ತಿದರು. ವಧುದಹನ, ಕೌಟುಂಬಿಕ ಹಿಂಸೆ, ಮಹಿಳೆಯ ಮೇಲೆ ನಡೆಯುವ ದೌರ್ಜನ್ಯಗಳನ್ನು ಸರ್ಕಾರದ, ಅಧಿಕಾರಿಗಳ, ಸಾರ್ವಜನಿಕರ, ನ್ಯಾಯಾಲಯದ ಕಣ್ಣಿಗೆ ಬೀಳುವಂತೆ ಮಾಡುವುದು ಸಂಘಟನೆಗಳ ಉದ್ದೇಶವಾಗಿತ್ತು. ಕಾನೂನಿನ ಮಿತಿಗಳನ್ನು ಬಳಸಿಕೊಂಡು ತಪ್ಪಿಸಿಕೊಳ್ಳುತ್ತಿದ್ದ ಆರೋಪಿಗಳನ್ನು ಸಾರ್ವಜನಿಕವಾಗಿ ಬಹಿಷ್ಕರಿಸುವುದು ಇಂತಹ ಪ್ರತಿಭಟನೆಗಳ ಆಶಯವಾಗಿತ್ತು. ಮಹಿಳಾ ಸಂಘಟನೆಗಳು ಬೀದಿಯಲ್ಲಿ ನಡೆಸುತ್ತಿದ್ದ ಹೋರಾಟಗಳಿಗೆ ಅಪಾರವಾದ ಜನ ಬೆಂಬಲ ದೊರೆಯಿತು. ಮಾಧ್ಯಮಗಳು ಸಹ ಹೆಚ್ಚು ಪ್ರಚಾರವನ್ನು ನೀಡಿದವು. ನಾಲ್ಕು ಗೋಡೆಯೊಳಗಿನ ಮಹಿಳೆಯರ 'ಖಾಸಗಿ ಬದುಕನ್ನು' 'ಸಾರ್ವಜನಿಕ ಚರ್ಚೆಗೆ' ಒಳಪಡಿಸುವ ಪರಿಕಲ್ಪನೆಗೆ ಈ ಹೋರಾಟಗಳು ಐತಿಹಾಸಿಕ ತಳಹದಿಯನ್ನು ಹಾಕಿದವು. ದೇಶದಾದ್ಯಂತ ವಿವಿಧ ಮಹಿಳಾ ಸಂಘಟನೆಗಳು ವರದಕ್ಷಿಣೆ ಸಾವು ಹಾಗೂ ಕೌಟುಂಬಿಕ ಹಿಂಸೆಯನ್ನು ವಿವಿಧ ರೀತಿಯಲ್ಲಿ ಹಾಗೂ ವಿವಿಧ ಸ್ವರೂಪದಲ್ಲಿ ಪ್ರತಿಭಟಿಸುತ್ತಾ ಬಂದಿವೆ. ಬೆಂಗಳೂರಿನ ಏಷಿಯನ್ ಮಹಿಳಾ ಮಾನವಹಕ್ಕುಗಳ ವೇದಿಕೆ ಇತ್ತೀಚೆಗೆ ಏರ್ಪಡಿಸಿದ್ದ ಮಹಿಳಾ ನ್ಯಾಯಾಲಯ ಇಂಥದೊಂದು ವಿಶಿಷ್ಟ ಪ್ರಯತ್ನವಾಗಿದೆ.

ವರದಕ್ಷಿಣೆ ಪದ್ಧತಿಗೂ ವಿವಾಹ ಸಂಸ್ಥೆ ಹಾಗೂ ಕುಟುಂಬದ ರಚನೆಗೂ ನೇರವಾದ ಸಂಬಂಧವಿದೆ. ಇದು ಎರಡು ಕುಟುಂಬಗಳ ನಡುವೆ ನಡೆಯುವ ಆರ್ಥಿಕ ವಿನಿಮಯ. ಬದಲಾಗುತ್ತಿರುವ ಆರ್ಥಿಕ ಹಾಗೂ ಸಾಮಾಜಿಕ ಸಂದರ್ಭದಲ್ಲಿ ಇದು ಹೆಚ್ಚು ಹೆಚ್ಚು ಸಂಕೀರ್ಣ ಸ್ವರೂಪವನ್ನು ಪಡೆಯುತ್ತಾ ಬಂದಿದೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ವರದಕ್ಷಿಣೆಯ ಕೊಡು–ಕೊಳ್ಳುವಿಕೆಯನ್ನು ವಿಭಿನ್ನ ನೆಲೆಯಲ್ಲಿ ವಿಶ್ಲೇಷಿಸಬೇಕಾಗುತ್ತದೆ. ಪುರುಷಪ್ರಧಾನ ಸಂಸ್ಕೃತಿ ಹಾಗೂ ಕುಟುಂಬದಲ್ಲಿ ಪುರುಷನ ಆಧಿಪತ್ಯ ಮಹಿಳೆಯರನ್ನು ಅನುತ್ಪಾದಕಿ ಎಂದು ಪರಿಗಣಿಸುತ್ತವೆ. ಮಹಿಳೆಯ ವಿದ್ಯಾಭ್ಯಾಸ, ಗೃಹಕೃತ್ಯ, ಮಕ್ಕಳ ಪಾಲನೆ–ಪೋಷಣೆ ಹಾಗೂ ವೇತನ ರಹಿತ ದುಡಿಮೆಯನ್ನೂ ಸಹ ಅಪಮೌಲ್ಯಗೊಳಿಸಲಾಗಿದೆ. ವ್ಯಾಪಾರೀಕರಣ, ಸರಕು ಸಂಸ್ಕೃತಿ, ಆಡಂಬರದ ಜೀವನಶೈಲಿ, ತ್ವರಿತವಾಗಿ ಶ್ರೀಮಂತರಾಗಬೇಕೆಂಬ ದುರಾಸೆ – ಇವು ವರದಕ್ಷಿಣೆಯ ಬೇಡಿಕೆಯನ್ನು ತೀವ್ರಗೊಳಿಸುತ್ತವೆ. ಇಂದು ವರದಕ್ಷಿಣೆಯ ಪದ್ಧತಿ ಎಲ್ಲಾ ವರ್ಗ, ಜಾತಿ, ಜನಾಂಗ, ಬುಡಕಟ್ಟು ಜನಾಂಗದವರನ್ನೂ ವ್ಯಾಪಿಸಿರುವುದು ಆತಂಕಕಾರಿ ಸಂಗತಿಯಾಗಿದೆ.

ಗಂಡಿನ ಹಾಗೂ ಹೆಣ್ಣಿನ ಕುಟುಂಬದವರಿಬ್ಬರಿಗೂ ವೈಭವಪೂರ್ಣ ಅದ್ದೂರಿಯ ಮದುವೆಗಳು ಸಮಾಜದಲ್ಲಿ ಅವರ ಸ್ಥಾನಮಾನ ಹಾಗೂ ಅಂತಸ್ತನ್ನು ನಿರ್ಧರಿಸುವ ಸಂಗತಿಗಳಾಗಿವೆ.

ಕೆಜಿ ಗಟ್ಟಲೇ ಚಿನ್ನದ ಒಡವೆ, ಎಲೆಕ್ಟ್ರಾನಿಕ್ ವಸ್ತುಗಳು, ಸೈಟು ಅಥವಾ ಫ್ಲ್ಯಾಟ್ ಕೇಳುವುದು ಗಂಡಿನ ಸ್ಥಾನಮಾನವನ್ನು ಅವಲಂಬಿಸಿದೆ. ಗಂಡಿನ ಕಡೆಯವರ ಬೇಡಿಕೆಯನ್ನು ಪೂರೈಸಲು ಹೆಣ್ಣಿನ ಮನೆಯವರು ಜೀವನಪೂರ್ತಿ ಹೆಣಗಾಡಬೇಕಾಗುತ್ತದೆ. ತಮಗಿಂತ ಉತ್ತಮ ಕುಟುಂಬದವರೊಡನೆ ಸಂಬಂಧ ಬೆಳೆಸುವುದು ಹೆಣ್ಣಿನ ಕುಟುಂಬದವರಿಗೂ ನಿರ್ಣಾಯಕ ಅಂಶವಾಗುತ್ತದೆ. ಮಹಿಳೆಯರು ಸಹ ಈ ಮೇಲ್ಮುಖ ಚಲನೆಯನ್ನು ಸ್ವಪ್ರಯತ್ನದಿಂದ ಮಾಡದೇ ಪುರುಷರ ಮೂಲಕ ಸುಲಭವಾಗಿ ದಕ್ಕಿಸಿಕೊಳ್ಳುತ್ತಾರೆ. ಕುಟುಂಬದ ಅಧಿಕಾರ ಸಂಬಂಧದಲ್ಲಿ ಇದು ಮುಖ್ಯವಾದ ಪಾತ್ರವನ್ನು ವಹಿಸುತ್ತಿದೆ.

ಮಾರುಕಟ್ಟೆ ಹಾಗೂ ಮಾಧ್ಯಮಗಳು ವಿವಾಹದ ಬಗ್ಗೆ ಉತ್ಪ್ರೇಕ್ಷಿತ ಪರಿಕಲ್ಪನೆಯನ್ನು ಜಾಹಿರಾತುಗಳ ಹಾಗೂ ಸೀರಿಯಲ್‌ಗಳ ಮೂಲಕ ಬಲಪಡಿಸುತ್ತಿವೆ. ವಿವಿಧ ವಿನ್ಯಾಸದ ಒಡವೆಗಳು, ವಧೂ-ವರರ ಬಟ್ಟೆಗಳು, ವಧುವಿನ ಅಲಂಕಾರ ಸಾಮಗ್ರಿಗಳ ಪ್ರಚಾರ, ಸೀರಿಯಲ್‌ಗಳಲ್ಲಿ ದಿನನಿತ್ಯ ನೀಡುವ 'ತಾಳಿ', 'ಕುಂಕುಮ' ಭಾಗ್ಯದ ಸಂದೇಶಗಳು ವಿವಾಹದ ಬಗ್ಗೆ ವಿಜೃಂಭಿತ ಅತಿರಂಜಿತ ಮೌಲ್ಯಗಳನ್ನು ಪುನರ್ ಸ್ಥಾಪಿಸುತ್ತವೆ.

ವರದಕ್ಷಿಣೆಯ ಪೆಡಂಭೂತದಿಂದಾಗಿ ಮಹಿಳೆಯರ ಮೇಲೆ ಕುಟುಂಬಗಳಲ್ಲಿ ಹಿಂಸೆ ಹೆಚ್ಚಾಗುತ್ತಿದೆ. ಈ ಸಮಸ್ಯೆಯಿಂದಾಗಿ ಕುಟುಂಬಗಳಲ್ಲಿ ಪುತ್ರ ವ್ಯಾಮೋಹ ಸಹ ಹೆಚ್ಚುತ್ತಿದ್ದು ಭ್ರೂಣ ಹತ್ಯೆಯ ಪ್ರಮಾಣ ಇಮ್ಮಡಿಯಾಗುತ್ತಿದೆ. ಕಳೆದ ಎರಡು ದಶಕಗಳಲ್ಲಿ 2 ಮಿಲಿಯನ್ ಹೆಣ್ಣುಮಕ್ಕಳು ಕಾಣೆಯಾಗಿದ್ದಾರೆ.

ಹಿಂದೆ ಚಾಲ್ತಿಯಲ್ಲಿದ್ದ ಸ್ತ್ರೀಧನದ ಪರಿಕಲ್ಪನೆ ಕ್ರಮೇಣ ಮರೆಯಾಗಿ ಆ ಜಾಗವನ್ನು ವರದಕ್ಷಿಣೆ ಆಕ್ರಮಿಸಿಕೊಂಡಿದೆ. ತಾಯಿಯಿಂದ ಮಗಳಿಗೆ ನಗದು ರೂಪದಲ್ಲಿ ಭೂಮಿ ಅಥವಾ ಒಡವೆಗಳನ್ನು ನೀಡಲಾಗುತ್ತಿತ್ತು. ಸ್ತ್ರೀಧನ ಸಂಪೂರ್ಣವಾಗಿ ಆಕೆಯ ಸೊತ್ತಾಗಿತ್ತು, ಇದನ್ನು ಕುಟುಂಬದ ಬೇರೆ ಯಾವ ಸದಸ್ಯರೂ ಬಳಸಿಕೊಳ್ಳಲು ಸಾಧ್ಯವಿರಲಿಲ್ಲ. ಸ್ತ್ರೀಧನದಿಂದಾಗಿ ಆಕೆಗೆ ಕುಟುಂಬದಲ್ಲಿ ತಕ್ಕಮಟ್ಟಿನ ಗೌರವ ಮರ್ಯಾದೆಯು ಸಿಗುತ್ತಿತ್ತು.

ವರದಕ್ಷಿಣೆಯ ಹಣ, ಆಕೆಗೆ ನೀಡಲಾದ ವಸ್ತುಗಳ, ಆಕೆ ಧರಿಸಿರುವ ಒಡವೆಗಳ ಮೇಲೂ ಸಹ ಆಕೆಗೆ ಯಾವುದೇ ನಿಯಂತ್ರಣವಿರುವುದಿಲ್ಲ. ಅದು ಸಂಪೂರ್ಣವಾಗಿ ಆಕೆಯ ಗಂಡನ ಮನೆಯವರ ಸೊತ್ತು. ವರದಕ್ಷಿಣೆ ನೀಡುವುದು ಕಾನೂನಿನನ್ವಯ ಅಪರಾಧವಾದುದರಿಂದ ಕಾನೂನಿನಿಂದ ನುಣುಚಿಕೊಳ್ಳಲು ಹೆಣ್ಣಿನ ಕಡೆಯವರು ಒಳದಾರಿಗಳನ್ನು ಹುಡುಕುತ್ತಾರೆ. ವರದಕ್ಷಿಣೆ ಕೊಡದಿದ್ದರೆ ಮಗಳು ಮದುವೆಯಾಗದೆ ಎಲ್ಲಿ ಮನೆಯಲ್ಲಿ ಉಳಿದುಬಿಡುತ್ತಾಳೊ ಎಂಬ ಕಾರಣಕ್ಕೆ ವರದಕ್ಷಿಣೆಯನ್ನು ಗುಟ್ಟಾಗಿ ನೀಡುತ್ತಾರೆ. ಮದುವೆಯ ಸಂದರ್ಭದಲ್ಲಿ ನೀಡಿರುವ ವಸ್ತುಗಳು ಹಾಗೂ ಅವುಗಳ ಬೆಲೆ. ಇತ್ಯಾದಿಗಳನ್ನು ಪಟ್ಟಿ ಮಾಡುವುದಿಲ್ಲ. ನೀಡಿರುವುದಕ್ಕೆ ಸರಿಯಾದ ದಾಖಲೆಗಳಿರುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಗಂಡನ ಮನೆಯವರು ಆಕೆಗೆ ನೀಡಿರುವ ಒಡವೆಗಳನ್ನು ಮಾರಿಯೋ, ಅಡವಿಟ್ಟೊ ಕಳೆದುಬಿಡುತ್ತಾರೆ. ವಿವಾಹ ಮುರಿದ ಅಥವಾ ಹುಡುಗಿ ಸತ್ತು ಹೋದ ಸಂದರ್ಭದಲ್ಲಿ ಆಕೆಯ ವಸ್ತುಗಳನ್ನು ಪೂರ್ಣವಾಗಿ ಪಡೆಯುವಲ್ಲಿ ಹೆಣ್ಣಿನ ಕಡೆಯವರು ವಿಫಲರಾಗುತ್ತಾರೆ. ಮಗಳನ್ನು ಕಳೆದುಕೊಂಡ ದುಃಖ ಒಂದು ಕಡೆಯಾದರೆ, ಪೊಲೀಸ್ ಸ್ಟೇಷನ್, ನ್ಯಾಯಾಲಯದ ಓಡಾಟಕ್ಕೆ ಹಣ ವೆಚ್ಚ ಮಾಡುವುದು ಮೊದಲಾದ ಕಷ್ಟಗಳಿಂದ ತಂದೆ ತಾಯಿ ಬಳಲಿ ಬೆಂಡಾಗುತ್ತಾರೆ. ಮಗಳೆ ಹೋದ ಮೇಲೆ ಕೇಸು ನಡೆಸಿ ಪ್ರಯೋಜನವೇನು ಎಂಬ ಹತಾಶೆಯಾದ ರಾಜಿ ಮಾಡಿಕೊಂಡು ಕೇಸು ವಾಪಸ್ ಪಡೆಯುತ್ತಾರೆ.

ವರದಕ್ಷಿಣೆ ನಿಷೇಧ ಕಾಯಿದೆ ಇಂದು ಪ್ರಬಲ ಅಸ್ತ್ರವಾಗಿದೆ. 498ಎ ಜಾಮೀನುರಹಿತವಾದ ಕ್ರಿಮಿನಲ್ ಅಪರಾಧವಾಗಿದೆ. ಸೀಮೆಎಣ್ಣೆ ಹಾಕಿ ಸುಡುವುದು, ಹೊಡೆದು ಸಾಯಿಸಿ ನಂತರ ಆತ್ಮಹತ್ಯೆ ಎಂದು, ಸ್ಟೌವ್ ಸಿಡಿದು ಆಕಸ್ಮಿಕ ಸಾವೆಂದು ಬಿಂಬಿಸುವುದು, ವರದಕ್ಷಿಣೆಗಾಗಿ ಅಮಾನುಷ ಹಿಂಸೆ ನೀಡುವುದು, ಇವೆಲ್ಲವೂ ನಾಲ್ಕುಗೋಡೆಗಳ ಒಳಗೆ ನಡೆಯುವುದರಿಂದ ಸಾಕ್ಷ್ಯಾಧಾರಗಳು ದೊರೆಯುವುದಿಲ್ಲ. 498ಎ ಅಡಿಯಲ್ಲಿ ಆರೋಪಿಗಳನ್ನು ಬಂಧಿಸಲು ಸಾಧ್ಯವಾಗುತ್ತದೆ. ಆದರೆ ಕೆಲವರು ಮೊದಲೇ ನಿರೀಕ್ಷಣಾ ಜಾಮೀನು ಪಡೆದ ನಿದರ್ಶನಗಳೂ ಸಹ ಇವೆ. 498ಎ ಯ ದುರ್ಬಳಕೆ ಆಗುತ್ತಿದೆಯೆಂದು ಕೆಲವು ಪುರುಷ ಸಂಘಟನೆಗಳು ಧ್ವನಿ ಎತ್ತಿದ ಘಟನೆಗಳು ಅಲ್ಲಲ್ಲಿ ನಡೆದಿವೆ. ಕುಟುಂಬದಲ್ಲಿ ಮಹಿಳೆಯ ಮೇಲೆ ನಡೆದ ಅಮಾನುಷ ಹಿಂಸೆ, ಕ್ರೌರ್ಯವನ್ನು 498ಎ ವ್ಯಾಪ್ತಿಯಲ್ಲಿ ತಂದಿರುವ ಉದಾಹರಣೆಗಳು ಸಹ ಇವೆ. ಇತ್ತೀಚೆಗೆ ಜಾರಿಗೆ ತರಲಾದ ಕೌಟುಂಬಿಕ ದೌರ್ಜನ್ಯ ವಿರೋಧಿ ಕಾನೂನು ಮಹಿಳೆಗೆ ಗಂಡನ ಮನೆಯಲ್ಲಿ ಹಿಂಸೆಯ ವಿರುದ್ಧ ರಕ್ಷಣೆ ಹಾಗೂ ಗೌರವದಿಂದ ಬದುಕುವ ಹಕ್ಕನ್ನು ನೀಡುತ್ತದೆ. ಇದು ಕುಟುಂಬದಲ್ಲಿ ಪುರುಷನ ಅಧಿಕಾರಕ್ಕೆ ಒಂದು ದೊಡ್ಡ ಸವಾಲಾಗಿದೆ.

ವರದಕ್ಷಿಣೆಯ ಸಮಸ್ಯೆಗೆ ಸರಳವಾದ ಪರಿಹಾರವಿಲ್ಲ. ಇದು ಪ್ರಸ್ತುತ ಸಮಾಜದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ನೆಲೆಗಟ್ಟಿನ ಮೇಲೆ ನಿಂತಿರುವುದರಿಂದ ಸಮಸ್ಯೆಯನ್ನು ಪ್ರತ್ಯೇಕಿಸಿ ಪರಿಹಾರ ಹುಡುಕಲು ಸಾಧ್ಯವಿಲ್ಲ. ಬದಲಾವಣೆಯಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಯ ಅಸ್ತಿತ್ವದ ಬಗ್ಗೆ ಮೌಲಿಕವಾದ, ಮೂಲಭೂತವಾದ ಬದಲಾವಣೆಯಾಗಬೇಕಿದೆ. ಕುಟುಂಬ ಹಾಗೂ ಸಮಾಜದಲ್ಲಿ ಅವಳ ದುಡಿಮೆಗೆ ಬೆಲೆ ಕಟ್ಟಬೇಕಾಗುತ್ತದೆ. ಅವಳ ಕೊಡುಗೆಗೆ ಮನ್ನಣೆ ನೀಡಬೇಕಾಗುತ್ತದೆ. ವರದಕ್ಷಿಣೆಯ ಬದಲಾಗಿ ಅವಳಿಗೆ ಆಸ್ತಿಯ ಹಕ್ಕನ್ನು ನೀಡಬೇಕಾಗುತ್ತದೆ. ಆಡಂಬರದ ಮದುವೆಗೆ ಬದಲಾಗಿ ಸರಳ 'ವಿವಾಹದ' ಬಗ್ಗೆ ಯೋಚಿಸಬೇಕಾಗಿದೆ. ಮಹಿಳೆ ಆಕೆಯ ಬದುಕಿನ ಮೇಲೆ ಆಕೆ ನಿಯಂತ್ರಣ ಹೊಂದುವಂತಹ ಪೂರಕ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕಾಗುತ್ತದೆ. ಇದು ನಮ್ಮ ನಿಮ್ಮೆಲ್ಲರ ಕರ್ತವ್ಯವೂ ಆಗಿದೆ.

- **ರಂಗಭೂಮಿ ಕಲಾವಿದೆ ಉಮಾಶ್ರೀ ಅವರನ್ನು ಈ ಸಾಲಿನ ಚಲನಚಿತ್ರ ರಾಷ್ಟ್ರಪ್ರಶಸ್ತಿ ಸಮಿತಿಯು ಶ್ರೇಷ್ಠ ನಟಿ ಎಂದು ಗುರುತಿಸಿ ಗೌರವಿಸಿದೆ. ಆಕೆಗೆ ಮಾನಸ ಬಳಗದ ಅಭಿನಂದನೆಗಳು.**

ಒಳಗಿನ ಪುಟಗಳಲ್ಲಿ....

(ಭಾರತದಲ್ಲಿ) ಮಹಿಳಾ ಅಧ್ಯಯನಗಳ ಮೊದಲ ಸ್ಥಾಪಕಿ ನೀರಾ ದೇಸಾಯಿ

ಡಾ॥ ಬಿ.ಎನ್. ಸುಮಿತ್ರಾಬಾಯಿ

ನೀರಾ ದೇಸಾಯಿ ಗುಜರಾತಿನ ಒಂದು ಮಧ್ಯಮ ವರ್ಗದ ದಂಪತಿಗಳ ಮಗಳಾಗಿ 1925ರಲ್ಲಿ ಜನಿಸಿದರು. ಅವರ ತಂದೆ ತಾಯಿಗಳು ದೇಶದ ಸ್ವಾತಂತ್ರ್ಯ ಹೋರಾಟದ ಪ್ರಬಲ ಬೆಂಬಲಿಗರಾಗಿದ್ದವರು. ಸಹಜವಾಗಿ ಬಾಲಕಿ ನೀರಾ ಕೂಡ ಈ ಮನೋಧರ್ಮವನ್ನು ಬೆಳೆಸಿಕೊಂಡಿರಬೇಕು. ಮಹಾತ್ಮಾಗಾಂಧಿಯವರು ರೂಪಿಸಿದ್ದ 'ವಾನರಸೇನೆ' (Monkey Brigade) ಸ್ವಾತಂತ್ರ್ಯ ಚಳವಳಿಯಲ್ಲಿ ಮಕ್ಕಳನ್ನೂ ಒಳಗೊಳ್ಳುವಂಥದ್ದಾಗಿತ್ತು. ಶಾಲಾ ಬಾಲಕಿ ನೀರಾ, ತಮ್ಮ ಗೆಳತಿಯರಾದ ಮಂದಾಕಿನಿ ಮತ್ತು ಉಷಾ ಮೆಹತಾ (ಈಕೆ ಮುಂದೆ ಸ್ವಾತಂತ್ರ್ಯ ಹೋರಾಟಕ್ಕಾಗಿಯೇ voice of India ಎಂಬ ರೇಡಿಯೋ ಆರಂಭಿಸಿದ್ದರು) ಅವರೊಂದಿಗೆ ಆ 'ವಾನರಸೇನೆ'ಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಮುಂದೆ ಕಾಲೇಜು ವಿದ್ಯಾರ್ಥಿನಿಯಾಗಿ 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಕ್ರಿಯಾಶೀಲ ತೊಡಗುವಿಕೆಯಿಂದಾಗಿ 'ನೀರಾಬೆನ್' ಎಂದು ಜನರ ಮಧ್ಯೆ ಪ್ರಸಿದ್ಧರಾದರು. ಆಗ ಹಲವಾರು ಬಾರಿ ಜೈಲು ವಾಸವನ್ನೂ ಅನುಭವಿಸಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ ಇವರೂ ಸ್ನಾತಕೋತ್ತರ ಪದವಿ ಶಿಕ್ಷಣ ಪೂರೈಸಿದರು, ಸಮಾಜಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ಆ ವೇಳೆಗಾಗಲೆ ಸಮಾಜವಾದಿ ಸಿದ್ಧಾಂತದ ಕಡೆಗೆ ಅವರು ಆಕರ್ಷಿತರಾಗಿದ್ದರು. ಭಾರತದಲ್ಲಿ ಮಹಿಳೆಯರ ಪಾತ್ರದ ಆರ್ಥಿಕ, ಮಾನವಶಾಸ್ತ್ರೀಯ ಹಾಗೂ ಚಾರಿತ್ರಿಕ ಆಯಾಮಗಳನ್ನು ತಮ್ಮ ಮಹಾಪ್ರಬಂಧದಲ್ಲಿ ಚರ್ಚಿಸಿದ್ದರು. ಅಂತರಶಿಸ್ತೀಯ ಅಧ್ಯಯನವಾಗಿರುವ ಅವರ ಈ ಪಿಎಚ್.ಡಿ. ಮಹಾಪ್ರಬಂಧ 1952ರಲ್ಲಿ 'Women In Modern India' ಎಂಬ ಗ್ರಂಥವಾಗಿ ಪ್ರಕಟವಾಗಿದೆ. ವೇದಗಳ ಕಾಲದಿಂದ ಹಿಡಿದು ಸ್ವಾತಂತ್ರ್ಯ ದೊರೆತ ಆರಂಭದ ಅವಧಿಯವರೆಗಿನ ಭಾರತೀಯ ಮಹಿಳೆಯರ ಸ್ಥಾನಮಾನಗಳನ್ನು ಚಾರಿತ್ರಿಕವಾಗಿ ಅರ್ಥಮಾಡಿಕೊಳ್ಳಲು ಬಹುಮಹತ್ವದ ಕಾಣಿಕೆ ಇದೆಂದು ವಿಮರ್ಶಕರಿಂದ ಮುಕ್ತ ಪ್ರಶಂಸೆ ದೊರೆತಿದೆ. ಆ ಗ್ರಂಥಕ್ಕೆ ಮುನ್ನುಡಿ ಬರೆಯುತ್ತಾ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ನೀರಾ ಅವರ ವಿಶ್ಲೇಷಣೆಯನ್ನು 'Feminist' ದೃಷ್ಟಿಕೋನವುಳ್ಳದ್ದು ಎಂದು ಕರೆದಿದ್ದರು. 1950ರ ದಶಕದಷ್ಟು ಹಿಂದೆಯೇ ಕಮಲಾದೇವಿ ಏನನ್ನು ಆ ಕೃತಿಯಲ್ಲಿ ಗುರುತಿಸಿದ್ದರೋ ಆ ಮಾತಿಗೆ 1970ರ ದಶಕದ ಅನಂತರದಲ್ಲಿ ಹುಟ್ಟಿದ ಮಹಿಳಾ ಹಕ್ಕುಗಳ ಚಳವಳಿಯೇ ಸಮರ್ಥನೆ ನೀಡಿತು. ನೀರಾ ದೇಸಾಯಿ ತಮ್ಮ ಕಾಲಕ್ಕಿಂತ ಬಹಳ ಮುಂದಿದ್ದವರು.

1950ರ ದಶಕದ ಉತ್ತರಾರ್ಧದಲ್ಲಿ ನೀರಾ ದೇಸಾಯಿ ಸಮಾಜಶಾಸ್ತ್ರದ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕಿಯಾಗಿ SNDT ವಿಶ್ವವಿದ್ಯಾಲಯವನ್ನು ಸೇರಿದರು. ಅಲ್ಲಿಂದ ಮುಂದೆ ಅವರೆಂದೂ ಹಿಂತಿರುಗಿ ನೋಡಲಿಲ್ಲ. ಆ ವಿಭಾಗದ ಮುಖ್ಯಸ್ಥರಾಗಿ 'ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ'ದ ಸ್ಥಾಪಕ ನಿರ್ದೇಶಕರಾಗಿ, 'ಗ್ರಾಮೀಣ ಅಭಿವೃದ್ಧಿ ಕೇಂದ್ರ'ದ ಸ್ಥಾಪಕ ನಿರ್ದೇಶಕರಾಗಿ, ವಿಶ್ವವಿದ್ಯಾಲಯದ ಕುಲಪತಿಗಳ ಕಾರ್ಯಾಧಿಕಾರಿಯಾಗಿ (1970–84) ಹೀಗೆ ಅನೇಕ ಬಗೆಯ ನಿರ್ಣಯಾತ್ಮಕ ಹುದ್ದೆಗಳನ್ನು ಅವರು ನಿರ್ವಹಿಸಿದರು. ತಮ್ಮ ಔದ್ಯೋಗಿಕ ಮುನ್ನಡೆಯ ಶಿಖರಕ್ಕೇರಿದಾಗಲೂ ವಿನಯವನ್ನು ಕಾಯ್ದುಕೊಂಡಿದ್ದ ನೀರಾ ಎಲ್ಲರಿಗೂ ಒಬ್ಬ ಆತ್ಮೀಯರಾದ, ಮೃದು ಹೃದಯದ, ಎಲ್ಲರಿಗೂ ಸ್ಪಂದಿಸಬಲ್ಲ ಅಪರೂಪದ ವ್ಯಕ್ತಿಯಾಗಿಯೇ ಉಳಿದಿದ್ದರು.



ಭಾರತದಲ್ಲಿ ಮಹಿಳಾ ಚಳವಳಿ ಮತ್ತು ಮಹಿಳಾ ಅಧ್ಯಯನ – ಇವೆರಡರ ವೈಲಕ್ಷಣ್ಯಗಳನ್ನೂ ಒಟ್ಟುಗೂಡಿಸಿದ ಮಾದರಿಯ ಮಹಿಳಾ ಅಧ್ಯಯನಗಳು ಮೊಟ್ಟಮೊದಲು ಆರಂಭವಾದದ್ದು SNDT ವಿಶ್ವವಿದ್ಯಾಲಯದಲ್ಲಿ. ಇಂತಹ ಮಹಿಳಾ ಅಧ್ಯಯನ ಮತ್ತು ಸಂಶೋಧನೆಗಾಗಿ ಮೀಸಲಾದ ಕೇಂದ್ರವನ್ನು ಸ್ಥಾಪಿಸಿದ್ದಾರೆ, ಆ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ, ಮುಖ್ಯಸ್ಥೆಯಾಗಿದ್ದ ಡಾ॥ ನೀರಾ ದೇಸಾಯಿ. ಇದೇ 2009ರ ಜೂನ್ 25ರಂದು ನೀರಾ ದೇಸಾಯಿ ದಿವಂಗತರಾದರು. ಅವರ ವ್ಯಕ್ತಿತ್ವ ಮತ್ತು ಸಾಧನೆಗಳ ಒಂದು ಸ್ಮರಣೆಯಾಗಿರುವ ಈ ಲೇಖನಕ್ಕೆ ಆಧಾರ ಇಂಗ್ಲಿಷ್ ಮೂಲದಲ್ಲಿ ಡಾ॥ ವಿಭೂತಿ ಪಟೇಲ್ ಅವರು ರಚಿಸಿದ ಒಂದು ಶ್ರದ್ಧಾಂಜಲಿ ಲೇಖನ. [ವಿಭೂತಿ ಪಟೇಲ್ ಕಳೆದ ಮೂರು ದಶಕಗಳಿಂದ ಮಹಿಳಾ ಹಕ್ಕುಗಳ ಹೋರಾಟದಲ್ಲಿ ತೊಡಗಿರುವವರು. ಪ್ರಸ್ತುತ SNDT ವಿಶ್ವವಿದ್ಯಾಲಯದಲ್ಲಿ ಕೆಲಸಮಾಡುತ್ತಿದ್ದಾರೆ.]

ಸಂಶೋಧನಾ ಬರಹಗಳು: 12ನೆಯ ಶತಮಾನದ ಭಕ್ತಿ ಚಳವಳಿ, 17ನೆಯ ಶತಮಾನದ ಸಾಮಾಜಿಕ ಚಳವಳಿಗಳನ್ನು ಕುರಿತು ನೀರಾ ಅವರು ಕೈಗೊಂಡ ಸಂಶೋಧನೆಗಳು ಆ ಚಳವಳಿಗಳೊಳಗಿನ ವಿಮೋಚನಕಾರಿ ಲಕ್ಷಣಗಳನ್ನು, ಅವುಗಳ ತಾತ್ವಿಕ ಚರ್ಚೆಗಳನ್ನು, ಆ ಭಕ್ತಿಯುಗದ ಕಾವ್ಯಗಳ ವೈವಿಧ್ಯಪೂರ್ಣ ಸಂಕೇತಾರ್ಥಗಳನ್ನು ಅಧ್ಯಯನ ಮಾಡಲು ಮುಂದಿನ ಪೀಳಿಗೆಯ ಅನೇಕ ವಿದ್ವಾಂಸರಿಗೆ ಪ್ರೇರಣೆ ನೀಡಿದವು. 1974ರಲ್ಲಿ ಹೊರಬಂದ Towards Equality ಎಂಬ ವರದಿ, 1988ರಲ್ಲಿ ಸಲ್ಲಿಸಲಾದ 'ಶ್ರಮಶಕ್ತಿ' ಕುರಿತ ವರದಿ ಹಾಗೂ 1988–2000ರ ಅವಧಿಯ ಸುದೀರ್ಘ ಅಧ್ಯಯನದ ಫಲವಾದ 'The National Perspective for Women' ಎಂಬ ವರದಿಯನ್ನು ಸಿದ್ಧಪಡಿಸುವಲ್ಲಿ ನೀರಾ ದೇಸಾಯಿ ಅವರು ಬಹು ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರು. 1988ರಲ್ಲಿ ಮೈತ್ರೇಯಿ ಕೃಷ್ಣರಾಜ್ ಅವರ ಜೊತೆಯಲ್ಲಿ ನೀರಾದೇಸಾಯಿ ಸಂಪಾದಿಸಿರುವ `Women and Society in India' ಎಂಬ ಗ್ರಂಥವು ಅಕಾಡೆಮಿಕ್ ವಲಯಗಳಲ್ಲಿ ಮಹಿಳಾ ಅಧ್ಯಯನವನ್ನು ಸಂಸ್ಥೀಕರಿಸಲು ಬಹಳ ನೆರವಾಗಿದೆ. ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಭಾಷಾಧ್ಯಯನಗಳಲ್ಲಿ ಮಹಿಳಾ ದೃಷ್ಟಿಕೋನದಿಂದ ಶೈಕ್ಷಣಿಕ ವಿಷಯಗಳನ್ನು ರೂಪಿಸುವುದಕ್ಕೂ ಪಠ್ಯಪುಸ್ತಕಗಳನ್ನು ಸಿದ್ಧಪಡಿಸುವುದಕ್ಕೂ ಮೂಲ ಶಿಕ್ಷಣದ ಕೋರ್ಸ್‌ಗಳನ್ನು ರೂಪಿಸಲಿಕ್ಕೂ ಅದು ಅಳತೆ ಮಟ್ಟವೊಂದನ್ನು ಕಟ್ಟಿಕೊಡುತ್ತದೆ. ನೀರಾ ಅವರ ಮತ್ತೊಂದು ಸಂಪಾದಿತ ಗ್ರಂಥ `Women in Indian Society ' ಉಷಾ ಮೆಹತಾ ಅವರೊಂದಿಗೆ ಸಿದ್ಧಪಡಿಸಿದ್ದುದಾಗಿದ್ದು ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ ಅದನ್ನು 2001ರಲ್ಲಿ ಪ್ರಕಟಿಸಿತು. ಮಹಿಳಾ ಸಬಲೀಕರಣದ ಸಂದರ್ಭದಲ್ಲಿ ಆ ವಿಷಯವನ್ನು ಜನಪ್ರಿಯಗೊಳಿಸಿದ ಮತ್ತೊಂದು ಮಹತ್ವದ ಕೃತಿ ಇದಾಗಿದೆ.

1990ರ ದಶಕದಲ್ಲಿ ಗುಣಾತ್ಮಕ ಸಂಶೋಧನಾ ವಿಧಾನವನ್ನು ಅನುಸರಿಸಿ ನೀರಾ ಅವರು ಪಶ್ಚಿಮದ 100 ಜನ ಸ್ತ್ರೀವಾದಿಗಳ ವ್ಯಕ್ತಿಚಿತ್ರಗಳನ್ನು ರಚಿಸುವ ಕೆಲಸಮಾಡಿದರು. ಅವರ 17 ವರ್ಷಗಳ ಸುದೀರ್ಘ ಪರಿಶ್ರಮದ ಫಲವಾಗಿ "Feminism as Experience: Thoughts and Narratives" ಎಂಬ ಘನವಾದ ಸಂಪುಟವೊಂದು ಹೊರಬರುವುದು ಸಾಧ್ಯವಾಯಿತು. 2007ರಲ್ಲಿ SPARROW [Sound and Picture Archive for Research on Women) ಸಂಸ್ಥೆಯಿಂದ ಈ ಸಂಪುಟವು ಪ್ರಕಟವಾಯಿತು. ಲಿಂಗತ್ವ ಮತ್ತು ಅಧಿಕಾರಿಗಳ ಸಾಮಾಜಿಕ ಸಂರಚನೆಗಳ ತಾತ್ವಿಕತೆಗಳನ್ನು ಕುರಿತಂತೆ ಆಳವಾದ ಕಳಕಳಿಯುಳ್ಳ ಸಂಶೋಧನೆ ಹಾಗೂ ಅಧ್ಯಯನ ಕೃತಿಗಳನ್ನು ಇಂಗ್ಲಿಷ್ ಮತ್ತು ಗುಜರಾತಿ ಭಾಷೆಗಳಲ್ಲಿ ನೀರಾ ದೇಸಾಯಿ ಪ್ರಕಟಿಸಿದ್ದಾರೆ. ಹಳ್ಳಿಗಳ ಬಡ, ನಿರಕ್ಷರಿ ಹೆಣ್ಣುಮಕ್ಕಳಿಗೆ ಶಿಕ್ಷಣ, ತರಬೇತಿ ನೀಡಬಲ್ಲ ಕೈಪಿಡಿಗಳನ್ನು ಸಿದ್ಧಪಡಿಸಲು ಎಷ್ಟೋ ಜನ ಕಿರಿಯ ವಿದ್ವಾಂಸರೊಂದಿಗೂ ನೀರಾ ಕೈಜೋಡಿಸುತ್ತಿದ್ದರು. ಇಂದು ಮಹಿಳಾ ಅಧ್ಯಯನದಲ್ಲಿ ಮಹತ್ತರ ಕಾಣಿಕೆ ಸಲ್ಲಿಸುತ್ತಿರುವ SNDT ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಈಗಿನ ನಿರ್ದೇಶಕರಾದ ವೀಣಾ ಪೂಣಚ್ಚ, SPARROW ದ ದಿವ್ಯಾ ಪಾಂಡೆ ಅವರುಗಳಿಗೆ ನೀರಾ ಒಬ್ಬ ಗೆಳತಿ, ಮಾರ್ಗದರ್ಶಕಿ, ತತ್ತ್ವಚಿಂತಕಿ ಎಲ್ಲವೂ ಆಗಿದ್ದರು. SPARROWದ ನಿರ್ದೇಶಕಿಯಾದ ಸಿ.ಎಸ್.ಲಕ್ಷ್ಮಿಯವರು ಸ್ತ್ರೀವಾದಕ್ಕೂ, ತಮಿಳು ಸಾಹಿತ್ಯಕ್ಕೂ ನೀಡಿರುವ ಕಾಣಿಕೆಗಳನ್ನು ನೀರಾ ದೇಸಾಯಿ ಸದಾ ಪ್ರಶಂಸಿಸುತ್ತಿದ್ದರು.

ಸಾಮಾಜಿಕ ಚಳವಳಿಗಳೊಂದಿಗಿನ ಬದ್ಧತೆಯ ಸಂಬಂಧ: ತಮ್ಮನ್ನು ಒಬ್ಬ ಪ್ರಗತಿಪರ, ಸೆಕ್ಯುಲರ್, ಪ್ರಜಾಪ್ರಭುತ್ವವಾದಿಗಳ ಹಾಗೂ ಸಾಮೂಹಿಕ ಚಳಿವಳಿಗಾರರ ಸಹಪಯಣಿಗಳೆಂದೇ ನೀರಾ ದೇಸಾಯಿ ಪರಿಗಣಿಸಿಕೊಂಡಿದ್ದರು. ನುಡಿದಂತೆಯೇ ನಡೆಯುವರಾಗಿದ್ದರು. ಚಳವಳಿಗಾರ ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಿಸಲು ಹಾಗೂ ಜನತಾಂತ್ರಿಕ ಹಕ್ಕುಗಳನ್ನು ದಮನಗೊಳಿಸುವ ನಿರಂಕುಶ ಕಾನೂನುಗಳನ್ನು ವಿರೋಧಿಸುವಂಥ ಪ್ರಚಾರಕಾರ್ಯ ನಡೆಸಲು ಯಾವಾಗಲೂ ಅವರ ಬೆಂಬಲ ಇದ್ದೇ ಇರುತ್ತಿತ್ತು. ನರ್ಮದಾ ಬಚಾವೋ ಆಂದೋಲನ, ಕಷ್ಟಕಾರಿ ಸಂಘಟನೆ ಹಾಗೆಯೇ ಮುಂಬೈ, ದೆಹಲಿ, ಹೈದರಾಬಾದ್, ವಡೋದರ, ವಲ್ಸಾದ್ ಮತ್ತು ಅಹಮದಾಬಾದ್‌ಗಳಲ್ಲಿ ಮಹಿಳಾ ಹಕ್ಕುಗಳಿಗಾಗಿ ಹೋರಾಡುವ ಗುಂಪುಗಳಿಗೆ ಅವರು ನಿರಂತರ ಬೆಂಬಲವಿತ್ತಿದ್ದರು. ಕ್ರಾಂತಿಕಾರಿ ಕವಿ ಹಾಗೂ ಗಾಯಕ ಗದ್ದರ್ ಅವರ ಹಾಡುಗಳು ನೀರಾ ಅವರಿಗೆ ಎಷ್ಟು ಪ್ರಿಯವಾಗಿದ್ದವು ಎಂದರೆ ಸೂರತ್ ಅಥವಾ ಮುಂಬೈನಲ್ಲಿ ಆತ ಹಾಡುತ್ತಾರೆಂದ ಯಾವ ಸಭೆಯನ್ನೂ ತಪ್ಪಿಸದೆ ಪಾಲ್ಗೊಳ್ಳುತ್ತಿದ್ದರು. ಅಕಾಡೆಮಿಕ್ ಸಭೆಗಳಲ್ಲಿ ಇಲ್ಲವೆ ಸಮ್ಮೇಳನಗಳಲ್ಲಿ ಯಾರಾದರೂ ಸಮೂಹ ಚಳವಳಿಗಳ ಕಾಳಜಿಗಳನ್ನು ಕ್ಷುಲ್ಲಕವಾಗಿಸಲು ಯತ್ನಿಸಿದ್ದಾದರೆ ನೀರಾಬೆನ್ ಥಟ್ಟನೆ ಎದ್ದುನಿಂತು ತೀಕ್ಷ್ಣವಾಗಿ ಪ್ರತಿಭಟಿಸುತ್ತಿದ್ದರು. ಬೇರೆಯಂತೆ ತುಂಬ ವಿನಯವಾಗಿರುತ್ತಿದ್ದ ನೀರಾಬೆನ್ ಈಕೆಯೆ? ಎಂಬ ಆಶ್ಚರ್ಯ ಹುಟ್ಟಿಸುತ್ತಿದ್ದರು. ಮಹಿಳಾ ಹಕ್ಕುಗಳ ಗುಂಪುಗಳು ಕಷ್ಟಕರವಾದ ಪರಿಸರಗಳಲ್ಲಿ, ಕಡಿಮೆ ಬಜೆಟ್‌ಗಳ ಕಾರ್ಯಕ್ರಮಗಳನ್ನು ಹಮ್ಮಿಕೊಂಡಾಗ, ಅಲ್ಲಿ ಭಾಗವಹಿಸಲು ಹೋದಾಗ ನೀರಾ ದೇಸಾಯಿ ಯಾವುದಕ್ಕೂ ಗೊಣಗಾಡುವುದನ್ನಾಗಲೀ, ಇನ್ನೂ ಹೆಚ್ಚಿನ ಅನುಕೂಲಗಳಿಗಾಗಿ ಸಂಘಟಕರ ಮೇಲೆ ಒತ್ತಡ ತರುವುದನ್ನಾಗಲೀ ಯಾರೂ ಕೇಳಿದ್ದಿಲ್ಲ. ತಾವು ಎಲ್ಲೇ ಇರಲಿ, ಅಂತರರಾಷ್ಟ್ರೀಯ ಮಹಿಳಾದಿನ ಮಾರ್ಚ್ 8ರಂದು ಮಹಿಳಾ ಸಂಘಟನೆಗಳು ಒಟ್ಟಾಗಿ ನಡೆಸುವ ರ್‍ಯಾಲಿಯಲ್ಲಿ ಪಾಲ್ಗೊಳ್ಳುವುದನ್ನು ತಪ್ಪಿಸುತ್ತಿರಲಿಲ್ಲ. ಮಹಿಳೆಯರು, ಬುಡಕಟ್ಟು ಜನರು, ದಲಿತರು ಮತ್ತು ಶ್ರಮಿಕ ವರ್ಗದವರ ಹಕ್ಕುಗಳಿಗಾಗಿ ಚಳವಳಿ ನಡೆಸುವವರು ನೀರಾ ಅವರಿಂದ ಹಸನ್ಮುಖದ ಸ್ವಾಗತ,



ಊಟೋಪಚಾರ ಹಾಗೂ ನೈತಿಕ ಬೆಂಬಲಗಳನ್ನು ಯಾವತ್ತೂ ನಿರೀಕ್ಷಿಸಬಹುದಿತ್ತು.

ಸಂಸ್ಥೆಗಳ ನಿರ್ಮಾಪಕಿ : SNDT ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ಮತ್ತು ಸಂಶೋಧನೆಗೆ ಮೀಸಲಾದ ಒಂದು ಕೇಂದ್ರವನ್ನು 1974ರಲ್ಲಿ ನೀರಾದೇಸಾಯಿ ಹುಟ್ಟುಹಾಕಿದ್ದು, ಇಂದು ಅಂತಹುದೇ ಅನೇಕ ಸಂಶೋಧನಾ ಕೇಂದ್ರಗಳು ಬೇರೆ ಬೇರೆ ಕಡೆಗಳಲ್ಲೂ ಸ್ಥಾಪಿತವಾಗುವುದಕ್ಕೆ ಒಂದು ಮಾದರಿಯಾಯಿತು. ಯುಜಿಸಿ ಈ ಸಂಸ್ಥೆಯನ್ನು ಗೌರವಾರ್ಹ ಮಾದರಿ ಸಂಶೋಧನಾ ಸಂಸ್ಥೆ ಎಂದು ಎತ್ತಿಹಿಡಿಯಿತು. SPARROW ಸಂಸ್ಥೆಯನ್ನು ಸ್ಥಾಪಿಸಲು 1990ರಲ್ಲಿ ನಡೆಯುತ್ತಿದ್ದ ಪ್ರಯತ್ನಗಳಿಗೆ ನೀರಾ ಅವರ ಸಂಪೂರ್ಣ ಬೆಂಬಲವಿತ್ತು. ಮುಂದೆ ಮುಂಬೈ ನಗರದಲ್ಲಿ India Centre for Human Rights and Law ಸಂಸ್ಥೆಯ ಒಬ್ಬ ಪ್ರಮುಖ ಸದಸ್ಯೆಯಾಗಿಯೂ ನೀರಾ ಕೆಲಸಮಾಡಿದರು. ವಲ್ಸಾದ್‌ನಲ್ಲಿರುವ 'ಅಸ್ತಿತ್ವ'

ವಡೋದರದಲ್ಲಿರುವ 'ಸಹಿಯಾರ್' ಸಂಘಟನೆಗಳೊಂದಿಗೆ ಅವರಿಗೆ ನಿಕಟ ಸಂಪರ್ಕವಿತ್ತು. 1990ರ ದಶಕದಲ್ಲಿ ಮುಂಬೈನ Centre for Enquiry into Health and Allied Themes ಎಂಬ ಸಂಸ್ಥೆಯನ್ನು ರೂಪಿಸುವಲ್ಲಿ ಅದರ ಸಲಹಾ ಸಮಿತಿಯ ಸದಸ್ಯೆಯಾಗಿಯೂ ನೀರಾ ಕೆಲಸಮಾಡಿದರು. Indian Association for Women's Studies, The Gujarat Association of Women's Studies ಎಂಬ ಸಂಘಗಳ ಸ್ಥಾಪಕ ಸದಸ್ಯೆಯಾಗಿದ್ದರು. 1981ರಲ್ಲಿ ನೀರಾ ದೇಸಾಯಿಯವರ ನೇತೃತ್ವದಲ್ಲಿ ಮಹಿಳಾ ಅಧ್ಯಯನಗಳ ಬಗ್ಗೆ ಮೊಟ್ಟಮೊದಲ ರಾಷ್ಟ್ರೀಯಮಟ್ಟದ ಸಮ್ಮೇಳನವೊಂದು SNDTಯಲ್ಲಿ ಏರ್ಪಾಡಾಗಿತ್ತು, ಅದರಲ್ಲಿ ಭಾಗವಹಿಸಿದ ಸಂಶೋಧಕರು, ಉಪನ್ಯಾಸಕರು, ವಿದ್ಯಾರ್ಥಿಗಳು, ವಿದ್ವಾಂಸರು ಹಾಗೂ ಆಡಳಿತ ಅಧಿಕಾರಿಗಳೆ ನಿರ್ಣಯ ತೆಗೆದುಕೊಳ್ಳುವ ಮಂದಿ. ಮಹಿಳಾ ಹೋರಾಟಗಾರರಾದಿಯಾಗಿ ಎಲ್ಲರನ್ನೂ ಒಗ್ಗೂಡಿಸುವಂಥ ಒಂದು ಧ್ವನಿಯನ್ನು ಆ ಸಮ್ಮೇಳನವು ಹುಟ್ಟುಹಾಕಿತು. ಪಾಲ್ಗೊಂಡ ಪ್ರತಿಯೊಬ್ಬರೂ ನೀರಾಬೆನ್ ಅವರ ಸರಳತೆ, ಕಠಿಣ ಪರಿಶ್ರಮ, ಸ್ವಯಂ ಸೇವಾ ಮನೋಭಾವ, ಉತ್ಸಾಹಗಳನ್ನು ಮನದುಂಬಿ ಮೆಚ್ಚುವವರೇ. CWDSನ ಪ್ರಮುಖರಾದ ವೀಣಾ ಮಜುಂದಾರ್, ಕುಮುದ್ ಶರ್ಮ ಮತ್ತು ಲತಿಕಾ ಸರ್ಕಾರ್ ಅವರುಗಳೊಂದಿಗೆ ತುಂಬ ಬಲವಾದ ಸ್ನೇಹ ನೀರಾ ಅವರಿಗಿತ್ತು. ಅವರ ಜೊತೆ ನಿಕಟವಾಗಿದ್ದು ಕೆಲಸಮಾಡಿದ ಯಾರಿಗಾದರೂ ಅವರು ಅಪರಿಮಿತ ಜ್ಞಾನದ ನಿಧಿ, ಪ್ರೀತಿ ತೋರಬಲ್ಲ, ಪ್ರತಿಸ್ಪಂದಿಸಬಲ್ಲ, ಅರ್ಥಮಾಡಿಕೊಳ್ಳಬಲ್ಲ, ಮಾರ್ಗದರ್ಶಕಿ ಹಾಗೂ ವಿಶ್ವಸನೀಯ ಮಹಾಮಹಿಳೆ ಎಂಬುದು ಅರಿವಿಗೆ ಬರುತ್ತಿತ್ತು.

CWDS ನ ನಿರ್ದೇಶಕಿ Mary John ನೀರಾ ದೇಸಾಯಿಯವರ ಬಗ್ಗೆ ಹೀಗೆ ಹೇಳುತ್ತಾರೆ: ಅವರ ತಲೆಮಾರಿನವರ ಪೈಕಿ (1950ರಷ್ಟು ಹಿಂದೆಯೆ) ತಾನೊಬ್ಬಳು ಸ್ತ್ರೀವಾದಿ ಎಂದು ಮುಕ್ತವಾಗಿ ಹೇಳಿಕೊಳ್ಳಬಲ್ಲ ಹಾಗೂ ಅದನ್ನೇ ತಮ್ಮ ಚಿಂತನೆಯ ಪ್ರಧಾನ ವಿಷಯವಾಗಿಸಿಕೊಂಡಿದ್ದ ಕೆಲವೇ ಮಹಿಳೆಯರಲ್ಲಿ ಅವರೊಬ್ಬರು ಎಂಬುದಷ್ಟೇ ಸ್ವಾರಸ್ಯಕರವಲ್ಲ; Indian Journal of Gender Studiesನಲ್ಲಿ ಕೂಡ ಅವರದೊಂದು ಲೇಖನ ಪ್ರಕಟವಾಗಿತ್ತು ಮತ್ತು ಈಚೆಗಷ್ಟೇ ಪ್ರಕಟವಾದ 'ಸಂದರ್ಶನಗಳು' ಎಂಬ ಅವರ ಪುಸ್ತಕದಲ್ಲೂ ಅಂತಹುದೇ ಲೇಖನವಿದೆ. ಮಹಿಳಾ ಅಧ್ಯಯನ ಹಾಗೂ ಸಂಶೋಧನಾ ಸಂಸ್ಥೆಗಳ ಹಾಗೂ ವ್ಯಕ್ತಿಗಳ ವೈಯಕ್ತಿಕ ನೆನಪುಗಳಲ್ಲಿ ನೀರಾಬೆನ್ ಒಂದು ಅನನ್ಯ ಸ್ಥಾನ ಪಡೆದಿರುವುದಕ್ಕೆ ಆಕೆ ಆ ಸಂಸ್ಥೆಗಳನ್ನು ಸ್ಥಾಪಿಸಿದವರು ಎಂಬುದೊಂದೇ ಕಾರಣವಲ್ಲ, ಅನೇಕಾನೇಕ ಸ್ತ್ರೀವಾದಿಗಳನ್ನು ಮಹಿಳಾ ಅಧ್ಯಯನಗಳ ವಿದ್ವಾಂಸರನ್ನು ಆಕೆ ರೂಪಿಸಿ ಬೆಳೆಸಿದರು ಎನ್ನುವುದೂ ಮುಖ್ಯವಾಗುತ್ತದೆ.

ಒಬ್ಬ ಗುರುವಾಗಿ ನೀರಾಬೆನ್: ಮಹಿಳಾ ಚಳವಳಿಯು ಪರಿಣಾಮಕಾರಿಯಾಗಬೇಕಿದ್ದರೆ ನಮಗೆ ಬೋಧನೆ, ತರಬೇತಿ, ದಾಖಲೀಕರಣ, ಸಂಶೋಧನೆ ಮತ್ತು ಕ್ರಿಯೆಗಳೆಂಬ "ಪಂಚಾಸ್ತ್ರ"ಗಳು ಇರಬೇಕು ಎಂದು ತಮ್ಮ ಶಿಷ್ಯೆಯರಿಗೆ ಕಲಿಸಿದ ನೀರಾಬೆನ್ ಅವರಿಗೆಲ್ಲ "Mother of Women's Studies' ಎನ್ನಿಸಿದ್ದರು. ಆಕೆಯ ವಿಸ್ತಾರವಾದ ಜ್ಞಾನ, ಹರಿತ ಬುದ್ಧಿಮತ್ತೆ, ವಿಪುಲವಾದ ಮಾಹಿತಿಜ್ಞಾನ ಹಾಗೂ ಆಳವಾದ ಅನುಭವ ಮತ್ತು ಸಲಹೆಗಳು ನಾಲ್ಕು ಪೀಳಿಗೆಯ ಮಹಿಳೆಯರಿಗೆ ಸದಾ ಲಭ್ಯವಿರುತ್ತಿತ್ತು. ಪರಸ್ಪರ ಗೌರವವುಳ್ಳ ಸಂಬಂಧವನ್ನು ಸೃಷ್ಟಿಸುತ್ತಿದ್ದ ನೀರಾಬೆನ್ ಎಂದೂ ಉಪದೇಶ ನೀಡುತ್ತಿರಲಿಲ್ಲ. ಬದಲಾಗಿ ಹಿರಿಯ ಕಿರಿಯರೆಲ್ಲರಿಗೂ ಸಮಾನತಾ ಭಾವದಿಂದ ಕೂಡಿದ ಪ್ರತಿಸ್ಪಂದನೆ ಅವರಿಂದ ದೊರೆಯುತ್ತಿತ್ತು ಎಂಬುದೇ ಕಿರಿಯ ವಿದ್ಯಾರ್ಥಿಗಳಿಗೆ ಆಕೆ ಅಚ್ಚುಮೆಚ್ಚಾಗುವಂತೆ ಮಾಡುತ್ತಿತ್ತು.

ನೀರಾಬೆನ್ ಅವರ ಸಾವು ಮಹಿಳಾ ಚಳವಳಿ ಮತ್ತು ಮಹಿಳಾ ಅಧ್ಯಯನಗಳಲ್ಲಿ ತೊಡಗಿರುವ ನಮಗೆ ಒಬ್ಬ ಗುರು, ಉದಾರಮನದ ಕಳಕಳಿಯುಳ್ಳ ಶಿಕ್ಷಕಿ, ಒಬ್ಬ ಗೆಳತಿ ಮತ್ತು ವಿಶ್ವಾಸವಿಟ್ಟು ಅಂತರಂಗ ಹೇಳಿಕೊಳ್ಳಬಹುದಾದ ಆತ್ಮೀಯರನ್ನು ಕಳೆದುಕೊಂಡಂತೆ ಮಾಡಿದೆ. ಸಾಮಾಜಿಕ ಕಾರ್ಯಕರ್ತೆಯರು ಮತ್ತು ವಿದ್ವಾಂಸರು ತಮ್ಮ ಕಾಲಕ್ಕೆ ಸಂಬಂಧಿಸಿದ ತಮ್ಮ ತಮ್ಮ ವಿಚಾರಗಳನ್ನು ಹೇಳಿಕೊಂಡರೆ ಇಷ್ಟಪಟ್ಟು ಆಲಿಸಬಲ್ಲ ಮನಸ್ಸು ಅವರದು. ನಮ್ಮ ಸಮಸ್ಯೆಗಳು ವೃತ್ತಿಗೆ ಸಂಬಂಧಿಸಿದ್ದಿರಲಿ, ರಾಜಕೀಯವೇ ಇರಲಿ ಯಾವ ನಿರ್ಬಂಧವಿಲ್ಲದೆ ಅವರು ಬೆಂಬಲ ಒದಗಿಸಬಲ್ಲವರಾಗಿದ್ದರು ಎಂಬುದು ಅವರೊಂದಿಗೆ ಎರಡೂವರೆ ದಶಕಗಳವರೆಗೆ ಕೆಲಸಮಾಡಿದವರ ಹೃದಯದ ಮಾತು.

ಮಹಿಳಾ ಅಧ್ಯಯನಗಳ ಕ್ಷೇತ್ರ ಇನ್ನೂ ಆಗಷ್ಟೆ ರೂಪುಗೊಳ್ಳತೊಡಗಿದ್ದ 1980ರ ದಶಕದಲ್ಲಿ ಆ ಕ್ಷೇತ್ರದ ಅಕಾಡೆಮಿಕ್ ಮಾನ್ಯತೆಗಾಗಿಯೇ ಹೋರಾಟ ನಡೆಯುತ್ತಿತ್ತು. ಆಗ ಯುವ ವಿದ್ವಾಂಸರನ್ನು ಮೃದುವಾಗಿ ಮುಂಚೂಣಿಗೆ ಕರೆದುತಂದು ಅವರಿಗೆ ಅಧ್ಯಯನದ ವೈಧಾನಿಕತೆಯನ್ನು ಕಲಿಸುತ್ತ ಅವರೊಳಗೆ ಧೈರ್ಯ ತುಂಬುತ್ತ ಈ ಹೊಸ ಕ್ಷೇತ್ರಕ್ಕೇ ತಮ್ಮನ್ನು ಬದ್ಧರನ್ನಾಗಿಸಿಕೊಳ್ಳುವಂತೆ ದೃಢತೆಯನ್ನು ಬೆಳೆಯಿಸಿದವರು ನೀರಾಬೆನ್. ಅವರ ನಿಜವಾದ ಶಕ್ತಿ ಎಂದರೆ ಎಂಥವರ ಮನಸ್ಸನ್ನೂ ಒಲಿಸಬಲ್ಲ ಕಲೆಗಾರಿಕೆಯದಾಗಿತ್ತು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅಕಾಡೆಮಿಕ್ ವಿದ್ಯಮಾನಗಳಲ್ಲಿ ಮಹಿಳಾ ಅಧ್ಯಯನಗಳಿಗೆ ಸ್ಪಷ್ಟವಾದ ಒಂದು ರಾಜಕೀಯ ಪಾತ್ರವಿದೆ ಎಂದು ಅವರು ದೃಢವಾಗಿ ನಂಬಿದ್ದರು.

ಕೊನೆಯ ದಿನಗಳು: ಮಾರ್ಕ್ಸ್‌ವಾದಿ ಪ್ರೊಫೆಸರ್ ಎ.ಆರ್. ದೇಸಾಯಿಯವರ ಜೀವನ ಸಂಗಾತಿಯಾಗಿ, ಮಹಿಳಾ ವಿಮೋಚನೆಯನ್ನು ಭಾರತದ ಭವಿಷ್ಯವೆಂದು ಮುಂಗಾಣುವವರಾಗಿದ್ದ ನೀರಾಬೆನ್ ತಾವು ಸ್ಥಾಪಿಸಿದ್ದ ಮಾತೃಸಂಸ್ಥೆಯಿಂದ ಮಹಿಳಾ ಅಧ್ಯಯನಕ್ಕೆ ವಿಶೇಷ ಕಾಣಿಕೆ ನೀಡಿರುವ ಐವರು ಭಾರತೀಯ ಮಹಿಳೆಯರಲ್ಲಿ ಒಬ್ಬರಾಗಿ ಸನ್ಮಾನವನ್ನು 2008ರ ಏಪ್ರಿಲ್ 3ರಂದು ಪಡೆದಿದ್ದರು. ಆ ವೇಳೆಗಾಗಲೇ ಕ್ಯಾನ್ಸರ್‌ಗಾಗಿ ತೀವ್ರ ಚಿಕಿತ್ಸೆ ಪಡೆಯುತ್ತಿದ್ದ ನೀರಾ ಬಹಳ ಬಳಲಿದ್ದರು. ನೊಬೆಲ್ ಶಾಂತಿ ಪ್ರಶಸ್ತಿಗೆ ನಾಮಾಂಕಿತರಾದ 1000 ಜನ ಮಹಿಳೆಯರಲ್ಲಿ ಅವರ ಹೆಸರೂ ಇತ್ತು. ದೇಹದ ತುಂಬ ಕ್ಯಾನ್ಸರ್ ಹರಡಿ ಬಾಧಿಸುತ್ತಿದ್ದರೂ ತಮ್ಮನ್ನು ಭೇಟಿಮಾಡಲು ಬರುವವರೊಂದಿಗೆ ತಮ್ಮ ಯಾತನೆಗಳ ಬಗ್ಗೆ ಒಂದಿಷ್ಟೂ ಹೇಳುತ್ತಿರಲಿಲ್ಲ. ಬದಲಾಗಿ ಭಾರತದ ಅನ್ಯಭಾಗಗಳ ಕಾದಂಬರಿಗಳನ್ನು ತಾವು ಗುಜರಾತಿ ಭಾಷೆಗೆ ಅನುವಾದ ಮಾಡಿದುದನ್ನು ಕುರಿತು ಅಥವಾ ಚಲನಚಿತ್ರಗಳು, ಕಾವ್ಯ, ಸಂಗೀತ ಮುಂತಾದ ತಮ್ಮ ಮುಖ್ಯ ಆಸಕ್ತ ವಿಷಯಗಳ ಬಗ್ಗೆ ನಿರರ್ಗಳವಾಗಿ ಮಾತನಾಡುತ್ತಿದ್ದರು. ತಮ್ಮ ಮಗ ಮಿಹಿರ್ ದೇಸಾಯಿ ಮಾನವ ಹಕ್ಕುಗಳ ಹೋರಾಟಗಾರ ಮತ್ತು ವಕೀಲರು. ಆತನ ಸಂಗಾತಿ ಸಂಧ್ಯಾಗೋಖಲೆಯೊಂದಿಗೆ ತುಂಬ ಸುಂದರವಾದ ಬೌದ್ಧಿಕ-ಭಾವನಾತ್ಮಕ ಸಂಬಂಧ ಇಟ್ಟುಕೊಂಡಿದ್ದ ಅಪರೂಪದ 'ಅತ್ತೆ'. ನೀರಾಬೆನ್ ಕಳೆದ 2009ರ ಜೂನ್ 25ರಂದು ತಮ್ಮ 84ನೆಯ ವಯಸ್ಸಿನಲ್ಲಿ ದೇಹವನ್ನು ತ್ಯಜಿಸಿ ಆತ್ಮೀಯರೆಲ್ಲರ ಸ್ಮರಣೆಯಲ್ಲಿ ನೆಲೆಸಿದ್ದಾರೆ.

❑



ಮಹಿಳೆಯರ ನ್ಯಾಯಾಲಯಗಳು

ಏಷಿಯನ್ ಮಹಿಳಾ ಮಾನವ ಹಕ್ಕುಗಳ ಸಂಸ್ಥೆ ಹಾಗೂ ಎಲ್ ಟಾಲರ್ ಅಂತರ ರಾಷ್ಟ್ರೀಯ ಸಂಸ್ಥೆ

● *ಕಾರಿನ್ ಕುಮಾರ್ ಡಿಸೋಜ*

ಈ ಕಣ್ಣು ಅಳುವುದಕ್ಕಲ್ಲ
ನೋಟದ ಮಂಜು ಕರಗಬೇಕಿದೆ
ನನ್ನ ಮುಖದ ಮೇಲೆ ಕಣ್ಣೀರಿದೆ ನಿಜ
ಸ್ಪಷ್ಟತೆಯೇ ಇದರ ಆಶಯ
ಇದು ಏನನ್ನೂ ಮರೆಯಬಾರದು

ಮಹಿಳಾ ನ್ಯಾಯಾಲಯದ ಕಥೆಯನ್ನು ನಿಮಗೆ ಹೇಳುತ್ತಿದ್ದೇವೆ. ಇದು ಬಹಳ ವರ್ಷಗಳ ಹಿಂದಿನ ಕನಸು. ಹಿಂಸೆಯನ್ನು ಅವರಿಸಿಕೊಂಡ ಮೌನವನ್ನು ಒಡೆಯುವ ಕನಸು. ಮಹಿಳೆಯ ಚರಿತ್ರೆಯನ್ನು ಮರುಬರವಣಿಗೆ ಮಾಡುವ, ನೆನಪುಗಳನ್ನು ನಮ್ಮದಾಗಿಸಿಕೊಳ್ಳುವ, ನಮ್ಮ ಕಾಲಕ್ಕೆ ಹೊಸ ದೃಷ್ಟಿಕೋನ ಕಂಡುಕೊಳ್ಳುವ ಕನಸು. ನಮ್ಮ ನೋವಿನ ಕಥೆಗಳಷ್ಟೇ ಅಲ್ಲ, ನಮ್ಮ ಧೈರ್ಯದ, ಉಳಿವಿನ ಕಥೆ. ಇನ್ನೊಂದು ಬಗೆಯ ತರ್ಕ ಹುಡುಕುವ, ಇನ್ನೊಂದು ಬಗೆಯಲ್ಲಿ ತಿಳಿದುಕೊಳ್ಳುವ ಕನಸು.

ಇದು ಪ್ರಾರಂಭವಾದದ್ದು ಏಷಿಯಾದ ಮಹಿಳಾ ಮಾನವ ಹಕ್ಕುಗಳ ಸಂಸ್ಥೆಯಿಂದ. ಏಷಿಯಾದ ಹಾಗೂ ಇತರ ಮಹಿಳಾ ಹಕ್ಕುಗಳ ಸಂಸ್ಥೆಗಳೊಡನೆ ಸೇರಿ ಒಂಬತ್ತು ನ್ಯಾಯಾಲಯಗಳನ್ನು ಇವರು ನಡೆಸಿದ್ದರು. ಟ್ಯುನೀಷಿಯಾದಲ್ಲಿ ಇರುವ ಇದರ ಭಾಗಸ್ಥ ಸಂಸ್ಥೆಯು ಎಲ್ ಟಾಲರ್ ಅಂತರರಾಷ್ಟ್ರೀಯ ಸಂಸ್ಥೆ. ಈ ಸಂಸ್ಥೆಯು ಈ ನ್ಯಾಯಾಲಯಗಳನ್ನು ಆಫ್ರಿಕ, ಅರಬ್, ಮಧ್ಯ ಹಾಗೂ ಲ್ಯಾಟಿನ್ ಅಮೆರಿಕಾಗಳಂತಹ ಪ್ರಪಂಚದ ಇತರ ಭಾಗಗಳಿಗೆ ತೆಗೆದುಕೊಂಡು ಹೋಗಿದೆ. ಮಹಿಳಾ ನ್ಯಾಯಲಯಗಳು ಮಹಿಳೆಯರಿಗೆ ಒಂದು ಸ್ಥಳ, ಅವಕಾಶ, ಕಲ್ಪನೆಯನ್ನು ಬಿಡಿಸಿಡುತ್ತವೆ. ನಮಗೆ ಯೋಚಿಸುವುದಕ್ಕೆ ನಮ್ಮ ಭಾವನೆಗಳಿಗೆ ಸವಾಲು ಮಾಡುವುದಕ್ಕೆ, ಇನ್ನೊಂದರ ಜೊತೆ ಹೆಣಿಕೆ ಹಾಕಿಕೊಳ್ಳುವುದಕ್ಕೆ, ನೃತ್ಯ ಮಾಡುವುದಕ್ಕೆ, ಕನಸು ಕಾಣುವುದಕ್ಕೆ ನಮ್ಮನ್ನು ಸ್ವಾಗತಿಸುತ್ತವೆ.

ಮಹಿಳೆಯರ ಸ್ಥಳವನ್ನು ಹೊಸದಾಗಿ ವ್ಯಾಖ್ಯಾನಿಸುವುದಕ್ಕೆ, ಹೊಸ ಅರಿವು, ಹೊಸ ರಾಜಕೀಯವನ್ನು ಈ ಜಾಗದಲ್ಲಿ ತುಂಬಲಿಕ್ಕೆ ಮಹಿಳಾ ನ್ಯಾಯಾಲಯ ಒಂದು ಪ್ರಯತ್ನವಾಗಿದೆ. ಪ್ರಪಂಚದ ದಕ್ಷಿಣ ಭಾಗದಲ್ಲಿನ ಧ್ವನಿಗಳನ್ನು, ದೃಷ್ಟಿಕೋನಗಳನ್ನು ಇದು ಒಟ್ಟು ಗೂಡಿಸುತ್ತಿದೆ. ವಿರೋಧದ ಅಂಶವನ್ನು ಚರ್ಚೆಯ ಹಂದರದಲ್ಲಿ, ಒಡಲಲ್ಲಿ ಬೇರೂರಿಸಿಕೊಂಡಿರುವ ಮಹಿಳಾ ನ್ಯಾಯಾಲಯ ಕಾರ್ಯಶೀಲತೆಯನ್ನು ಅಂತರ್ಗತಗೊಳಿಸಿಕೊಂಡಿದೆ. ಜಾಗತೀಕರಣಕ್ಕೆ ಇದು ಸವಾಲೆಸೆಯುತ್ತದೆ. ನಿರ್ಲಕ್ಷಿಸಲ್ಪಟ್ಟವರ ಧ್ವನಿಗಳನ್ನು, ಚಳವಳಿಗಳನ್ನು ಕಿವಿಗೊಟ್ಟು ಕೇಳುವ ಮೂಲಕ ಗಡಿ, ಮಿತಿಗಳನ್ನು ದಾಟುವ ಹಾಗೂ ಹೊಸದನ್ನು ಕಂಡು ಹಿಡಿಯುವ ಪ್ರಯತ್ನವನ್ನು ಮಾಡುತ್ತಿದೆ.

ಮಹಿಳಾ ನ್ಯಾಯಾಲಯ ವಸ್ತುನಿಷ್ಠ ಸತ್ಯವನ್ನು ಮಹಿಳೆಯರ ವ್ಯಕ್ತಿನಿಷ್ಠ ಸಾಕ್ಷಿ ಸತ್ಯಗಳೊಂದಿಗೆ ಹೆಣೆಯಲು ಪ್ರಯತ್ನಿಸುತ್ತದೆ. ರಾಜಕೀಯದ ಜೊತೆ ವೈಯಕ್ತಿಕತೆಯನ್ನು, ತರ್ಕದ ಜೊತೆಗೆ ಭಾವಗೀತೆಯನ್ನು, ಬುದ್ಧಿಯ ಜೊತೆಗೆ ಹೃದಯವನ್ನು ಬೆಸೆಯುವ ಕೆಲಸವನ್ನು ಮಾಡುತ್ತದೆ. ಹೀಗೆ ಬೆಸೆಯುವ ಮೂಲಕ ಹೊಸ ಬಗೆಯ ಒಳನೋಟಗಳಿಗೆ ಇದು ನಮ್ಮನ್ನು ಒತ್ತಾಯಿಸುತ್ತದೆ. ಬೇರೆ ರೀತಿಯಾದ ಅರಿವಿಗೆ ಪ್ರೇರಿಸುತ್ತದೆ. ಜ್ಞಾನದ ಪರಿಧಿಯನ್ನು ವಿಸ್ತರಿಸಿ ಹೊಸ ಜ್ಞಾನದ ವಲಯವನ್ನು ಸೃಷ್ಟಿಸುತ್ತದೆ. ಈ ನ್ಯಾಯಾಲಯದಲ್ಲಿ ದೌರ್ಜನ್ಯಕ್ಕೆ ಒಳಗಾಗಿ ಜೀವ ಕಳೆದುಕೊಂಡವರ, ಉಳಿದು ಬದುಕಿದವರ ಧ್ವನಿಯನ್ನು ಕೇಳಲಾಗುತ್ತದೆ. ಮಹಿಳೆಯರು ತಮ್ಮ ಮೇಲೆ ನಡೆದ ಹಿಂಸೆಯ ಸತ್ಯಸಾಕ್ಷಿಯನ್ನು ಈ ನ್ಯಾಯಾಲಯಕ್ಕೆ ತರುತ್ತಾರೆ. ಈ ನ್ಯಾಯಾಲಯಗಳು ಪವಿತ್ರ ಸ್ಥಳಗಳು. ಇಲ್ಲಿ ಮಹಿಳೆಯರು ನೋವಿನ ಅನುಭವದ ಭಾಷೆಯಲ್ಲಿ ಮಾತನಾಡುತ್ತಾರೆ. ಅಪರಾಧವನ್ನು ಹೆಸರಿಸುತ್ತಾರೆ; ಪರಿಹಾರವನ್ನು ಹುಡುಕುತ್ತಾರೆ; ಮರುಹುಟ್ಟಿಗಾಗಿ ತಹತಹಿಸುತ್ತಾರೆ.

ಸತ್ತ, ಬದುಕುಳಿದ ಮಹಿಳೆಯರ ಕಥೆಗಳನ್ನು ಕೇಳುತ್ತಲೇ ಮಹಿಳಾ ನ್ಯಾಯಾಲಯ ಮಹಿಳೆಯರು ಹೋರಾಡಿದ, ವಿರೋಧಿಸಿದ, ತಮ್ಮ ಕನಸುಗಳಿಗೆ ಬೆನ್ನು ಮಾಡಲು ನಿರಾಕರಿಸಿದ ಹೆಂಗಸರ ಧ್ವನಿಗಳನ್ನು

ಕೇಳುತ್ತದೆ. ಮಹಿಳಾ ಹಾಗೂ ಮಾನವ ಹಕ್ಕುಗಳ ಚಳವಳಿಯಲ್ಲಿ ನಿರತರಾದ ಮಹಿಳೆಯರ ಧ್ವನಿಗಳನ್ನು ದಿನನಿತ್ಯದ ಬದುಕಿನಲ್ಲಿ ಬದುಕಿ ಉಳಿದುದನ್ನು ನ್ಯಾಯಾಲಯ ಕೇಳಿಸಿಕೊಳ್ಳುತ್ತದೆ. ಯುದ್ಧ, ಮತಾಂಧತೆ, ಜನಾಂಗ ದ್ವೇಷದ ನಾನಾ ಬಗೆಯ ಹಿಂಸೆಯ ಮುಖಗಳನ್ನು ವಿರೋಧಿಸುತ್ತಿರುವ ಮಹಿಳೆಯರ ಹಾಗೂ ಚಳವಳಿಯ ಧ್ವನಿಗಳನ್ನು ನ್ಯಾಯಾಲಯ ಕೇಳಿಸಿಕೊಳ್ಳುತ್ತದೆ. ಕೆಲಸಕ್ಕೆ, ವೇತನಕ್ಕೆ ಭೂಮಿಯ ಮೇಲಿನ ಹಕ್ಕಿಗಾಗಿ ಹೋರಾಡುವ ಹೆಂಗಸರ ಮಾತುಗಳನ್ನು, ಭಾಷೆಯನ್ನು ನ್ಯಾಯಾಲಯ ಆಲಿಸುತ್ತದೆ. ಅವರ ಬದುಕು, ಅವರ ಜ್ಞಾನದ ಪರಿಧಿ, ಅವರ ಬುದ್ಧಿವಂತಿಕೆ ಮತ್ತು ಅವರು ಈ ಸಮಾಜದಲ್ಲಿ ಕಾಣದಂತಾಗಿರುವ, ಕೇಳಿಸಿಕೊಳ್ಳಲು ಅರ್ಹರಾಗದಿರುವ ರೀತಿ, ವಿಧಾನಗಳನ್ನು ಮಹಿಳಾ ನ್ಯಾಯಾಲಯ ಆಲಿಸುತ್ತದೆ. ಮಹಿಳೆಯರ ಜ್ಞಾನದ ವಲಯವನ್ನು ಆಚೆಗೊತ್ತಿರುವ ಪ್ರಧಾನ ಧಾರೆಯ ಮಾನವ ಹಕ್ಕುಗಳ ಚರ್ಚೆ, ಸಂವಾದಕ್ಕೆ ಮಹಿಳೆಯರು ಒಡ್ಡುತ್ತಿರುವ ಸವಾಲುಗಳನ್ನು ಮಹಿಳಾ ನ್ಯಾಯಾಲಯ ಆಲಿಸುತ್ತದೆ. ಈ ಚರ್ಚೆ, ಸಂವಾದಗಳು ಮಹಿಳೆಯರ ದೃಷ್ಟಿಕೋನವನ್ನು ಅಂತರ್ಗತಗೊಳಿಸಿ ಕೊಳ್ಳಬೇಕಾದ ಅಗತ್ಯವನ್ನೂ ಸಹ ಮಹಿಳಾ ನ್ಯಾಯಾಲಯ ಕೇಳಿಸಿಕೊಳ್ಳುತ್ತದೆ. ಹೊಸ ಮಹಿಳಾ ಜನಾಂಗದ ಮಾನವ ಹಕ್ಕುಗಳನ್ನು ಕುರಿತು ಮಹಿಳಾ ನ್ಯಾಯಾಲಯ ಮಾತನಾಡುತ್ತದೆ.

ನನ್ನ ಕಣ್ಣುಗಳ
ಬೆಳಕನ್ನು ಪ್ರಶ್ನಿಸುವ ಮೂಲಕವಷ್ಟೇ
ನಿನ್ನ ಕಣ್ಣುಗಳ ಸುಳ್ಳಿನಿಂದ ಪ್ರಕಾಶಿಸುವುದನ್ನು
ನಾನು ತಿರಸ್ಕರಿಸ ಬಲ್ಲೆ.

ಮಹಿಳಾ ನ್ಯಾಯಾಲಯ ಹೊಸದೊಂದು ಸಂಕೇತ. ಅಧಿಕಾರದ ಜೊತೆ ಭಿನ್ನವಾದ ರೀತಿಯಲ್ಲಿ ಮಾತನಾಡಲು ಇದು ಪ್ರಯತ್ನಿಸುತ್ತದೆ. ಅಧಿಕಾರಕ್ಕೆ ಹೊಸ ರೀತಿಯಲ್ಲಿ ಸವಾಲೆಸೆಯುತ್ತದೆ. ಪ್ರಸ್ತುತದಲ್ಲಿರುವ ಸಂಸ್ಥೆಗಳು, ವಿಚಾರಗಳು ಹೆಚ್ಚಾಗುತ್ತಿರುವ ಹಿಂಸೆಯ ಕ್ರೂರ ಬಗೆಗಳನ್ನು ಗ್ರಹಿಸುವಲ್ಲಿಯೇ ಸೋಲುತ್ತಿವೆ ಎಂಬುದನ್ನು ಮಹಿಳಾ ನ್ಯಾಯಾಲಯ ಗುರುತಿಸುತ್ತದೆ.

ಅಧಿಕಾರ ರಹಿತರ ಜೊತೆ ಮಹಿಳಾ ನ್ಯಾಯಾಲಯ ಮಾತನಾಡುತ್ತದೆ. ಪ್ರಪಂಚದ ಅಂತಃಸಾಕ್ಷಿಯನ್ನು, ಸಾಕ್ಷಿ ಪ್ರಜ್ಞೆಯನ್ನು ಹೊಡೆದೆಬ್ಬಿಸುವ ಪ್ರಯತ್ನ ಮಾಡುತ್ತದೆ. ನಮ್ಮ ರಚನೆಗಳು, ನಮ್ಮ ಮನಸ್ಸು, ನಮ್ಮ ಕಲ್ಪನೆಗಳು, ನಿರ್ವಸಾಹತೀಕರಣಕ್ಕೆ ಒಳಗಾಗಬೇಕಾದ ಅಗತ್ಯವನ್ನು ಈ ನ್ಯಾಯಾಲಯಗಳು ಮಾತನಾಡುತ್ತವೆ. ಪಿತೃಪ್ರಧಾನತೆಯ ಹಿಡಿತವನ್ನು ಉಳಿಸಿಕೊಳ್ಳಲು ಅಧಿಕಾರ ಹುಟ್ಟುಹಾಕಿರುವ ಸ್ಥಿತಿ-ಗತಿಗಳನ್ನು ನಿರಾಕರಿಸಿ ಅವರ ರಾಜಕೀಯ ಧ್ವನಿಯನ್ನು ಮತ್ತೆ ಹೊಂದುವ ಅಗತ್ಯವನ್ನು ಮಹಿಳಾ ನ್ಯಾಯಾಲಯ ಎತ್ತಿ ಹಿಡಿಯುತ್ತದೆ.

ಮಹಿಳಾ ನ್ಯಾಯಾಲಯ ಭಿನ್ನವಾದ ನ್ಯಾಯದ ಕಲ್ಪನೆಯನ್ನು ಎತ್ತಿ ಹಿಡಿಯುತ್ತದೆ. ವೈಯಕ್ತಿಕ ನ್ಯಾಯ, ಪರಿಹಾರ ಇಲ್ಲಿ ನಮ್ಮೆಲ್ಲರಿಗೂ ಹೊಸದೊಂದು ಲೋಕವನ್ನು, ನ್ಯಾಯದ ಪ್ರಜ್ಞೆಯನ್ನು ಹುಟ್ಟು ಹಾಕುತ್ತದೆ. ಇಲ್ಲಿಯ ನ್ಯಾಯದಲ್ಲಿ ಅಪರಾಧದ ಸಂದರ್ಭದ ಸಂಬಂಧ, ಅದರ ಇತಿಹಾಸವನ್ನು ಸಹ ಗುರುತಿಸಿ ನೋಡಲಾಗುತ್ತದೆ. ಇಲ್ಲಿನ ನ್ಯಾಯ ದ್ವೇಷದ ನ್ಯಾಯವಲ್ಲ, ಸತ್ಯದ ನ್ಯಾಯ; ವ್ಯಕ್ತಿ ಹಾಗೂ ಸಮುದಾಯವನ್ನು ಗುಣಪಡಿಸುವ ನ್ಯಾಯ; ಪರಿಹಾರ, ಮರುಹುಟ್ಟನ್ನು ಅಪೇಕ್ಷಿಸುವಂತಹ ನ್ಯಾಯ. ಮಹಿಳಾ ನ್ಯಾಯಾಲಯಗಳು ಹೊಸ ಬಗೆಯ ನ್ಯಾಯದ ಕಲ್ಪನೆಗೆ ಒಂದು ಹೆಜ್ಜೆಯಾಗಿವೆ. ಇಂತಹ ನ್ಯಾಯದಲ್ಲಿ ನಾಗರಿಕ ಸಮಾಜ ಹಾಗೂ ಸಾಮಾಜಿಕ ಚಳವಳಿಗಳಲ್ಲಿ ನಾವು ನಮ್ಮನ್ನು ಹೆಣೆದುಕೊಳ್ಳುವುದರ ಜೊತೆಗೆ ನಮ್ಮ ಕಲೆಕ್ಟೀವ್ ಒಳನೋಟಗಳನ್ನು

"ಇಪ್ಪತ್ತು ದಿನದ ಮದುವೆ"

2006ರ ಜನವರಿಯಲ್ಲಿ ನನ್ನ ಮದುವೆಯಾಯಿತು. ನಾನು ದಂತ ವೈದ್ಯೆ, ನನ್ನ ಗಂಡನೂ ವೈದ್ಯ. ನಾವು ಮದುವೆಯಾಗಿ ಕೇವಲ 20 ದಿನ ಮಾತ್ರ ಜೊತೆಗಿದ್ದೆವು. 20 ದಿನಗಳಲ್ಲಿ ನನ್ನ ಮೇಲೆ ನಡೆದ ಹಿಂಸೆಯನ್ನು ನಿಮ್ಮೊಡನೆ ಹಂಚಿಕೊಳ್ಳ ಬಯಸುತ್ತೇನೆ.

ನನ್ನ ಗಂಡನಾಗುವವ ಆಸ್ಟ್ರೇಲಿಯಾದಲ್ಲಿ ವಾಸವಾಗಿದ್ದ. ಮದುವೆಯ ಸಲುವಾಗಿ ಆತ ಭಾರತಕ್ಕೆ ಬಂದಿದ್ದ. ಮದುವೆ ಅದ್ದೂರಿಯಾಗಿಯೇ ನಡೆಯಿತು. ನಾವು ಕೇವಲ 20 ದಿನ ಮಾತ್ರ ಜೊತೆಗಿದ್ದೆವು. ಇದು ಬಲವಂತದ ಮದುವೆಯಾಗಿತ್ತು. ನನ್ನ ಬಗ್ಗೆ ಆತನಿಗೆ ಪ್ರೀತಿಯಾಗಲಿ ಆಸಕ್ತಿಯಾಗಲಿ ಇರಲಿಲ್ಲ. ನಮ್ಮ ಕುಟುಂಬ ಆತನ ಕುಟುಂಬಕ್ಕೆ 'ಸರಿ'ಯಾದುದಲ್ಲವೆಂಬ ಭಾವನೆ ಅವನಲ್ಲಿ ಬಲವಾಗಿತ್ತು. ಈ 20 ದಿನಗಳಲ್ಲಿ ಆತ 10ರಂದ 20ಲಕ್ಷ ನಗದು ಹಣ, ಮನೆಗೆ ಬೇಕಾದ ಪೀಠೋಪಕರಣಗಳು ಹಾಗೂ ಎಲೆಕ್ಟ್ರಾನಿಕ್ಸ್ ವಸ್ತುಗಳನ್ನು ನೀಡುವಂತೆ ಒತ್ತಾಯಿಸುತ್ತಿದ್ದ. ಮದುವೆಯಾಗಿ 20 ದಿನಗಳ ನಂತರ ನನ್ನ ಗಂಡ ಆಸ್ಟ್ರೇಲಿಯಕ್ಕೆ ಹಾರಿದ. ಮದುವೆಯಿಂದ ಒಬ್ಬೊಬ್ಬರ ಬಣ್ಣವೂ ಬಯಲಾಗುತ್ತಾ ಹೋಯಿತು. ನಾನು ಆಸ್ಟ್ರೇಲಿಯಾಕ್ಕೆ ಹೋಗಲು ಅಗತ್ಯವಾದ ದಾಖಲಾತಿಗಳನ್ನು ಪಡೆಯಲು ನನ್ನ ಗಂಡ ಅಥವಾ ನನ್ನ ತಂದೆ ಯಾವುದೇ ನೆರವನ್ನೂ ನೀಡಲಿಲ್ಲ. ನನ್ನ ತಂದೆ ನಮ್ಮಿಬ್ಬರ ನಡುವಿನ ಸಮಸ್ಯೆಯನ್ನು ಬಗೆ ಹರಿಸುವ ಆಸಕ್ತಿಯನ್ನು ತೋರಿಸಲೇ ಇಲ್ಲ. ಹೀಗೆ ಒಂದು ವರ್ಷ ಕಳೆಯಿತು. ಈ ಅವಧಿಯಲ್ಲಿ ಆತ ಒಂದು ಫೋನ್ ಸಹ ಮಾಡಲಿಲ್ಲ. ಮದುವೆಯನ್ನು ಉಳಿಸಿಕೊಳ್ಳುವ ಆಸಕ್ತಿಯೂ ಅವನಿಗಿರಲಿಲ್ಲ. ಆದರೆ ನನ್ನ ತಂದೆಗೆ ಈ ಮದುವೆಯಿಂದ ಸಂತೋಷವಾಗಿತ್ತು. ನಾನಾಗಿಯೇ ಮದುವೆಯನ್ನು ಮುರಿಯುವುದು ನಮ್ಮ ತಂದೆಗೆ ಇಷ್ಟವಿರಲಿಲ್ಲ. ವಿವಾಹವಿಚ್ಛೇದನವನ್ನು ಅವರು ವಿರೋಧಿಸುತ್ತಿದ್ದರು. ಕೆಲವು ವರ್ಷ ಹಾಗೆಯೇ ಇದ್ದರೆ ಸಮಸ್ಯೆ ಬಗೆ ಹರಿಯಬಹುದೆಂದು ಅವರು ಭಾವಿಸಿದ್ದರು.

2007ರಲ್ಲಿ ನಾನು ನಮ್ಮ ಧರ್ಮದ ಗುರುಗಳನ್ನು ಭೇಟಿ ಮಾಡಿ ನನ್ನ ಸಮಸ್ಯೆಯನ್ನು ವಿವರಿಸಿದೆ. ಅವರು ನನ್ನ ಅತ್ತೆ-ಮಾವ, ಗಂಡನಿಗೆ ಸಮಸ್ಯೆಯನ್ನು ಇತ್ಯರ್ಥ ಮಾಡುವಂತೆ ಪತ್ರ ಬರೆದರು. ಅನಂತರ ವಿಮೋಚನಾ ಮಹಿಳಾ ಹಕ್ಕುಗಳ ವೇದಿಕೆ ನನಗೆ ಸಂಪೂರ್ಣ ಸಹಕಾರ ಹಾಗೂ ನೆರವನ್ನು ನೀಡಿತು. ನನ್ನ ತಂದೆಗೆ ನನ್ನ ದುಡಿಮೆ ಮಾತ್ರ ಬೇಕಾಗಿತ್ತು. ನನ್ನ ತಂದೆ ಸೌದಿಯಲ್ಲಿದ್ದರು. ಅಲ್ಲಿಗೇ ಬಂದು ಕೆಲಸ ಮಾಡೆಂದು ಕರೆದರು. ನಾನು ಅವರ ಸಲಹೆಯನ್ನು ನಿರಾಕರಿಸಿದೆ. ಮಾರ್ಚ್ 2007ರಲ್ಲಿ ನನ್ನ ಗಂಡ ನನಗೆ ವಿವಾಹ ವಿಚ್ಛೇದನವನ್ನು ಕಳಿಸಿದನು. ನಾನು ಸಹ ಅದನ್ನು ಒಪ್ಪಿಕೊಂಡೆ. ಆದರೆ ನನ್ನ ತಂದೆ ನನ್ನ ತೀರ್ಮಾನವನ್ನು ವಿರೋಧಿಸಿ ನನ್ನನ್ನು ಮನೆಯಿಂದ ಹೊರಹಾಕಿದರು. ಒಂದು ತಿಂಗಳ ನಂತರ ನನ್ನ ತಂದೆ, ನನ್ನನ್ನು ಬೆಂಬಲಿಸಿದ ನನ್ನ ತಾಯಿಗೂ ಸಹ ವಿಚ್ಛೇದನ ನೀಡಿದರು. ಅನಂತರ ನನ್ನ ತಂದೆಯ ಸಂಪರ್ಕವೇ ನನಗಿಲ್ಲ.

ದೇವರ ದಯೆಯಿಂದ ನನಗೆ ಪುನಃ ವಿವಾಹವಾಗುವ ಅವಕಾಶ ದೊರೆಯಿತು. ನನ್ನ ಗಂಡ ನನ್ನನ್ನು ತುಂಬಾ ಪ್ರೀತಿಸುತ್ತಾರೆ. ನನ್ನನ್ನು ಅರ್ಥಮಾಡಿಕೊಳ್ಳುವುದರ ಜೊತೆಯಲ್ಲಿ ನನ್ನನ್ನು ಗೌರವಿಸುತ್ತಾರೆ. ನನಗೆ ಸುಂದರವಾದ ಒಂದು ಹೆಣ್ಣುಮಗುವಿದೆ. ಕೋರ್ಟಿನಲ್ಲಿ ಸಾಕ್ಷಿ ನುಡಿದೆ.

ಡಾ॥ ಫಾತಿಮಾ

ವಿಷದೀಕರಿಸಿಕೊಳ್ಳಬಹುದಾಗಿದೆ. ನಾವು ನಿತ್ಯ ಬದುಕುವ ಸತ್ಯಗಳು ಯಾವ ಸಂದರ್ಭದಲ್ಲಿ ಬರೆಯಲಾಗಿದೆ ಎಂಬುದನ್ನೂ ಕೂಡಾ ನಾವು ಈ ಮೂಲಕ ಅರಿತುಕೊಳ್ಳಬಹುದಾಗಿದೆ.

ಮಹಿಳಾ ನ್ಯಾಯಾಲಯ ಸಮಾನತೆಯನ್ನು ಏಕರೂಪತೆಯಿಂದ ಮಾತನಾಡುವುದಿಲ್ಲ, ಭಿನ್ನತೆಯಿಂದ ಮಾತನಾಡುತ್ತದೆ. ಗೌರವ, ಘನತೆಯನ್ನು ಬೇರೂರಿಸುವ ಭಿನ್ನತೆಯಲ್ಲಿಯೇ ಸಮಾನತೆಯನ್ನು ಮಹಿಳಾ ನ್ಯಾಯಾಲಯ ಎತ್ತಿ ಹಿಡಿಯುತ್ತದೆ.

ಅಂಚಿಗೊತ್ತರಿಸಲ್ಪಟ್ಟವರ ಇತಿಹಾಸದ ಮರುಬರವಣಿಗೆಗೆ ಮಹಿಳಾ ನ್ಯಾಯಾಲಯ ಒತ್ತಾಯಿಸುತ್ತದೆ. ಹಾಗಾಗಿ ಮಹಿಳಾ ನ್ಯಾಯಲಯಗಳು ಅಂಚಿಗೊತ್ತರಿಸಲ್ಪಟ್ಟವರ ಪ್ರಯಾಣಗಳೆಂದೇ ಹೇಳಬಹುದಾಗಿದೆ. ದಲಿತರು, ಮಹಿಳೆಯರು, ಕರಿಯರು, ಸಾಮಾಜಿಕ ಗುಂಪುಗಳು, ದಕ್ಷಿಣದ ಪ್ರಪಂಚ – ಹೀಗೆ ಹಲವರು ಅವರ ಬದುಕಿನ ಸ್ಥಿತ್ಯಂತರದಲ್ಲಿಯೇ ಹೊಸ ಹೊಸ ಭಾಷೆ, ಆಶಯ, ಕಾಲ್ಪನಿಕ ಸಂಕೇತಗಳನ್ನು ಹೇಳತೊಡಗಿದ್ದಾರೆ. ಹೊಸ ಪ್ರಪಂಚದ ಸೃಷ್ಟಿಗೆ ಇವು ಅಡಿಪಾಯಗಳಾಗಿರುತ್ತವೆ.

ಮಹಿಳಾ ನ್ಯಾಯಾಲಯಗಳು ಒಡೆಯರ ಕಥನಗಳನ್ನು, ಒಡೆಯರ ಮನೆಗಳನ್ನು, ತರ್ಕಗಳನ್ನು, ಸಾರ್ವತ್ರಿಕ ಸತ್ಯ, ಅಧಿಕಾರ, ರಾಜಕೀಯ ಎಲ್ಲವಕ್ಕೂ ಸವಾಲೆಸೆಯುತ್ತವೆ. ಒಡೆಯರ ಉಪಕರಣಗಳಿಂದಲೇ ಒಡೆಯರ ಮನೆಗಳನ್ನು ನಾಶ ಮಾಡುವುದು ಅಸಾಧ್ಯ ಎಂದು ಕವಿ ಆಡ್ರಿ ಲಾರ್ಡ್ ಹೇಳುತ್ತಾನೆ. ಜಾತಿ, ವರ್ಗ, ಜನಾಂಗ, ಲಿಂಗ ಕುರಿತಂತೆ ಪ್ರಧಾನ ಧಾರೆಯ ಚರ್ಚೆ, ಸಂವಾದದಲ್ಲಿರುವ ಕೇಂದ್ರೀಕೃತ ತರ್ಕವನ್ನು ಪ್ರಶ್ನಿಸುವ ಅಗತ್ಯ ಅತ್ಯಂತ ಜರೂರಿಯದಾಗಿದೆ. ಈ ಕೇಂದ್ರೀಕೃತ ತರ್ಕ–ಹಿಂಸೆಯ ತರ್ಕವಾಗಿದೆ. ನಾಗರಿಕ/ಅನಾಗರಿಕದ ತರ್ಕವಾಗಿದೆ, ಮೇಲು/ಕೀಳೆಂಬ ತರ್ಕವಾಗಿದೆ. ಈ ತರ್ಕವನ್ನು ವಿಕೇಂದ್ರೀಕರಣಗೊಳಿಸುವ, ಪ್ರಶ್ನಿಸುವ ಅಥವಾ ನಾಶ ಮಾಡುವುದು ಅಗತ್ಯವಾಗಿದೆ. ಮಹಿಳಾ ನ್ಯಾಯಾಲಯಗಳು ಈ ನಾಶ ಮಾಡುವ ಧ್ವನಿಗಳ ಜೊತೆ ಮಾತನಾಡುತ್ತವೆ. ಹೊಸದನ್ನು, ಭಿನ್ನ ಜ್ಞಾನ ವಲಯವನ್ನು, ಭಿನ್ನ ಮಾದರಿಗಳನ್ನು, ಲಯಗಳನ್ನು ಸೃಷ್ಟಿಸಲು ಮಹಿಳಾ ನ್ಯಾಯಾಲಯಗಳು ಪ್ರೇರಿಸುತ್ತವೆ.

ಪ್ರತಿನ್ಯಾಯಾಲಯ ಸಾರ್ವಜನಿಕ ಆಲಿಸುವಿಕೆ ಆಗಿರುತ್ತದೆ. ಕಳಕಳಿಯುಳ್ಳ ತಜ್ಞರ ಒಂದು ನ್ಯಾಯಪೀಠ ಇರುತ್ತದೆ. ಮಹಿಳೆಯರು ನೀಡುವ ಸತ್ಯ ಸಾಕ್ಷಿಗಳು ಹಾಗೂ ಇವುಗಳಿಂದ ಹೊಮ್ಮುವ ನ್ಯಾಯದ ಕಲ್ಪನೆ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೊಸ ಹೊಳವುಗಳನ್ನು ನೀಡಿ ಹಿಂಸೆಯ ವಿವಿಧ ಮುಖಗಳನ್ನು ಅರ್ಥೈಸಿಕೊಳ್ಳುವುದಕ್ಕೆ, ಹೋರಾಡುವುದಕ್ಕೆ ದಾರಿ ಮಾಡಿಕೊಡುತ್ತವೆ. ಮಹಿಳಾ ನ್ಯಾಯಾಲಯಗಳು ಸ್ಥಳೀಯವಾಗಿರುವ ಗುಂಪುಗಳ ಜೊತೆ ನಿಕಟವಾಗಿದ್ದು ಕೆಲಸ ಮಾಡುತ್ತವೆ. ಪ್ರತಿ ನ್ಯಾಯಾಲಯಕ್ಕೆ ಬೇರೆ ಬೇರೆಯಾದ ಸಾಂಸ್ಕೃತಿಕ ಮೌಲ್ಯ ಇರುತ್ತದೆ. ಇದು ಸ್ಥಳೀಯ ಗುಂಪುಗಳಿಂದ ಕೆಲವು ಸಲ ನಿರ್ಧಾರಿತವಾಗುತ್ತದೆ. ಕೆಲವು ಸಲ ಪ್ರಪಂಚದ ಹಾಗೂ ಆ ಭಾಗದ ಸಾಮಾಜಿಕ ಸಂಸ್ಥೆಗಳಿಂದ ನಿರ್ಧಾರಿತವಾಗುತ್ತದೆ.

ವಿಭಿನ್ನ ರೀತಿಯಲ್ಲಿ ನಡೆಯುವ ಮಹಿಳಾ ನ್ಯಾಯಾಲಯಗಳನ್ನು ಅದರ ಕಾರ್ಯವಿಧಾನಗಳು ಒಗ್ಗೂಡಿಸುತ್ತವೆ. ಪ್ಯಾಲೆಸ್ಟೈನ್, ಕೊಲಂಬಿಯ, ಉತ್ತರ ಕೊರಿಯ, ದಕ್ಷಿಣ ಆಫ್ರಿಕದಲ್ಲಿ ಘರ್ಷಣೆಗೆ ಸಂಬಂಧಿಸಿದಂತೆ ನ್ಯಾಯಾಲಯಗಳು ನಡೆದರೆ, ಲ್ಯಾಟಿನ್ ಅಮೆರಿಕ, ಆಫ್ರಿಕ, ಏಷಿಯಾದಲ್ಲಿ ಯುದ್ಧ, ಬಡತನದ ವಿರುದ್ಧದ ಹೋರಾಟ, ಮಹಿಳೆಯರ ಮೇಲಿನ ಹಿಂಸೆ ಕುರಿತಂತೆ ನ್ಯಾಯಾಲಯಗಳು ನಡೆದಿವೆ. ರಾಜಕೀಯ ಹಾಗೂ ಅಧಿಕಾರದ ಆಶಯಗಳನ್ನು ಭಿನ್ನ ನೆಲೆಯಲ್ಲಿ ಚರ್ಚಿಸುವ ನ್ಯಾಯದ ಕಲ್ಪನೆಯನ್ನು ವಿಭಿನ್ನ ರೀತಿಯಲ್ಲಿ ಧ್ವನಿಸುವ ಈ ನ್ಯಾಯಲಯಗಳು ಮಹಿಳೆಯರ ಮೇಲಿನ ಹಿಂಸೆ ಕುರಿತು ಯೋಚಿಸಲು ಕೂಡಾ ಆಗದು ಎಂಬಷ್ಟರ ಮಟ್ಟಿಗೆ ಸಮುದಾಯದಲ್ಲಿ ಪ್ರಭಾವವನ್ನು ಬೀರಿ ಚಳವಳಿಯ ರೂಪದಲ್ಲಿ ಬೆಳೆಯತೊಡಗಿವೆ.

❑

ಮರಳಿ ಬಂದಾಳೆ ಮಗಳು

(ಡಾಟರ್ಸ್ ಆಫ್ ಫೈರ್)

ವರದಕ್ಷಿಣೆ ಹಾಗೂ ಸಂಬಂಧಿಸಿದ ಹಿಂಸಾಚಾರ ಕುರಿತ ಭಾರತ ಮಹಿಳಾ ನ್ಯಾಯಾಲಯ

• ಸುಪ್ರಿಯಾ

ಆಳವಾಗಿ ಬೇರೂರಿದ ಪಿತೃಪ್ರಧಾನ ಸಂಸ್ಕೃತಿ ವರದಕ್ಷಿಣೆ ಹಿಂಸಾಚಾರದ ಮೂಲ ಬೇರು. ಜೊತೆಗೇ ನಮ್ಮ ಅಭಿವೃದ್ಧಿಯ ಮಾದರಿಗಳೂ ನಮ್ಮ ಸಮುದಾಯ, ಸಂಸ್ಕೃತಿಗಳನ್ನು ಬುಡಮೇಲು ಮಾಡುತ್ತಿರುವುದಲ್ಲದೆ ವರದಕ್ಷಿಣೆಯಂತಹ ಹಿಂಸಾಚಾರಗಳು ಮತ್ತಷ್ಟು ರೂಪಗಳಲ್ಲಿ ತೆರೆದುಕೊಳ್ಳಲು ಅನುವು ಮಾಡಿಕೊಡುತ್ತಿವೆ.

ವರದಕ್ಷಿಣೆ ಹಿಂಸಾಚಾರ ಈಗ ನಮ್ಮನ್ನು ಬೆಚ್ಚಿ ಬೀಳಿಸುತ್ತಿಲ್ಲ. ದಿನ ನಿತ್ಯದ ಮಾಮೂಲು ಸಂಗತಿಯಾಗಿ ಬಿಡುತ್ತಿರುವುದರಿಂದ ಅದೂ ಬದುಕಿನ ಒಂದು ಸಹಜ ಸ್ಥಿತಿಯಾಗಿ ಬಿಡುತ್ತಿದೆ. ಹೀಗಾಗಿ ಅಗೋಚರವಾಗಿಬಿಡುತ್ತಿರುವ ಕ್ರೌರ್ಯದ, ಹಿಂಸೆಯ ಕಥೆಗಳನ್ನು ಸಾರ್ವಜನಿಕರ ಸಾಕ್ಷಿ ಪ್ರಜ್ಞೆಗೆ ಮರಳಿ ತರುವುದಕ್ಕಾಗಿ ಬೆಂಗಳೂರಿನಲ್ಲಿ ಇತ್ತೀಚೆಗೆ ಒಂದು ವಿಶಿಷ್ಟ ಪ್ರಯೋಗ ನಡೆಯಿತು. ಅದು ಭಾರತ ಮಹಿಳಾ ಕೋರ್ಟ್. ರಾಷ್ಟ್ರದ ಸುಮಾರು 40 ಮಹಿಳಾ ಸಂಘಟನೆಗಳ ಜೊತೆ ಬೆಂಗಳೂರಿನ ವಿಮೋಚನಾ ಮಹಿಳಾ ಸಂಘಟನೆ ಬೆಂಗಳೂರಿನಲ್ಲಿ ಜುಲೈ 28ರಂದು ಈ ಭಾರತ ಮಹಿಳಾ ನ್ಯಾಯಾಲಯ ನಡೆಸಿತು. ಬೆಂಗಳೂರಿನ ಕ್ರೈಸ್ಟ್ ಕಾಲೇಜ್ ಕ್ಯಾಂಪಸ್‌ನಲ್ಲಿ ನಡೆದ ಈ ನ್ಯಾಯಾಲಯದಲ್ಲಿ ರಾಷ್ಟ್ರದ ವಿವಿಧ ಭಾಗಗಳ ಮಹಿಳಾ ಆಕ್ಟಿವಿಸ್ಟ್‌ಗಳು, ಹಿಂಸೆಗಳಲ್ಲಿ ನೊಂದ ಮಹಿಳೆಯರು, ಎನ್ ಜಿ ಓ ಗಳು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಈ 21ನೇ ಶತಮಾನದಲ್ಲೂ ವರದಕ್ಷಿಣೆಯಂತಹ ಸಮಸ್ಯೆಯ ದಳ್ಳುರಿ ಹೆಣ್ಣುಮಕ್ಕಳನ್ನು ಕಾಡುತ್ತಿದೆ. ಅನೇಕ ಮನೆಗಳಲ್ಲಿ ಮಹಿಳೆಯರನ್ನು ಮನುಷ್ಯರು ಎಂದೂ ಪರಿಗಣಿಸುವುದಿಲ್ಲ. ಜಾಗತೀಕರಣದ ನಂತರ ಸರಕು ಸಂಸ್ಕೃತಿಯ ಕೊಳ್ಳುಬಾಕತನ ಹೆಚ್ಚಾದಂತೆಯೇ ಹಿಂಸಾಚಾರಗಳ ಮಟ್ಟಗಳೂ ಹೆಚ್ಚಾಗುತ್ತಿವೆ. ಮಹಿಳೆಯರು ಭಾವನಾತ್ಮಕವಾಗಿ ಸ್ವತಂತ್ರ ಮನೋಭಾವ ಬೆಳೆಸಿಕೊಳ್ಳುವ ಅಗತ್ಯವನ್ನು ಈ ಬೆಳವಣಿಗೆಗಳು ಬೆರಳು ಮಾಡಿ ತೋರಿಸುತ್ತಿವೆ.

ಈ ನಿಟ್ಟಿನಲ್ಲಿ ಹಿಂಸೆಯ ನೋವುಗಳು ಹಾಗೂ ಅದೇ ರೀತಿ ಪ್ರತಿರೋಧದ ಕಥೆಗಳನ್ನು ಬೆಂಗಳೂರಿನಲ್ಲಿ ನಡೆದ ಭಾರತ ಮಹಿಳಾ ನ್ಯಾಯಾಲಯ ಆಲಿಸಿತು. 'ಡಾಟರ್ಸ್ ಆಫ್ ಫೈರ್' ಅಥವಾ 'ಮರಳಿ ಬಾ ಮಗಳೆ' ಎಂಬಂತಹ ಅರ್ಥಪೂರ್ಣ ಶೀರ್ಷಿಕೆ ಈ ಕೋರ್ಟ್‌ನದಾಗಿತ್ತು. ವರದಕ್ಷಿಣೆ ಸಮಸ್ಯೆಯ ವಿವಿಧ ಆಯಾಮಗಳು ಈ ಕೋರ್ಟ್‌ನಲ್ಲಿ ಸಾಕ್ಷ್ಯ ಮಂಡಿಸಿದ ವ್ಯಕ್ತಿಗಳಿಂದ ಅನಾವರಣಗೊಂಡಿತು.

ಸ್ತ್ರೀವಾದ ಎಂಬುದು ಪುರುಷರ ವಿರುದ್ಧದ ಹೋರಾಟವಲ್ಲ, ಮನಸ್ಥಿತಿಗಳ ವಿರುದ್ಧದ ಹೋರಾಟ ಎಂಬಂತಹ ನಿಲುವನ್ನು ಈ ನ್ಯಾಯಾಲಯದಲ್ಲಿ ತಜ್ಞ ಸಾಕ್ಷಿಗಳು ಮಂಡಿಸಿದರು. ರಾಷ್ಟ್ರಮಟ್ಟದ ಈ ನ್ಯಾಯಾಲಯದಲ್ಲಿ ನಾಗರಿಕ ಸಮಾಜದ ವಿವಿಧ ವಲಯಗಳ ಸುಮಾರು 2000 ಮಂದಿ ಪಾಲ್ಗೊಂಡಿದ್ದರು. ಈ ನ್ಯಾಯಾಲಯದಲ್ಲಿ ಆಲಿಸಲಾದ ಸಾಕ್ಷ್ಯಗಳು ಸುಮಾರು 28. ಮಹಿಳೆಯರ ಬದುಕಿಗೆ ಸಂಬಂಧಿಸಿದ ವಿವಿಧ ದೃಶ್ಯ ಸಾಕ್ಷ್ಯಗಳ ವಿಡಿಯೊ ಚಿತ್ರಗಳನ್ನೂ ಈ ಸಂದರ್ಭದಲ್ಲಿ ಪ್ರದರ್ಶಿಸಲಾಯಿತು. ಜೊತೆಗೆ ವಿವಿಧ ಸಂಪನ್ಮೂಲ ವ್ಯಕ್ತಿಗಳ ತಜ್ಞ ಸಾಕ್ಷಿಗಳು ವರದಕ್ಷಿಣೆ ಸಮಸ್ಯೆ ವಿಶ್ಲೇಷಣೆಗೆ ಸೈದ್ಧಾಂತಿಕ ನೆಲೆಗಳನ್ನೂ ಒದಗಿಸಿದವು.

ನ್ಯಾಯಾಲಯದ ಆರಂಭಕ್ಕೆ ಮುಂಚೆ ನೃತ್ಯ ಕಲಾವಿದೆ ಹಾಗೂ ಈ ನ್ಯಾಯಾಲಯದ ತೀರ್ಪುಗಾರ ಮಂಡಳಿಯ ಸದಸ್ಯೆಯೂ ಆಗಿದ್ದ ಮಲ್ಲಿಕಾಸಾರಾಭಾಯಿ ಅವರು 'ಸ್ವ-ಕ್ರಾಂತಿ' ನೃತ್ಯ ರೂಪಕ ಪ್ರದರ್ಶಿಸಿದರು. ಕವಿ ಹಾಗೂ ಮಹಿಳಾ ಆಕ್ಟಿವಿಸ್ಟ್ ಕಮಲಾ ಭಾಸಿನ್, ಪರಿಸರವಾದಿ ವಂದನಾ ಶಿವ, ಆಕ್ಟಿವಿಸ್ಟ್ ಹಾಗೂ ನ್ಯೂಯಾರ್ಕ್ ಸಿಟಿ ಯೂನಿವರ್ಸಿಟಿಯಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿರುವ ವೀಣಾ ತಲ್ವಾರ್ ಓಲ್ಡನ್‌ಬರ್ಗ್, ನೃತ್ಯ ಕಲಾವಿದೆ ಮಲ್ಲಿಕಾ ಸಾರಾಭಾಯಿ ಹಾಗೂ ಸಮಾಜ ವಿಜ್ಞಾನಿ ಶಿವ್ ವಿಶ್ವನಾಥನ್ ಅವರನ್ನೊಳಗೊಂಡ ಪ್ರತಿಷ್ಠಿತ ತೀರ್ಪುಗಾರ ಮಂಡಳಿ ನ್ಯಾಯಾಲಯದಲ್ಲಿ ಮಂಡಿಸಲಾದ ಸಾಕ್ಷಿಗಳನ್ನು ಆಲಿಸಿತು. ಕನ್ನಡ, ತಮಿಳು, ಬಂಗಾಳಿ, ತೆಲುಗು, ಹಿಂದಿ ಹೀಗೆ ವಿವಿಧ ಭಾಷೆಗಳಲ್ಲಿ ಮಂಡಿತವಾದ ಸಾಕ್ಷಿಗಳನ್ನು ಆಯಾ ಕ್ಷಣದಲ್ಲೆ ಇಂಗ್ಲಿಷ್‌ಗೆ ಅನುವಾದ ಮಾಡಿ ಕೇಳಿಸಲು ಸಭೆಯಲ್ಲಿದ್ದವರೆಲ್ಲರಿಗೂ 'ಹೆಡ್‌ಫೋನ್' ವಿತರಿಸಲಾಗಿತ್ತು.

ನಾಗರಿಕ ಸಮಾಜದಲ್ಲಿ ಪರ್ಯಾಯ ನೆಲೆ ಕಂಡುಕೊಳ್ಳುವ ಆಶಯ ಈ ಕೋರ್ಟ್‌ನದಾಗಿತ್ತು. ವರದಕ್ಷಿಣೆಗೆ ಸಂಬಂಧಿಸಿದ ವಿಚಾರಗಳನ್ನು ತಜ್ಞರಾಗಿ ಅಲ್ಲ, ಸಾಕ್ಷಿಗಳಾಗಿ ನೋಡಲು ಕರೆ ನೀಡಿದ ಸಮಾವೇಶ ಇದು.



ಈ ಬಗೆಯ ಕೋರ್ಟ್‌ಗಳ ಬಗ್ಗೆ ಮಹಿಳಾ ನ್ಯಾಯಾಲಯಗಳ ಅಂತರರಾಷ್ಟ್ರೀಯ ಸಂಯೋಜಕಿ ಕಾರಿನ್ ಕುಮಾರ್ ಹೇಳುವುದು ಹೀಗೆ: ಆಸ್ಕಿಂಗ್ ವಿ ವಾಕ್. ಇದು ಮೆಕ್ಸಿಕೊದ ಚಿಯಾಪಾಸ್‌ನ ರೈತರ ನುಡಿಗಟ್ಟು. 'ಕೇಳುವ ಕ್ರಿಯೆಯೇ ಅಧಿಕಾರ, ರಾಜಕಾರಣದ ತರ್ಕ, ಸಾರ್ವತ್ರಿಕ ಸತ್ಯಗಳಿಗೆ ಸವಾಲೆಸೆಯುವಂತಹದ್ದು' .1980ರ ದಶಕದಲ್ಲಿ ಉತ್ತರ ಭಾರತದಲ್ಲಿ ವರದಿಯಾದ ವರದಕ್ಷಿಣೆ ಸಾವುಗಳು ಸಮಾಜವನ್ನು ಬೆಚ್ಚಿ ಬೀಳಿಸಿದ್ದವು. ನಂತರ ಇದರ ವಿರುದ್ಧ ಸಾಕಷ್ಟು ಹೋರಾಟಗಳು ನಡೆದವು. ಶಾಸನಾತ್ಮಕ ಬದಲಾವಣೆಗಳೂ ಆದವು. ಆದರೂ ಈವರೆಗೆ ಏನೂ ಬದಲಾವಣೆ ಆಗಲಿಲ್ಲ. ಬದಲಿಗೆ ವರದಕ್ಷಿಣೆ ಕಿರುಕುಳದಿಂದ ಸಾಯುತ್ತಿರುವ ಮಹಿಳೆಯರ ಪ್ರಮಾಣ 15 ಪಟ್ಟು ಹೆಚ್ಚಾಗಿದೆ. ವರ್ಷಕ್ಕೆ ಈ ವರದಕ್ಷಿಣೆ ಸಾವುಗಳು 400 ಇದ್ದದ್ದು ಈಗ 5800 ಆಗಿದೆ. ಖಚಿತ ಅಂಕಿ ಅಂಶಗಳು ದೊರೆಯುವುದೂ ಕಷ್ಟ. ಹೊಸ ಹೊಸ ಸ್ವರೂಪಗಳನ್ನು ಪಡೆದು ಕೊಳ್ಳುತ್ತಿರುವ ಈ ಹಿಂಸಾಚಾರದ ಆಳ ಅಗಲಗಳನ್ನು ಅರಿಯುವುದೂ ಕ್ಲಿಷ್ಟಕರ ಎಂದಾಗುತ್ತಿದೆ.

1997ರಲ್ಲಿ ವಿಮೋಚನಾ ನಡೆಸಿದ ಅಧ್ಯಯನದ ಸಂದರ್ಭದಲ್ಲಿ ವ್ಯಕ್ತವಾದ ಅಂಶಗಳಿವು: 1997ರಲ್ಲಿ ಬೆಂಗಳೂರಿನಲ್ಲಿ ವರದಿಯಾದ 1133 ಅಸಹಜ ಸಾವುಗಳ ಪ್ರಕರಣಗಳಲ್ಲಿ 157 ಪ್ರಕರಣಗಳನ್ನು ಮಾತ್ರ ಕೊಲೆ ಎಂದು ಪರಿಗಣಿಸ ಲಾಗಿತ್ತು. 546 ಪ್ರಕರಣಗಳನ್ನು ಆತ್ಮಹತ್ಯೆ ಹಾಗೂ 430 ಪ್ರಕರಣಗಳನ್ನು ಅಪಘಾತ ಎಂದು ಪರಿಗಣಿಸಲಾಗಿತ್ತು. ಜೊತೆಗೆ 1997ರ ಜನವರಿಯಿಂದ ಫೆಬ್ರವರಿವರೆಗೆ ವರದಿಯಾದ 550 ಪ್ರಕರಣಗಳಲ್ಲಿ ಶೇ. 71ರಷ್ಟು ಪ್ರಕರಣ ಗಳನ್ನು ಅಡುಗೆ ಅಪಘಾತಗಳು ಹಾಗೂ ಸ್ಟೋವ್ ಸಿಡಿತ ಪ್ರಕರಣಗಳೆಂದು ಮುಚ್ಚಲಾಗಿತ್ತು.

ಕಾನೂನಿನ ಪ್ರಕಾರ, ವರದಕ್ಷಿಣೆ ಹಾಗೂ ವರದಕ್ಷಿಣೆ ಬೇಡಿಕೆಗಳು ಅಪರಾಧವಿರಬಹುದು. ಆದರೆ ನಿಜಜೀವನದಲ್ಲಿ ವರದಕ್ಷಿಣೆ ಎಂಬುದು ವಿವಾಹದೊಳಗೆ ಅಂತರ್ಗತವಾಗಿದೆ. ಭ್ರಷ್ಟಾಚಾರದಂತೆ ಹೊರಗೆ ವರದಕ್ಷಿಣೆ

ವರದಕ್ಷಿಣೆಗೆ ಬಲಿಯಾದ ಆದಿವಾಸಿ ಹುಡುಗಿ ಶೋಭನಾ

ಆದಿವಾಸಿ ಜನಾಂಗಕ್ಕೆ ಸೇರಿದ ಶೋಭನಾ ಎರ್ನಾಕುಲಂ ಮಹರಾಜಾ ಕಾಲೇಜಿನಲ್ಲಿ ಬಿ.ಎಸ್‌ಸಿ. ಮುಗಿಸಿದ್ದಳು. ಡಿಪ್ಲೊಮೊ ಮಾಡಿದ ನಂತರ ಕೆಲಸಕ್ಕೆ ಸೇರಿದ್ದಳು. ಪ್ರತಿನಿತ್ಯ ಕಾಲೇಜಿಗೆ ಹೋಗುವಾಗ ಬಸ್ ಡ್ರೈವರ್ ಶಿವರಂಜನ್ ಪರಿಚಯವಾಗಿ, ಇಬ್ಬರೂ ಪರಸ್ಪರ ಪ್ರೀತಿಸತೊಡಗಿದರು. ಶಿವರಂಜನ್ ತಮಿಳು ಗೌಡ ಸಮುದಾಯಕ್ಕೆ ಸೇರಿದವನಾಗಿದ್ದನು. ಆತನ ಕುಟುಂಬದವರ ವಿರೋಧದ ನಡುವೆಯೂ ಅವರು ವಿವಾಹವಾಗಿದ್ದರು.

ಮದುವೆಯ ನಂತರ ಶಿವರಂಜನ್ ಹೆಂಡತಿಯನ್ನು ವರದಕ್ಷಿಣೆಗಾಗಿ ಹಿಂಸಿಸತೊಡಗಿದ. ಚಿನ್ನದ ಚೈನು ಹಾಗೂ ವಾಹನವನ್ನು ಕೊಡಿಸುವಂತೆ ಪೀಡಿಸುತ್ತಾ ಪ್ರತಿನಿತ್ಯ ಆಕೆಯೊಂದಿಗೆ ಜಗಳವಾಡತೊಡಗಿದ. ಹೆಂಡತಿಯನ್ನು ಪ್ರತಿದಿನ ತಾಯಿಯ ಮನೆಗೆ ಕಳಿಸತೊಡಗಿದ.

ಶೋಭನಾ ಗರ್ಭಿಣಿಯಾಗಿದ್ದಳು. ಪಾಲಕಾಡ್ ಆಸ್ಪತ್ರೆಯಲ್ಲಿ ಆಕೆಗೆ ಹೆರಿಗೆಯಾಗಿ ಗಂಡುಮಗು ಜನಿಸಿತು. ಆದರೆ ವಿಪರೀತ ರಕ್ತಸ್ರಾವ ವಿರುವುದರಿಂದ ಆಕೆ ಕೆಲವು ದಿನ ಆಸ್ಪತ್ರೆಯಲ್ಲಿಯೇ ಉಳಿಯಬೇಕಾಯಿತು. ಗಂಡನ ಮನೆಯವರು ಆಸ್ಪತ್ರೆಗೆ ಬಂದು ಮಗುವನ್ನು ಕಿತ್ತುಕೊಂಡು ಹೋದರು. ಆದರೆ ಹಲವರ ಬೆಂಬಲ ಹಾಗೂ ಸಹಕಾರದಿಂದ ಮಗುವನ್ನು ಪುನಃ ಪಡೆಯಲಾಯಿತು.

ಮೂರು ತಿಂಗಳ ನಂತರ ಶೋಭನಾ ಕೆಲಸಕ್ಕೆ ಹೋಗತೊಡಗಿದಳು. ಆಕೆಯ ತಂದೆ ತಾಯಿ ತುಂಬಾ ಬಡವರಾಗಿದ್ದರಿಂದ, ತಂಗಿಯ ಹಾಗೂ ತಮ್ಮನ ವಿದ್ಯಾಭ್ಯಾಸದ ಹೊಣೆ ಶೋಭನಾಳ ಮೇಲಿತ್ತು. ಒಂದು ದಿನ ಶೋಭನಾ ತನ್ನ ತಮ್ಮನಿಗೆ ಒಂದು ಶರ್ಟನ್ನು ತಂದ ಕಾರಣಕ್ಕಾಗಿ ಶಿವರಂಜನ್ ಹೆಂಡತಿಯೊಡನೆ ಜಗಳ ಪ್ರಾರಂಭಿಸಿ, ಆಕೆಯನ್ನು ಬಲವಾಗಿ ಹಿಡಿದುಕೊಂಡು ಸೀಮೆಎಣ್ಣೆಯನ್ನು ಸುರಿದು ಬೆಂಕಿಯನ್ನು ಹಚ್ಚಿದ. ಬೆಂಕಿ ಹಚ್ಚುವ ಮೊದಲು ಆಕೆಯ ಕತ್ತಿನಲ್ಲಿದ್ದ ಚೈನು ಹಾಗೂ ಕಾಲು ಚೈನನ್ನು ತೆಗೆದುಕೊಂಡಿದ್ದನು. ಸೀಮೆಎಣ್ಣೆಯ ದೀಪದಿಂದ ಆಕೆಗೆ ಬೆಂಕಿ ಹತ್ತಿದೆ ಎಂಬ ಕಾರಣ ನೀಡಿ ಹತ್ತಿರದಲ್ಲಿದ್ದ ಆಸ್ಪತ್ರೆಗೆ ಸೇರಿಸಿದ್ದ. ಶೋಭನಾ ಸಂಪೂರ್ಣವಾಗಿ ಬೆಂದು ಹೋಗಿದ್ದಳು.

ಬೆಂಕಿಯಲ್ಲಿ ಬೆಂದು ಹೋದ ಮಗಳನ್ನು ನೋಡಲು ತಂದೆ ತಾಯಿ ಬಂದರು. ಆಕೆಯ ಸಹೋದ್ಯೋಗಿಯೊಬ್ಬರ ನೆರವಿನಿಂದ ಆಕೆಯನ್ನು ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಸೇರಿಸಲಾಯಿತು. ಆಕೆ ಎಷ್ಟು ತೀವ್ರವಾಗಿ ಸುಟ್ಟು ಹೋಗಿದ್ದಳೆಂದರೆ ಆಕೆಯ ಕಣ್ಣುಗಳು ಸಹ ಬೆಂದು ಹೋಗಿದ್ದವು. ವೈದ್ಯರು ಆಕೆಯ ಕಣ್ಣನ್ನು ಮುಟ್ಟಿದಾಗ ಕಣ್ಣಿನ ಗುಡ್ಡೆಗಳು ಸಿಡಿದು ಹೋದವು. ಶೋಭನಾ ಸಾಯುವ ಮೊದಲು ತನ್ನ ಮಗುವನ್ನು ಗಂಡನಿಗೆ ಕೊಡಬೇಡಿರೆಂದೂ ಅದನ್ನು ಅವನು ಸಾಯಿಸಿ ಬಿಡುತ್ತಾನೆಂದೂ ತನ್ನ ಕೊನೆಯ ಆಸೆಯನ್ನು ವ್ಯಕ್ತಪಡಿಸಿದ್ದಳು. ಈಗ ಮಗುವಿಗೆ ಒಂದೂವರೆ ವರ್ಷವಾಗಿದೆ. ಶೋಭನಾಳ ಕುಟುಂಬ ಬಡತನದಿಂದ ಸಂಪೂರ್ಣ ದುಸ್ಥಿತಿಗೆ ತಲುಪಿದೆ. ತಂದೆ-ತಾಯಿಯ ಆರೋಗ್ಯ ಹದಗೆಟ್ಟಿದೆ. ತಮ್ಮ ಹಾಗೂ ತಂಗಿ ಇಬ್ಬರೂ ವಿದ್ಯಾಭ್ಯಾಸವನ್ನು ನಿಲ್ಲಿಸಿದ್ದಾರೆ. ವರದಕ್ಷಿಣೆ ಶೋಭನಾಳನ್ನು ಬಲಿ ತೆಗೆದುಕೊಂಡಿತಲ್ಲದೆ, ಅವಳ ಕುಟುಂಬವನ್ನೂ ಅವನತಿಯ ಹಾದಿಗೆ ತಳ್ಳಿದೆ.

ಸತ್ಯ ಸಾಕ್ಷಿಯ ನಿರೂಪಣೆ: ***ಶಿವಪ್ರಭಾ***
(ಶೋಭನಾಳ ಸಹೋದರಿ)

ಖಂಡಿಸಲಾಗುತ್ತದೆ. ಒಳಗೊಳಗೇ ವರದಕ್ಷಿಣೆ ಆಚರಣೆಗೆ ಕುಮ್ಮಕ್ಕು ನೀಡಲಾಗುತ್ತದೆ. ಇಷ್ಟೆಲ್ಲಾ ಕಾನೂನುಗಳಲ್ಲಿ ಬದಲಾವಣೆ ಆದರೂ ಮಹಿಳಾ ಹೋರಾಟ ಭಾರಿ ಪ್ರಭಾವ ಬೀರಿದ್ದರೂ, ವರದಕ್ಷಿಣೆ ವಿರೋಧಿ ಸೆಲ್‌ಗಳು ರಚನೆಯಾಗಿದ್ದರೂ ವರದಕ್ಷಿಣೆ ಹಾಗೂ ಸಂಬಂಧಿಸಿದ ಹಿಂಸಾಚಾರಗಳು ಮಹಿಳೆಯರನ್ನು ಬಲಿ ತೆಗೆದುಕೊಳ್ಳುತ್ತಲೇ ಇವೆ.

ಏಕೆ ಹೀಗೆ? ಆಳವಾಗಿ ಬೇರೂರಿದ ಪಿತೃಪ್ರಧಾನ ಸಂಸ್ಕೃತಿ ಈ ಹಿಂಸಾಚಾರದ ಮೂಲ ಬೇರು. ನಂತರ ವಸಾಹತುಶಾಹಿಯ ಪರಂಪರೆ, ಅಭಿವೃದ್ಧಿಯ ಮಾದರಿಗಳು ನಮ್ಮ ಸಮುದಾಯ, ಸಂಸ್ಕೃತಿಗಳನ್ನು ಬುಡಮೇಲು ಮಾಡುತ್ತಿರುವುದಲ್ಲದೆ ವರದಕ್ಷಿಣೆ ಯಂತಹ ಹಿಂಸೆಯನ್ನು ಕಿತ್ತುಹಾಕುವ ಬದಲು ಈ ಹಿಂಸಾಚಾರವನ್ನು ಮತ್ತಷ್ಟು ರೂಪಗಳಲ್ಲಿ ತೆರೆದುಕೊಳ್ಳಲು ಅನುವು ಮಾಡಿಕೊಡುತ್ತಿವೆ. ಇದಕ್ಕೆ ಅಭಿವ್ಯಕ್ತಿ ನೀಡುವುದೇ ಮಹಿಳಾ ನ್ಯಾಯಾಲಯದ ಉದ್ದೇಶವಾಗಿತ್ತು. ಅನುಭವ, ಜ್ಞಾನ, ಭಾವನೆಗಳನ್ನು ಹಂಚಿಕೊಳ್ಳುವ ವೇದಿಕೆ ಇದಾಗಿತ್ತು. ಕರ್ನಾಟಕದ ವಿವಿಧ ಭಾಗಗಳು, ದೆಹಲಿ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಕೋಲ್ಕತ್ತ , ಮಧ್ಯಪ್ರದೇಶ – ಹೀಗೆ ವಿವಿಧ ಭಾಗಗಳಿಂದ ಈ ಕೋರ್ಟ್‌ಗೆ ಆಗಮಿಸಿದ ನೊಂದ ಮಹಿಳೆಯರು ತಮ್ಮ ನೋವು ಹಾಗೂ ಪ್ರತಿರೋಧದ ಕಥೆಗಳನ್ನು ಈ ನ್ಯಾಯಾಲಯದಲ್ಲಿ ಮಂಡಿಸಿದರು.

ಈ ಕಥೆಗಳಲ್ಲಿ ವ್ಯಕ್ತವಾದ ಅಂಶವೆಂದರೆ ವರದಕ್ಷಿಣೆ ಹೊಸ ಹೊಸ ಸಮಕಾಲೀನ ರೂಪಗಳನ್ನು ಪಡೆದುಕೊಳ್ಳುತ್ತಿದೆ. ಮಹಿಳೆಯ ಅಪಮೌಲ್ಯೀಕರಣದ ಹೊಸ ಹೊಸ ರೂಪಗಳೂ ಅನಾವರಣ ಗೊಳ್ಳುತ್ತಿವೆ. ಉದಾಹರಣೆಗೆ ಕಡಿಮೆಯಾಗುತ್ತಿರುವ ಹೆಣ್ಣುಮಕ್ಕಳ ಸಂಖ್ಯೆಯನ್ನು ಢಾಳಾಗಿ ಸೂಚಿಸುತ್ತಿರುವ ಲಿಂಗಾನುಪಾತ, ಹೆಣ್ಣುಮಗುವಿನ ಸಾಗಣೆ, ವರದಕ್ಷಿಣೆಗಾಗಿ ಕಾಸು ಸಂಪಾದಿಸಲು ಅನಿವಾರ್ಯವಾಗಿ ಬೇರೆ ಊರುಗಳಿಗೆ ಹೋಗಿ ಕೆಲಸ ಮಾಡಬೇಕಾದ ಅನಿವಾರ್ಯತೆ, ಮದುವೆ ಮಾರುಕಟ್ಟೆಯಲ್ಲಿ ಹೆಣ್ಣುಮಕ್ಕಳ ಮಾರಾಟ, ಲೈಂಗಿಕ ಹಿಂಸೆಯ ಹೊಸ ಸ್ವರೂಪಗಳು ಇತ್ಯಾದಿ.

ವರದಕ್ಷಿಣೆ ವಿರುದ್ಧದ ಕಾನೂನು ಈ ಪಿಡುಗು ತಡೆಗೆ ವಿಫಲವಾಗಿದೆ. ವರದಕ್ಷಿಣೆ ಸಂಸ್ಕೃತಿಯೇ ಇಲ್ಲದ ಸಮುದಾಯಗಳೂ ಇಂದು ವರದಕ್ಷಿಣೆಗೆ ಉತ್ತೇಜನ ನೀಡುತ್ತಿವೆ. ನ್ಯಾಯದ ಭಾಷೆ ಕಳೆದುಹೋಗಿದೆ. ಕೋರ್ಟ್‌ನಲ್ಲಿ ನೊಂದ ಮಹಿಳೆಯರ ನೋವು ಹಾಗೂ ಪ್ರತಿರೋಧದ ಕಥೆಗಳನ್ನು ಕೇಳುವ ಮೂಲಕ ಈ ನ್ಯಾಯದ ಭಾಷೆಯನ್ನು ಪುನರ್ ದಕ್ಕಿಸಿಕೊಳ್ಳುವ ಯತ್ನವೂ ಈ ಕೋರ್ಟ್‌ನಲ್ಲಿತ್ತು.

ಹೆಣ್ಣು ಭ್ರೂಣಹತ್ಯೆಯ ಕರಾಳ ಮುಖಗಳನ್ನು ಡಾ॥ ಸಾಬು ಜಾರ್ಜ್ ತೆರೆದಿಟ್ಟಿದ್ದು ಹೀಗೆ : ಅಮೆರಿಕದಲ್ಲಿ ಹುಟ್ಟುವ ಬಾಲೆಯರ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಬಾಲೆಯರನ್ನು ಭಾರತ ಹಾಗೂ ಚೀನಾ ಒಟ್ಟಾಗಿ ವಿನಾಶಗೊಳಿಸುತ್ತಿವೆ. ಲಕ್ಷಾಂತರ ಬಾಲೆಯರು ಇಳೆಗಿಳಿಯುವ ಮೊದಲೇ ಹತ್ಯೆಗೊಳಗಾಗುತ್ತಿರುವುದರಿಂದ ಬರಲಿರುವ 2011ರ ಜನಗಣತಿ ಹೆಣ್ಣುಮಕ್ಕಳ ಸಂಖ್ಯೆಯ ವಿಚಾರದಲ್ಲಿ ಇನ್ನೂ ಕೆಟ್ಟದ್ದಾಗಿರುತ್ತದೆ. ಲಿಂಗ ಆಯ್ಕೆ ಹಾಗೂ ಅಲ್ಟ್ರಾ ಸೌಂಡ್ ಯಂತ್ರಗಳ ಮಾರಾಟ ಹೆಚ್ಚಳ ಈಗ ದೂರದ ಆದಿವಾಸಿ ಪ್ರದೇಶಗಳಿಗೂ ತಲುಪುವಂತಾಗಿದೆ. ಸುಪ್ರೀಂಕೋರ್ಟ್‌ನಲ್ಲಿ ಹೆಣ್ಣುಭ್ರೂಣಹತ್ಯೆಯ ವಿರುದ್ಧ ಸಾಬು ಜಾರ್ಜ್ ಅವರು ಹಾಕಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ರಾಷ್ಟ್ರದಾದ್ಯಂತ ಪಿಎನ್‌ಡಿಟಿ ಕಾಯಿದೆಯ ಅನುಷ್ಠಾನಕ್ಕೆ ಕಾರಣವಾಗಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಹೆಚ್ಚುತ್ತಿರುವ ಆರ್ಥಿಕ ಹಾಗೂ ಸಾಂಸ್ಕೃತಿಕ ಮೂಲಭೂತವಾದದ ಹಿನ್ನೆಲೆಯಲ್ಲಿ ವರದಕ್ಷಿಣೆ, ಕುಟುಂಬ ಹಾಗೂ ಮದುವೆಯನ್ನು ಪುನರ್ವಿಮರ್ಶಿಸಿದ ಆಕ್ಷನ್ ಇಂಡಿಯಾದ ಗೌರಿ ಚೌಧರಿ "1964ರ ವರದಕ್ಷಿಣೆ ನಿಷೇಧ ಕಾಯಿದೆ ಎಂದೂ ಜಾರಿಯಾಗಲೇ ಇಲ್ಲ. ಏಕೆಂದರೆ ಕಾನೂನನ್ನು ಉಲ್ಲಂಘಿಸಿದವರು ವರದಕ್ಷಿಣೆ ಕೊಟ್ಟವರೋ ಅಥವಾ ತೆಗೆದುಕೊಂಡವರೋ ಎಂಬುದನ್ನು ನಮಗೆ ನಿರ್ಧರಿಸಲು ಆಗಲೇ ಇಲ್ಲ. ವರದಕ್ಷಿಣೆ ವಿವರಣೆ ಹಾಗೂ ಮದುವೆ ಕಾಲದಲ್ಲಿ ಸ್ವಯಂಪ್ರೇರಿತರಾಗಿ ನೀಡಲಾದ ಉಡುಗೊರೆಗಳ ಬಗ್ಗೆಯೇ ಭಾರಿ ಗೊಂದಲ ಇತ್ತು" ಎನ್ನುತ್ತಾರೆ.

ಮಾರುಕಟ್ಟೆ ಶಕ್ತಿಗಳಿಂದ ಪ್ರಭಾವಿತವಾಗಿ ಪರಿಶಿಷ್ಟ ಜಾತಿ ಹಾಗೂ ವರ್ಗಗಳಲ್ಲೂ ವರದಕ್ಷಿಣೆ ಕೊಡು ಕೊಳ್ಳುವಿಕೆಯ ಆಚರಣೆ ಹೆಚ್ಚಿರುವುದು ಅಧ್ಯಯನಗಳಿಂದ ದೃಢಪಟ್ಟಿದೆ. ದೆಹಲಿಯ ಎನ್‌ಜಿಓ ಜಾಗೋರಿಯ ನಂದಿನಿಯ ಪ್ರಕಾರ, ಪುರುಷರ ಅಹಂ ಆರಾಧನೆಗೊಳ್ಳುತ್ತಾ ಮಹಿಳೆಯ ಕೀಳರಿಮೆ ಹೆಚ್ಚಾಗುವ ಸನ್ನಿವೇಶದಲ್ಲಿ ಹಿಂಸೆ ಅನಿವಾರ್ಯ ಭಾಗವಾಗಿರುತ್ತದೆ. ಜನಸಂಖ್ಯೆ ಹಾಗೂ ಆರೋಗ್ಯ ಸಮೀಕ್ಷೆಗಳ ಪ್ರಕಾರ ಶೇ. 46ರಷ್ಟು ವಿದ್ಯಾಭ್ಯಾಸವಿಲ್ಲದ ವಿವಾಹಿತೆಯರು ಇತರ ಮಹಿಳೆಯರಿಗಿಂತ ಹೆಚ್ಚು ಗಂಡನ ಹಿಂಸೆ ಅನುಭವಿಸುವ ಸಾಧ್ಯತೆ ಇದೆ. 2007ರ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ ಪ್ರಕಾರ, ರಾಷ್ಟ್ರದಲ್ಲಿ ವರದಕ್ಷಿಣೆ ಸಾವಿನ ಅಡಿ ದಾಖಲಾದ ಪ್ರಕರಣಗಳ ಪ್ರಮಾಣದಲ್ಲಿ ಶೇ. 6.2ರಷ್ಟು ಏರಿಕೆಯಾಗಿದೆ.

ಗೋವಾದ ಬೈಲಾಂಚೊ ಮಂಚ್‌ನ ಕ್ಯಾರೊಲಿನ್ ಕೊಲಾಸೊ ಪ್ರಕಾರ, ವರದಕ್ಷಿಣೆ ಕಾಯಿದೆಯಲ್ಲಿ ಹಲವು ಸಮಸ್ಯೆಗಳಿವೆ. ವರದಕ್ಷಿಣೆ ಕಿರುಕುಳ ಪ್ರಕರಣ ದಾಖಲಿಸುವಲ್ಲಿ ಪೊಲೀಸರೂ ಉತ್ಸಾಹ ತೋರುವುದು ಕಡಿಮೆ. ಸಾಕ್ಷ್ಯಗಳ ಕೊರತೆಯಿಂದ ವಿಚಾರಣೆಯಲ್ಲಿ ವಿಳಂಬವಾಗುತ್ತಿದೆ, ಇದು ವರದಕ್ಷಿಣೆ ಕಿರುಕುಳಕ್ಕೊಳಗಾದವರು ಹಾಗೂ ಕುಟುಂಬ ಸದಸ್ಯರಲ್ಲಿ ಒಂದು ಬಗೆಯ ಹತಾಶೆಯನ್ನು ತರುತ್ತದೆ.

ಗ್ರಾಮ್ಯದ ರುಕ್ಮಿಣಿ ರಾವ್ ಅವರ ಪ್ರಕಾರ 2005ರ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ರಕ್ಷಣೆ ಕಾಯಿದೆಯು ಪ್ರಗತಿಪರವಾದದ್ದು. ರಕ್ಷಣಾ ಅಧಿಕಾರಿ (ಪ್ರೊಟೆಕ್ಷನ್ ಆಫೀಸರ್ಸ್)ಗಳ ಸಿಬ್ಬಂದಿಯನ್ನು ಸೃಷ್ಟಿಸಲಾಗುತ್ತದೆ. ಆದರೆ, ಇದು ಇನ್ನೂ ಪೂರ್ಣವಾಗಿ ಕಾರ್ಯಗತಗೊಂಡಿಲ್ಲದಿರುವುದನ್ನು ಅವರು ಟೀಕಿಸುತ್ತಾರೆ. ಮಹಿಳಾ ಪೊಲೀಸ್ ಠಾಣೆಗಳು, ಮಹಿಳಾ ಅಪರಾಧಗಳನ್ನು ನಿರ್ವಹಿಸಲು ವಿಶೇಷ ಸೆಲ್‌ಗಳು ಈ ಎಲ್ಲಾ ವ್ಯವಸ್ಥೆಗಳ ಮಧ್ಯೆಯೂ ವರದಕ್ಷಿಣೆ ಸಾವುಗಳು 15 ಪಟ್ಟು ಹೆಚ್ಚಾಗಿರುವುದಕ್ಕೆ ವಿಷಾದ ವ್ಯಕ್ತ ಪಡಿಸುತ್ತಾರೆ ಅವರು.

ಇಂದು ಸಮಾಜ ಹುಡುಗಿಗೆ ಗಟ್ಟಿಯಾಗಿರುವುದು, ಸ್ವತಂತ್ರವಾಗಿರುವುದನ್ನು ಕಲಿಸುತ್ತಿದೆ. ಆದರೆ ಅದೇ ರೀತಿ ಹುಡುಗನಿಗೂ ತಾಳ್ಮೆಯಿಂದಿರುವುದು ಸಂವೇದನಾಶೀಲರಾಗಿರುವುದು ಮೃದುವಾಗಿರುವುದನ್ನು ಕಲಿಸಲಾಗುತ್ತಿಲ್ಲ. ಮಹಿಳಾ ಹಕ್ಕುಗಳು ಬರೀ ಮಹಿಳೆಯರ ವಿಚಾರವಲ್ಲ ಎಂಬುದು ನಮ್ಮ ಸಮಾಜದಲ್ಲಿ ಬೇರೂರಬೇಕಾಗಿರುವುದು ಮುಖ್ಯ . ಈ ನ್ಯಾಯಾಲಯದಲ್ಲಿ ಆಶಯ ಭಾಷಣ ಮಾಡಿದ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು ಜುಲೈ 28ರ ದಿನ ವರದಕ್ಷಿಣೆ ವ್ಯವಸ್ಥೆಗೆ ಮರಣದಂಡನೆ ದಿನವಾಗಿ ಘೋಷಿತವಾಗಬೇಕು ಎಂದು ಗಟ್ಟಿಯಾಗಿ ಹೇಳಿ ಈ ಕೋರ್ಟ್‌ಗೆ ಪೂರಕವಾದ ದನಿಯನ್ನು ತುಂಬಿದ್ದು ವಿಶಿಷ್ಟವಾಗಿತ್ತು.

ಮಹಿಳಾ ಕೋರ್ಟ್–ನಡೆದು ಬಂದ ಹಾದಿ

ಈ ಮಹಿಳಾ ಕೋರ್ಟ್ ಪರಿಕಲ್ಪನೆ ಜನ್ಮ ತಳೆದಿದ್ದು 1992ರಲ್ಲಿ. ಆಗಿನಿಂದ ಈವರೆಗೆ ಒಟ್ಟು 30 ನ್ಯಾಯಾಲಯಗಳು ಜಗತ್ತಿನ ವಿವಿಧೆಡೆ ನಡೆದಿವೆ. ಆಯಾಯ ಸ್ಥಳೀಯ ಸಮಸ್ಯೆಗಳ ಆದ್ಯತೆಗಳಿಗೆ ಅನುಸಾರವಾಗಿ ಸ್ಥಳೀಯ ಸಂಘಟನೆಗಳ ನಿರ್ಣಯಗಳ ಅನುಸಾರ ಪ್ರತಿ ಕೋರ್ಟ್‌ನ ಸಂವೇದನೆ, ಒತ್ತು ಭಿನ್ನವಾಗಿರುತ್ತವೆ. ದಶಕಗಳ ಅನುಭವದಲ್ಲಿ ಈ ಕೋರ್ಟ್‌ಗಳೇ ಒಂದು ಚಳವಳಿಯಾಗಿ ಬೆಳೆಯುತ್ತಿವೆ.

ಕಾಣೆಯಾಗುತ್ತಿರುವ ಪುತ್ರಿಯರು

2001ರ ಸೆಕ್ಸ್ ರೇಷಿಯೊ (ಲಿಂಗ ಅನುಪಾತ) – 933: 1,000

2006ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್) ಪ್ರಕಾರ, ಗ್ರಾಮೀಣ ಪ್ರದೇಶಗಳಲ್ಲಿ ಲಿಂಗಾನುಪಾತ ಇಳಿಮುಖವಾಗಿದೆ. 921: 1000.

2006ರ ಎನ್‌ಎಫ್‌ಎಚ್‌ಎಸ್ (ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ) ಪ್ರಕಾರ, ಪ್ರತಿ 5 ಮಹಿಳೆಯರಲ್ಲಿ ಒಬ್ಬರು ಕೌಟುಂಬಿಕ ಹಿಂಸೆ ಅನುಭವಿಸಿರುತ್ತಾರೆ.

ಈ ಕೋರ್ಟ್‌ನಲ್ಲಿ ಸಾಕ್ಷ್ಯಗಳ ಆಲಿಸುವಿಕೆಯ ಹಿಂದಿನ ದಿನ ತಜ್ಞ ಸಂಪನ್ಮೂಲ ವ್ಯಕ್ತಿಗಳ ಜೊತೆಗೆ ವಿವಿಧ ವಿಚಾರಗಳ ಕುರಿತಂತೆ 6 ದುಂಡು ಮೇಜಿನ ಸಮಿತಿ ಸಭೆಗಳು ನಡೆದವು. ವಸಾಹತೋತ್ತರ ಸಮಾಜ ಹಾಗೂ ಹೆಚ್ಚುತ್ತಿರುವ ಆರ್ಥಿಕ, ಸಾಂಸ್ಕೃತಿಕ ಮೂಲಭೂತವಾದದ ಹಿನ್ನೆಲೆಯಲ್ಲಿ ವರದಕ್ಷಿಣೆ, ಕುಟುಂಬ ಹಾಗೂ ವಿವಾಹದ ಪುನರ್ವಿಮರ್ಶೆ ಕುರಿತ ಸಭೆಯನ್ನು ನಡೆಸಿಕೊಟ್ಟವರು ದೆಹಲಿಯ ಜಾಗೋರಿಯ ನಂದಿನಿ ರಾವ್, ಆಕ್ಷನ್ ಇಂಡಿಯಾದ ಗೌರಿ ಚೌಧರಿ ಹಾಗೂ ಬೆಂಗಳೂರಿನ ಮಾನಸದ ಎಚ್.ಎಸ್. ಚಂಪಾವತಿ.

ಹಿಂಸಾಚಾರ, ಅಸ್ಮಿತೆ, ಪ್ರತಿನಿಧೀಕರಣ, ಸ್ವಾಯತ್ತೆ ಕುರಿತ ಮಾಧ್ಯಮ ಪುನರ್‌ರಚನೆ ;

ವರದಕ್ಷಿಣೆ ಹಾಗೂ ಸರಬಂಧಿಸಿದ ಹಿಂಸಾಚಾರಗಳಿಗೆ ಸಂಬಂಧಿಸಿದಂತೆ ಕಾನೂನುಗಳು ಹಾಗೂ ನ್ಯಾಯದ ಪರ್ಯಾಯ ಮಾರ್ಗಗಳ ವಿಶ್ಲೇಷಣೆ; ಜಾಗತೀಕರಣ ಹಾಗೂ ಮಹಿಳೆ ವಿರುದ್ಧದ ಹಿಂಸಾಚಾರ –ಬದಲಾಗುತ್ತಿರುವ ಸರ್ಕಾರದ ಸ್ವರೂಪದ ಹಿನ್ನೆಲೆಯಲ್ಲಿ ಸರ್ಕಾರದ ನೀತಿಗಳ ಪುನರ್ವಿಮರ್ಶೆ; ಹೆಣ್ಣು ಭ್ರೂಣಹತ್ಯೆ, ವಿಜ್ಞಾನ ಹಾಗೂ ವೈದ್ಯಕೀಯ ತಂತ್ರಜ್ಞಾನದ ಪಾತ್ರ ಕುರಿತಂತೆ ನಡೆದ ದುಂಡುಮೇಜಿನ ಸಮಿತಿ ಸಭೆಗಳಲ್ಲಿ ವಿವಿಧ ತಜ್ಞರು ಪಾಲ್ಗೊಂಡು ಚರ್ಚೆಗಳಿಗೆ ಚಾಲನೆ ನೀಡಿದರು. ಮತ್ತೊಂದು ದುಂಡುಮೇಜಿನ ಸಮಿತಿ ಸಭೆಯಲ್ಲಿ (ಹಕ್ಕಿಗಳ ಸಮಾವೇಶ) ಕಥೆ, ಕವನ ಹಾಗೂ ಪ್ರತಿರೋಧದ ಕಥೆಗಳನ್ನು ಹಂಚಿಕೊಳ್ಳಲಾಯಿತು.

ಒಟ್ಟಾರೆ ಈ ಮಹಿಳಾ ನ್ಯಾಯಾಲಯ ವ್ಯಕ್ತಿಗತ ಸಾಕ್ಷ್ಯಗಳ ಮೂಲಕ ವಸ್ತುನಿಷ್ಠ ವಾಸ್ತವವನ್ನು ಅರಿತುಕೊಳ್ಳುವ ಯತ್ನವಾಗಿತ್ತು. ಇಲ್ಲಿ ನ್ಯಾಯಾಲಯ ಸಾಂಕೇತಿಕ. ಈ ನ್ಯಾಯಾಲಯ ಧ್ವನಿಸುವುದು ಹೊಸ ನೆಲೆಗಳು ಹಾಗೂ ಜ್ಞಾನ–ರಾಜಕಾರಣದ ಹೊಸ ಪರಿಭಾಷೆಗಳ ಸೃಷ್ಟಿ. ಲಕ್ಷ್ಮಣರೇಖೆಯನ್ನು ದಾಟುವ ಕನಸು ಇದು.

❑



ಸಾವಿಗೆ ಶರಣಾದ ರೈತರು, ಬದುಕಿನ ಹೊರೆ ಹೊತ್ತ ಮಹಿಳೆಯರು

● *ರಂಜನಾ ಪಾಡಿ*

ಪಂಜಾಬ್ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳ ನಂತರದ ಸಂದರ್ಭದಲ್ಲಿ ಮಹಿಳೆಯರ ಪರಿಸ್ಥಿತಿ ಹೇಗಿದೆ ಎಂಬುದನ್ನು ಕುರಿತ ಲೇಖನವಿದು. ಆ ರಾಜ್ಯದ ಮೂರು ಜಿಲ್ಲೆಗಳಲ್ಲಿ 32 ಮಹಿಳೆಯರನ್ನು ವಿವರವಾಗಿ ಸಂದರ್ಶಿಸಿ ಈ ಲೇಖನವನ್ನು ಬರೆಯಲಾಗಿದೆ. ಕೃಷಿ ಕ್ಷೇತ್ರದ ಬಿಕ್ಕಟ್ಟಿನಲ್ಲಿ ಸಿಲುಕಿರುವುದಲ್ಲದೆ ಮದುವೆ ಮತ್ತು ಕುಟುಂಬ ವ್ಯವಸ್ಥೆಗಳು ಒಡ್ಡಿರುವ ಹೊಸ ರೀತಿಯ ಸಂಕಷ್ಟಗಳಿಂದ ಈ ಮಹಿಳೆಯರು ಜರ್ಝರಿತರಾಗಿದ್ದಾರೆ. ಈ ದುಸ್ಥಿತಿಯು ಹೊಸ ಪ್ರಶ್ನೆಗಳನ್ನು ಎತ್ತುವುದಕ್ಕೆ, ಕೃಷಿ ಬಿಕ್ಕಟ್ಟಿನಲ್ಲಿ ಸಿಲುಕಿರುವ ಮಹಿಳೆಯರಿಗಾಗಿ ಹೊಸರೀತಿಯ ಪರಿಹಾರ, ತಂತ್ರಗಳನ್ನು ಹುಡುಕುವುದಕ್ಕೆ ಒತ್ತಾಯಿಸುತ್ತದೆ. ಈ ಲೇಖನವನ್ನು ಬರೆದಿರುವ ರಂಜನಾ ಪಾಡಿಯವರು ದೆಹಲಿಯಲ್ಲಿ ನೆಲೆಸಿರುವ ಸಾಮಾಜಿಕ ಕಾರ್ಯಕರ್ತೆ. ಈಕೆ ದೆಹಲಿಯ ಸ್ವಾಯತ್ತ ಮಹಿಳಾ ಸಂಘಟನೆ 'ಸಹೇಲಿ'ಯ ಸದಸ್ಯರೂ ಆಗಿದ್ದಾರೆ. ಇವರು ಮೇ 9, 2009ರ ಇ.ಪಿ.ಡಬ್ಲ್ಯೂ ವಾರ ಪತ್ರಿಕೆಗಾಗಿ ಬರೆದ ವಿಶೇಷ ಲೇಖನ ಇದು.

ದೇಶಾದ್ಯಂತ ಜರುಗುತ್ತಿರುವ ರೈತರ ಆತ್ಮಹತ್ಯೆಗಳು ಈಗಾಗಲೆ ದಾರಿದ್ರ್ಯದ, ದಿಕ್ಕೆಟ್ಟ ಸ್ಥಿತಿಯಲ್ಲಿ ಕೃಷಿ ಸಮುದಾಯವನ್ನು ದುರವಸ್ಥೆಯ ಕೂಪಕ್ಕೆ ದೂಡಿವೆ. ಈ ಸಮುದಾಯದ ಮಹಿಳೆಯರು ಬದುಕುಳಿಯಲು ನಡೆಸಿರುವ ದುಸ್ತರವಾದ ಹೋರಾಟವು ಸಂಕಷ್ಟಗಳ ಸರಮಾಲೆಯಿಂದ ತುಂಬಿ ಹೋಗಿದೆ. ಭಿನ್ನಲಿಂಗೀಯ ಪಿತೃಪ್ರಧಾನ ರಚನೆಯನ್ನಾಧರಿಸಿದ ಮದುವೆಯು ಕುಟುಂಬ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಮಕ್ಕಳ, ಮನೆಯ ಹಿರಿಯರ ಜವಾಬ್ದಾರಿಯಲ್ಲಿದೆ. ಬ್ಯಾಂಕಿನ ಹಾಗು ಕಮಿಷನ್ ಏಜೆಂಟರುಗಳ ಅಸಹನೆ, ಕಿರುಕುಳದಲ್ಲಿ ಕೃಷಿಕರು ಸೋತು ಸುಣ್ಣವಾಗುತ್ತಿದ್ದಾರೆ. ಇದಲ್ಲದೆ ಬೆಳೆ ವೈಫಲ್ಯ, ಬೆಳೆಗೆ ಕನಿಷ್ಠದರವೂ ಸಿಗದಿರುವುದು, ಭರಿಸಲೇ ಬೇಕಾದ ಖರ್ಚುಗಳು (ಮಕ್ಕಳ ಶಾಲಾಫೀಸಿನಂತಹ ಖರ್ಚುಗಳು), ಕಾಯಿಲೆ, ಇತರೆ ತುರ್ತುಗಳು ಹಾಗೂ ಪಶುಸಂಗೋಪನೆಯಂತಹ ನಿತ್ಯದ ಮನೆಗೆಲಸಗಳನ್ನೂ ತೂಗಬೇಕು.

1993–2006ರ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ಸಂಭವಿಸಿರುವ ಆತ್ಮಹತ್ಯೆಗಳ ಸಂಖ್ಯೆ 131040ನ್ನು ಮುಟ್ಟಿದೆ. ಆತ್ಮಹತ್ಯೆ ಸಂಭವಿಸುತ್ತಿರುವ ಇತರೆ ಮುಖ್ಯ ರಾಜ್ಯಗಳೆಂದರೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಛತ್ತಿಸ್‌ಗಢ ಮತ್ತು ಪಂಜಾಬ್. ಭಾರತದಲ್ಲಿ ರೈತರ ಆತ್ಮಹತ್ಯೆ ಕುರಿತು ಸಾಕಷ್ಟು ಬರಹಗಳು ಪ್ರಕಟಗೊಂಡಿವೆ ಯಾದರೂ ಆತ್ಮಹತ್ಯೆಯ ಅನಂತರದ ಪರಿಸ್ಥಿತಿಯೊಂದಿಗೆ ಹೊಡೆದಾಡುತ್ತಿರುವ ಮಹಿಳೆಯರ ಮತ್ತು ಕುಟುಂಬಗಳ ಕುರಿತು ತಿಳಿದುಕೊಳ್ಳುವ ಅವಶ್ಯಕತೆಯೂ ಇದೆ. ತ್ವರಿತವಾಗಿ ಬದಲಾಗುತ್ತಿರುವ ಆರ್ಥಿಕತೆಯಲ್ಲಿ ಉದಾರೀಕರಣದ ನೀತಿಗಳ ಪರಿಣಾಮವಾಗಿ ಮಹಿಳೆಯರ ಜೀವನದ ಮೇಲಿನ ಪಿತೃಪ್ರಧಾನತೆಯ ಹಿಡಿತ ಹೆಚ್ಚೆಚ್ಚು ಬಿಗಿಗೊಳ್ಳುತ್ತಿರುವುದು ಹಾಗು ಮಹಿಳಾ ಚಳವಳಿಗೆ ಅದರಿಂದಾಗುತ್ತಿರುವ ಪರಿಣಾಮ ಮತ್ತು ಅದು ಮುಂದೊಡ್ಡುತ್ತಿರುವ ಸವಾಲುಗಳು ಈ ಲೇಖನವನ್ನು ಬರೆಯುವಂತೆ ಮಾಡಿತು. ಮಹಿಳೆಯರೊಂದಿಗೆ ವಿವರವಾದ ಸಂದರ್ಶನ ನಡೆಸಿ ಅಲ್ಲಿನ ಬದಲಾವಣೆಗಳನ್ನು ದಾಖಲಿಸಿದ್ದೇನೆ. ಪಂಜಾಬ್‌ನ ಮೂರು ಜಿಲ್ಲೆಯಲ್ಲಿ ನಡೆಸಿದ 32 ಮಹಿಳೆಯರ ಸಂದರ್ಶನವನ್ನು ಆಧರಿಸಿರುವ ಈ ಲೇಖನವು, ವಿವರವಾದ ಇನ್ನೂ ಮುಂದುವರೆದಿರುವ ಅಧ್ಯಯನದ ಒಂದು ಭಾಗ ಮಾತ್ರ, ಕೃಷಿಕ್ಷೇತ್ರದ ಬಿಕ್ಕಟ್ಟಿನಲ್ಲಿ ಮಹಿಳೆಯರು ಸಿಲುಕಿರುವ ಸಂಕಟವನ್ನು ಕೇಳುತ್ತಿರುವಾಗಲೇ ಇಂದಿನ ಬದಲಾಗುತ್ತಿರುವ ಆರ್ಥಿಕತೆಯಲ್ಲಿ ಮದುವೆ ಮತ್ತು ಕುಟುಂಬ ರಚನೆಗಳು ಅವರಿಗೆ ಒಡ್ಡಿರುವ ಹೊಸ ಸಂಕಷ್ಟಗಳ ದಾರುಣತೆ ಅರಿವಾಗುತ್ತದೆ. ಬದಲಾಗುತ್ತಿರುವ ಸಾಮಾಜಿಕ ಆರ್ಥಿಕ ಚೌಕಟ್ಟಿನಲ್ಲಿ ನೋಡುವುದರಿಂದ ಪ್ರಸ್ತುತ ಸಂದರ್ಭದಲ್ಲಿ ಈ ಸಂಸ್ಥೆಗಳೊಂದಿಗೆ ಮಹಿಳೆಯರು ಹೇಗೆ ಮರುಸಂಧಾನ ನಡೆಸುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಲು ಸಹಾಯವಾಗುತ್ತದೆ. ಅವರ ವಸ್ತುಸ್ಥಿತಿ ಮತ್ತು ಹೋರಾಟ ಈ ದೇಶದಲ್ಲಿರುವ ಪಿತೃಪ್ರಧಾನತೆ ಕುರಿತ ವಿಮರ್ಶೆಗೆ ಪ್ರತಿರೋಧ ಒಡ್ಡುತ್ತದೆ. ಅಲ್ಲದೆ ಮಹಿಳಾ ಘನತೆ ಮತ್ತು ಸಮಾನತೆ ಕುರಿತ ಸ್ತ್ರೀವಾದಿ ನೋಟವನ್ನೇ ಸಂಕೀರ್ಣ ಗೊಳಿಸುತ್ತದೆ. ಬದಲಿಗೆ ಈ ದುಸ್ಥಿತಿಯು ಹೊಸ ಪ್ರಶ್ನೆಗಳನ್ನು ಎತ್ತವುದಕ್ಕೆ, ಕೃಷಿ ಬಿಕ್ಕಟ್ಟಿನಲ್ಲಿ ಸಿಲುಕಿರುವ ಬಹುಸಂಖ್ಯಾತ ಮಹಿಳೆಯರಿಗಾಗಿ ಹೊಸ ರೀತಿಯ ಪರಿಹಾರ, ತಂತ್ರಗಳನ್ನು ಹುಡುಕುವುದಕ್ಕೆ ಒತ್ತಾಯಿಸುತ್ತದೆ.

ಪಂಜಾಬ್‌ನಲ್ಲಿ ರೈತರ ಆತ್ಮಹತ್ಯೆ : ಒಂದು ಸಂಕ್ಷಿಪ್ತ ನೋಟ

ಪಂಜಾಬ್‌ನಲ್ಲಿರುವ ಕೃಷಿ ದುರವಸ್ಥೆ : ಪಂಜಾಬ್ ರಾಜ್ಯವು ತೀವ್ರ ಸ್ವರೂಪದ ಕೃಷಿ ಬಿಕ್ಕಟ್ಟಿನ ಹಿಡಿತದಲ್ಲಿದೆ. ಹಸಿರುಕ್ರಾಂತಿ ಮತ್ತು ಆ ಸಂದರ್ಭದಲ್ಲಿ ಕೈಗೊಂಡ ಕ್ರಮಗಳು ಮಣ್ಣಿನ ಸತ್ವವು ಕ್ಷಿಪ್ರಗತಿಯಲ್ಲಿ ನಾಶವಾಗುವುದಕ್ಕೆ, ದುಬಾರಿ ಕೀಟನಾಶಕಗಳ, ರಸಗೊಬ್ಬರಗಳ, ಅಸಾಂಸ್ಥೀಕೃತ ಮೂಲಗಳಿಗೂ ವಿಸ್ತರಿಸಿಕೊಂಡ ಹಣಕಾಸು ಸಂಸ್ಥೆಗಳ ಜಾಲದ ಬೇಡಿಕೆ ಹೆಚ್ಚಿಸಲು ಕಾರಣವಾಯಿತೆಂಬುದು ಸಂಶೋಧನೆ ಹಾಗು ಅಲ್ಲಿನ ವಸ್ತುಸ್ಥಿತಿ ಎರಡರಿಂದಲೂ ಸಾಬೀತಾಗಿದೆ. ಹಣಕಾಸು ಸಂಸ್ಥೆಗಳಂತು ಇಡೀ ಕೃಷಿ ಸಮುದಾಯವನ್ನೆ ಸಾಲದ ವಿಷವರ್ತುಲಕ್ಕೆ ದೂಡಿವೆ. ಕೃಷಿಯಲ್ಲಿ ಅಭಿವೃದ್ಧಿ ಹೊಂದಿದ್ದ, ರೈತ ಚಳವಳಿ ಪ್ರಬಲವಾಗಿದ್ದ, ರಾಜಕೀಯ ಪಕ್ಷಗಳಲ್ಲಿ ಕೃಷಿ ಸಮುದಾಯದಿಂದಲೇ ಪ್ರಬಲನಾಯಕತ್ವ ಪಡೆದಿದ್ದಂತಹ ರಾಜ್ಯಗಳಲ್ಲೇ ಅತಿ ಹೆಚ್ಚು ಆತ್ಮಹತ್ಯೆಗಳು ವರದಿಯಾಗಿವೆ ಎಂದು ಕೆ.ಸಿ. ಸೂರಿಯವರು ಸಾಬೀತುಮಾಡಿದ್ದಾರೆ. ಇಂದಿಗೂ ಪಂಜಾಬ್‌ನ ಜನರು ರೈತರ ಆತ್ಮಹತ್ಯೆ ಕುರಿತಂತೆ ಅಚ್ಚರಿ, ಆಘಾತ ವ್ಯಕ್ತಪಡಿಸುತ್ತಾರೆ. 1990ರ ದಶಕದ ಕೊನೆಯಿಂದ ಉತ್ಪಾದನೆ ಕುಸಿದಿದೆ, ಖರ್ಚು ಏರಿದೆ, ಲಾಭ ಕಡಿಮೆಯಾಗಿದೆ ಎಂದು 'ಪಂಜಾಬ್ ರಾಜ್ಯ ರೈತರ ಸಮಿತಿ'ಯು ಹೊರ ತಂದಿರುವ ವರದಿಯು ದೃಢಪಡಿಸಿದೆ. 1991ರಲ್ಲಿ 5 ಲಕ್ಷದಷ್ಟಿದ್ದ ಮಧ್ಯಮ ಹಾಗು ಸಣ್ಣ ರೈತರ ಸಂಖ್ಯೆ 2001ರ ಹೊತ್ತಿಗೆ 3 ಲಕ್ಷಕ್ಕೆ ಇಳಿದಿತ್ತು. ಕೃಷಿಯನ್ನಷ್ಟೆ ನಂಬಿ ಬದುಕುವುದು ದುಸ್ತರವಾದ್ದರಿಂದ ಅದನ್ನು ಬಿಡುವುದು ಅನಿವಾರ್ಯವಾಗಿತ್ತು. 2001ರಿಂದ ಸಂಖ್ಯೆ ಇನ್ನೂ ಗಣನೀಯವಾಗಿ ಇಳಿದಿದೆ. ಗ್ರಾಮೀಣ ಆರ್ಥಿಕತೆಯಲ್ಲಿ ಕೃಷಿಕ್ಷೇತ್ರದಿಂದ ಕೃಷಿಯೇತರ ಕ್ಷೇತ್ರಕ್ಕೆ ಬದಲಾಗಿರುವುದು ಚಿಂತಿಸಬೇಕಾದ ವಿಷಯವಾಗಿದೆ. ಕಾರಣ ಸೆಕೆಂಡರಿ ಮತ್ತು ಟೆರಿಟರಿ ಸೆಕ್ಟರ್‌ನಲ್ಲಿ ಅಭಿವೃದ್ಧಿಯ ಗತಿ ಕಡಿಮೆಯಾಗಿದೆ. ಸಣ್ಣ ಹಾಗು ಮಧ್ಯಮ ರೈತರು ಅಳಿದುಳಿದ ಪುಟ್ಟ ಭೂಮಿಯನ್ನು ದೊಡ್ಡ ರೈತರಿಗೆ ಬಾಡಿಗೆಗೆ ಕೊಡುತ್ತಿರುವುದು ಹೆಚ್ಚಾಗುತ್ತಿದ್ದು, ಆ ಬಗ್ಗೆ ಲೆಕ್ಕವಿಲ್ಲ. ಗ್ರಾಮೀಣ ಆರ್ಥಿಕತೆಯಲ್ಲಿ ನಿರುದ್ಯೋಗ ಹೆಚ್ಚುತ್ತಿದೆ. ಅಧಿಕೃತ ಅಪ್ರಕಟಿತ ಅಂದಾಜಿನ ಪ್ರಕಾರ ಪಂಜಾಬ್‌ನಲ್ಲಿರುವ ಒಟ್ಟು 35 ಲಕ್ಷ ನಿರುದ್ಯೋಗಿಗಳಲ್ಲಿ 24 ಲಕ್ಷ ಗ್ರಾಮೀಣ ಕ್ಷೇತ್ರದಲ್ಲಿದ್ದಾರೆ.

ಈ ಬದಲಾವಣೆಯ ಸ್ವರೂಪವು ಸಾಮಾಜಿಕ ರಚನೆಯ ಮೇಲೆ ಬೀರುತ್ತಿರುವ ಪರಿಣಾಮ ಕುರಿತು ಅಧ್ಯಯನ ನಡೆದಿಲ್ಲ. ಈ ಅಂಶವೇ ಅಧ್ಯಯನಕ್ಕೆ ಮುಖ್ಯ ಕಾರಣವಾಯಿತು. ಆತ್ಮಹತ್ಯೆಗಳಾಗಿರುವ ಕುಟುಂಬಗಳ ಪರಿಸ್ಥಿತಿಯನ್ನು ಅಂದಾಜು ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ. ಕೆಲವಾರು ವರ್ಷಗಳಿಂದ ರೈತರ ಆತ್ಮಹತ್ಯೆ ಒಂದೇ ಸಮನೆ ಏರುತ್ತಿರುವುದು ಈ ಕುಟುಂಬಗಳು ಎದುರಿಸುತ್ತಿರುವ ಅಮಾನವೀಯ ಪರಿಸ್ಥಿತಿಯನ್ನು ಮತ್ತು ಬದುಕುಳಿಯಲು ಸಾಲದ ಮೇಲಿನ ಅವಲಂಬನೆಯನ್ನು ಸ್ಪಷ್ಟವಾಗಿ ಬಿಚ್ಚಿಡುತ್ತದೆ. ಸಾಲದ ಮೂಲಗಳೆಂದರೆ ಹಣಕಾಸು ಸಂಸ್ಥೆಗಳು ಮತ್ತು ಬಡ್ಡಿ ವ್ಯಾಪಾರಿಗಳು. ಪಂಜಾಬ್‌ನಲ್ಲಿ ಸಾಲದ ಹೊರೆ ಇರುವ ರೈತ ಕುಟುಂಬಗಳು ಶೇ. 88.33 ಹಾಗಾದರೂ ಆತ್ಮಹತ್ಯೆಯ ಸಂಖ್ಯೆಯ ಸ್ಪಷ್ಟ ಚಿತ್ರಣವಿನ್ನೂ ಸಿಕ್ಕಿಲ್ಲ. ಭಾರತೀಯ ಕಿಸಾನ್ ಯೂನಿಯನ್ (BKUEKTA) ನವರು ಮಾಡಿರುವ ಅಧ್ಯಯನದ ಪ್ರಕಾರ 2001ರಿಂದ 2005ರವರೆಗೆ 13000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಮುಖ್ಯ ಕಾರಣಗಳೆಂದರೆ ಸಾಲದ ಹೊರೆ, ಬ್ಯಾಂಕ್ ಏಜೆಂಟುಗಳು ಮತ್ತು ಅರ್ತಿಯಾಸ್ (ಬಡ್ಡಿ ವ್ಯಾಪಾರಿ) ಕಿರುಕುಳ, ಬೆಳೆ ವೈಫಲ್ಯ ಮತ್ತು ಬದುಕನ್ನು ಉಳಿಸಿಕೊಳ್ಳುವ ಪರಿಹಾರಗಳಿಲ್ಲದೆ ಹತಾಶೆಗೊಳ್ಳುವುದು. ಜಮೀನು ಮಾರಿದೆವೆಂದು ಅನುಭವಿಸುವ ಅಪಮಾನ, ಮರ್ಯಾದೆ ಕಳೆದುಕೊಂಡೆವೆಂಬ ಭಾವನೆಯಲ್ಲಿ ಅಸಹಾಯಕರಾಗಿ ಆತ್ಮಹತ್ಯೆಗೆ ಮೊರೆ ಹೋಗುತ್ತಾರೆ. ಈ ಅಧ್ಯಯನವು ಜಮೀನಿಲ್ಲದ ಕೃಷಿ ಕಾರ್ಮಿಕರ ಕುಟುಂಬಗಳಲ್ಲೂ ನಡೆದಿರುವ ಆತ್ಮಹತ್ಯೆಗಳನ್ನು ಒಳಗೊಂಡಿದೆ. ಈ ಕಾರ್ಮಿಕರು ಕೂಲಿಗಾಗಿ ಕೃಷಿ ಆರ್ಥಿಕತೆಯನ್ನೆ ಅವಲಂಬಿಸಿದ್ದರಿಂದ, ಕೃಷಿ ವ್ಯವಸ್ಥೆಯೇ ಕುಸಿದು ಬಿದ್ದಾಗ ತೀವ್ರವಾದ ಸಂಕಷ್ಟಕ್ಕೆ ಈಡಾಗಿದ್ದಾರೆ. ಭೂಹೀನ ಕೃಷಿ ಕಾರ್ಮಿಕರಿಗೆ ವರಮಾನವೇ ನಿಂತು ಹೋಗಿರುವುದರಿಂದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳಲಾಗುತ್ತಿಲ್ಲ. ಇವರಲ್ಲಿ ಆತ್ಮಹತ್ಯೆಯ ಸಂಖ್ಯೆ ಕಡಿಮೆ ಇದ್ದರೂ ಬದುಕಲು ನಡೆಸುವ ಹೋರಾಟ ಮಾತ್ರ ಅತ್ಯಂತ ಕಷ್ಟಕರವಾದುದು.

ಕೃಷಿಯಾಧಾರಿತ ಕುಟುಂಬಗಳೊಂದಿಗಿನ ಚರ್ಚೆ ಹಾಗು ಇತರೆ ಅಧ್ಯಯನಗಳು ಬಂಡವಾಳ ಕೇಂದ್ರಿತ ಕೃಷಿ ತಂದಿರುವ ಆಪತ್ತುಗಳನ್ನು ವಿಷದ ಪಡಿಸಿವೆ. ಬೀಜ ಮತ್ತು ರಸಗೊಬ್ಬರಗಳ ಬೆಲೆ ಏರಿಕೆ, ಅಗ್ಗದ ಆಮದು, ಸರ್ಕಾರ ಬೆಂಬಲ ಹಿಂತೆಗೆದುಕೊಂಡಿರುವುದು, ಜಾಗತಿಕ ತಾಪಮಾನದಿಂದ ಹವಾಮಾನ ಏರುಪೇರಾಗಿ ಮಳೆ ಕೈಕೊಟ್ಟಿದ್ದು, ಇತರೆ ಪರಿಸ್ಥಿತಿಗಳ ದಂಡು ರೈತರನ್ನು ಎಲ್ಲಾ ಕಡೆಯಿಂದಲೂ ಸಂಕಟಕ್ಕೆ ಸಿಕ್ಕಿಸಿದೆ. ಸಾಲಮರುಪಾವತಿಸಲು ವಾಣಿಜ್ಯ ಬೆಳೆ ಬೆಳೆಯುವುದೇ ಮುಖ್ಯ ಸಾಧನವಾದ್ದರಿಂದ ವೈವಿಧ್ಯಮಯ ವ್ಯವಸಾಯದ ಸಾಧ್ಯತೆ ಸೀಮಿತಗೊಂಡಿದೆ. ಸಾಲ ನೀಡುವ ಸಂಸ್ಥೆಗಳು, ಬಡ್ಡಿವ್ಯಾಪಾರಿಗಳು, ರಸಗೊಬ್ಬರ, ಬೀಜ ಮತ್ತು ಕೀಟನಾಶಕದ ದಳ್ಳಾಳಿಗಳು ಮಾತ್ರ ಅಭಿವೃದ್ಧಿ ಹೊಂದುತ್ತಿರುವುದು ಸತ್ಯ.

ಆತ್ಮಹತ್ಯೆಗಳು : ಸಂದರ್ಭಗಳು ಮತ್ತು ಕಾರಣಗಳು : ಆತ್ಮಹತ್ಯೆ ಮಾಡಿಕೊಳ್ಳಲು ಕೀಟನಾಶಕ ಕುಡಿಯುವುದು ಅತಿ ಸಾಮಾನ್ಯ. ಕೆಲವರು ನೀರಲ್ಲಿ ಮುಳುಗಿ ಸಾಯುವುದಕ್ಕೆ ಅಥವ ನೇಣಿಗೆ ಶರಣಾಗುತ್ತಾರೆ. ಸಾಲಕ್ಕೆ ಸಂಬಂಧಪಟ್ಟ ಹತಾಶೆ, ಆತಂಕದ ಸುತ್ತಲೆ ಹಲವಾರು ವಿಷಯಗಳು ಗಿರಕಿ ಹೊಡೆಯುತ್ತವೆಯಾದರೂ ಯಾವುದೇ ಸಣ್ಣಕಾರಣವೂ ಆತ್ಮಹತ್ಯೆಯತ್ತ ದೂಡಬಹುದು. ಬೆನ್ನು ಮುರಿದು ದುಡಿದರೂ ಬೆಳೆ ಮಾರಾಟದಿಂದ ನಯಾಪೈಸೆ ಸಿಗದಿರುವುದು (ಬ್ಯಾಂಕಿನವರು ಅಥವ ಬಡ್ಡಿ ವ್ಯಾಪಾರಿ ಅಥವ ಕೆಲವೊಮ್ಮೆ ಇಬ್ಬರೂ ಸೇರಿ ಉಳಿದಿರುವ ಬಡ್ಡಿಗಾಗಿ ಎಲ್ಲವನ್ನು ಕಡಿತಗೊಳಿಸುತ್ತಾರೆ) ಮನೆಯಲ್ಲಾಗುವ ಜಗಳ, ಬ್ಯಾಂಕ್ ಏಜೆಂಟುಗಳು ಅಥವ ಬಡ್ಡಿ ವ್ಯಾಪಾರಿಗಳಿಂದ ಸಾರ್ವಜನಿಕವಾಗಿ ಆಗುವ ಅಪಮಾನ, ಜಮೀನಿನ ಮಾರಾಟ, ತಂಗಿಯದೊ ಅಥವ ಮಗಳದೊ ಮದುವೆಗಾಗಿ ತೆಗೆದುಕೊಳ್ಳುವ ಹೊಸಸಾಲ ಇವೆಲ್ಲವೂ ಆತ್ಮಹತ್ಯೆಯಂತಹ ಪ್ರಯತ್ನಕ್ಕೆ ದೂಡುತ್ತವೆ.

ಮಾನ್ಸಾ ಜಿಲ್ಲೆಯ ನಜಂ ಸಿಂಗ್ 2000ರಲ್ಲಿ ನೀರಲ್ಲಿ ಮುಳುಗಿ ಆತ್ಮಹತ್ಯೆ ಮಾಡಿಕೊಂಡ. ಅವನ ತಂಗಿ ಹಾಗೂ ತಮ್ಮನ ಮದುವೆ ಮಾಡಿಸಿದ್ದ ಆತನ ಮೇಲೆ ಮೂರುಲಕ್ಷದಷ್ಟು ಸಾಲದ ಹೊರೆಇತ್ತು. ಇನ್ನಷ್ಟು ಸಾಲ ನೀಡಲು ಆರ್ತಿಯ (ಬಡ್ಡಿ ವ್ಯಾಪಾರಿ) ನಿರಾಕರಿಸಿದಾಗ ಆತ್ಮಹತ್ಯೆ ಮಾಡಿಕೊಂಡ– ಅದೇ ಜಿಲ್ಲೆಯ ಮಿತುಸಿಂಗ್ ಜನವರಿ 2, 2004ರಂದು ಆರ್ತಿಯಾನನ್ನು ಭೇಟಿ ಮಾಡಿ ಹಿಂತಿರುಗಿದ ಮೇಲೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡ. ಜಮೀನು ಮಾರಿದ ಪೂರ್ತಿಹಣವನ್ನು ಆರ್ತಿಯಾ ಸಾಲಕ್ಕೆ ವಜಾಮಾಡಿಕೊಂಡಿದ್ದರಿಂದ ಅವಮಾನ, ಬಡತನ ತಾಳಿಕೊಳ್ಳಲಾರದೆ ವಿಷ ಕುಡಿದ. ಸಂಗ್ರೂರ್ ಜಿಲ್ಲೆಯ ಜಸ್‌ಬೀರ್ ಸಿಂಗ್‌ಗೆ 3.5 ಎಕರೆ ಜಮೀನಿತ್ತು. ಟ್ರಕ್ ಮೇಲಿನ ಸಾಲವೂ ಸೇರಿದಂತೆ ಆತನ ಮೇಲಿದ್ದ ಸಾಲದ ಹೊರೆ ಮೂರು ಲಕ್ಷ. ಕಂತು ಕಟ್ಟುವುದೇ ಅಸಾಧ್ಯವಾಗಿತ್ತು. ಆ ದಿನ ಸಾಲವಸೂಲಿ ಮಾಡುವ ಏಜೆಂಟು ಆತನ ಮನೆಗೆ ಬಂದು, ಬಾಕಿಗಾಗಿ ಟ್ರಕ್

ಕೊಂಡೊಯ್ಯುವಾಗ ಅದು ಹತ್ತಿರದ ಗುಂಡಿಗೆ ಬಿತ್ತು. ಇದನ್ನು ಮನೆಗೆ ಹಿಂತಿರುಗುತ್ತಿದ್ದ ಜಸ್‌ಬೀರ್ ನೋಡಿದ. ಮನೆಗೆ ಹಿಂತಿರುಗಿದ ಕೂಡಲೆ ಕೋಣೆ ಸೇರಿ ಅವಮಾನಕ್ಕೋ, ಅಸಹಾಯಕತೆಗೊ ಕೀಟನಾಶಕ ಕುಡಿದ. ಇದಾಗಿದ್ದು 2001ರಲ್ಲಿ. ಸಂಗ್ರೂರ್ ಜಿಲ್ಲೆಯ 23 ವರ್ಷದ ಧ್ಯಾನ್‌ಸಿಂಗ್ 2005ರ ಆಗಸ್ಟ್ ತಿಂಗಳಿನಲ್ಲಿ ಹೊಲದಿಂದ ಮನೆಗೆ ಬಂದವನು ಹೊಟ್ಟೆ ವಿಪರೀತ ನೋಯುತ್ತಿದೆ ಎಂದ. ಅವನಾಗಲೇ ಕೀಟನಾಶಕ ಕುಡಿದಿದ್ದ. ಅವನನ್ನು ಉಳಿಸಿಕೊಳ್ಳಲಾಗಲಿಲ್ಲ. ರೂ. 60000 ಸಾಲ ಅವನ ಮೇಲಿತ್ತು, ಜೊತೆಗೆ ಹೊಸ ಸಾಲಕ್ಕಾಗಿ ಪ್ರಯತ್ನಿಸುತ್ತಿದ್ದ. ಆತ್ಮಹತ್ಯೆಗೆ ಮೊದಲು ಅವನನ್ನು ಕಾಡುತ್ತಿದ್ದುದು ತಂಗಿ ಮದುವೆಯ ಖರ್ಚು. ಅವನು ಸತ್ತ ಒಂದು ತಿಂಗಳೊಳಗೆ ಆತನ ತಾಯಿ ವ್ಯವಸಾಯಕ್ಕೆಂದು 1 ಲಕ್ಷ ರೂ. ಸಾಲ ಮಾಡಿದಳು. ಹೊಸ ಸಾಲದಲ್ಲಿ ಹಳೆಯ ಸಾಲ ಸ್ವಲ್ಪ ತೀರಿಸಿ, ಮಗಳ ಮದುವೆಯನ್ನು ಮಾಡಿದಳು. ಬದುಕು ಮುಂದವರಿಯಲೇಬೇಕು, ಜವಾಬ್ದಾರಿ ನಿಭಾಯಿಸಲೇಬೇಕಲ್ಲವೆ ಎನ್ನುತ್ತಾಳೆ ಆಕೆ. ಫೆರೋಜ್‌ಪುರ್ ಜಿಲ್ಲೆಯ 31 ವರ್ಷದ ಸತ್‌ನಾಮ್‌ಸಿಂಗ್ ವಿಷ ಕುಡಿದ. ಮದುವೆಯಾಗಿ ಹತ್ತು ವರ್ಷವಾಗಿತ್ತು. ಮಕ್ಕಳಿಲ್ಲವೆಂಬ ಕೊರಗಿತ್ತು. ತಂಗಿಯ ಮದುವೆಗಾಗಿ ವರದಕ್ಷಿಣೆ ಹಣ ಹೊಂದಿಸಲೇಬೇಕೆಂಬ ಒತ್ತಡದಿಂದ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಇದಾಗಿದ್ದು ಅವನು ಸಾಯುವ 4 ತಿಂಗಳ ಮೊದಲಷ್ಟೆ.

ಆತ್ಮಹತ್ಯೆ ಸಂಭವಿಸುವುದಕ್ಕೆ ಕಾರಣವೇನೆ ಇರಲಿ, ಹಲವಾರು ಸಂಕೀರ್ಣ ಅಂಶಗಳು ರೈತರನ್ನು ಅದರತ್ತ ದೂಡಿವೆ ಎಂಬುದು ಸ್ಪಷ್ಟ. ಕೂಲಿಗಾಗಿ ಕೆಲಸ ಮಾಡುವುದಕ್ಕೆ ಜಾಟ್ ಸಿಖ್ಖರ ಸಮುದಾಯದಲ್ಲಿ ನಿರ್ಬಂಧವಿದೆ. ಸಮುದಾಯದ ಗೌರವ ಕಾಪಾಡಲೇಬೇಕೆಂಬುದು ದುಸ್ಥಿತಿಗೆ ಬಹುದೊಡ್ಡ ಕಾರಣವಾಗಿದೆ. ಸಾಲ ಏರಿದಂತೆ ಜಮೀನಿನ ಅಳತೆ ಕಡಿಮೆಯಾಗಿ ಬೆಳೆ ವಿಫಲವಾಗಿ ಬದುಕುಳಿವ ಅವಕಾಶಗಳೇ ತಪ್ಪಿಹೋಗುತ್ತವೆ. ಮದುವೆ ಖರ್ಚಿಗೊ, ವರದಕ್ಷಿಣೆಗೊ ಮಾಡಿಕೊಂಡ ಸಾಲ ತೀರಿಸಲು ಸಾಮಾಜಿಕ ಆಚಾರಗಳ ತೋರಿಕೆಯು ಅವರನ್ನು ಕಟ್ಟಿಹಾಕಿ ಅಸಮರ್ಥರನ್ನಾಗಿಸುತ್ತದೆ. ವರ್ಷವಿಡೀ ಮೂಳೆ ಮುರಿದು ದುಡಿದರೂ ತಮ್ಮ ಮಕ್ಕಳ ಕರಾಳ ಭವಿಷ್ಯ ಹುಟ್ಟಿಸುವ ಹತಾಶೆ ಕಣ್ಣಿಗೆ ರಾಚುತ್ತದೆ. ಎಲ್ಲ ಮಹಿಳೆಯರಿಗೂ ಅವಳ ಮಕ್ಕಳ ಭವಿಷ್ಯವೆ ಆದ್ಯತೆಯಾಗಿದೆ. ಸಂದರ್ಶನದ ಕೊನೆಯಲ್ಲಿ ಎಲ್ಲರೂ ಕೇಳುವುದು "ಮುಂದೆ ನಮ್ಮ ಮಕ್ಕಳಿಗೇನಾಗುತ್ತದೆ?" ಎಂದು.

ಮಹಿಳೆಯರ ಮೇಲಿನ ಪರಿಣಾಮ

ಮಹಿಳೆಯರ ದುಡಿಮೆ : ಮಹಿಳೆಯರ ಚಲನೆಯ ಮೇಲಿನ ನಿರ್ಬಂಧವು ಎಲ್ಲೊ ಒಂದೆರೆಡು ಉದಾಹರಣೆಬಿಟ್ಟರೆ ಎಲ್ಲ ಜಾಟ್ ಸಿಖ್ ಮಹಿಳೆಯರು ಸಂಬಳಕ್ಕಾಗಿ ದುಡಿಯುವುದಕ್ಕೆ ಬಹುದೊಡ್ಡ ತಡೆಯಾಗಿದೆ. ಸಾಲದ ಸುಳಿಯೊಳಗೆ ಸಿಕ್ಕಿಹಾಕಿಕೊಂಡು ಅಸಲನ್ನೇ ತೀರಿಸಲಾಗದ ಪರಿಸ್ಥಿತಿ ಇದ್ದರೂ, ಸಂಬಳಕ್ಕಾಗಿ ದುಡಿಯುವುದನ್ನು ಯೋಚಿಸಲೂ ಸಾಧ್ಯವಾಗದ ಮನಃಸ್ಥಿತಿ ಇದೆ. ಇಂತಹ ನಿರ್ಬಂಧಗಳು ಅಂತರ್ಗತವಾಗಿರುವುದರಿಂದಲೇ ತಮ್ಮ ಹೆಣ್ಣುಮಕ್ಕಳಿಗೆ ಮದುವೆಯಲ್ಲದೆ ಬೇರಾವ ಭವಿಷ್ಯವನ್ನೂ ಅವರು ಯೋಚಿಸಲಾರರು. ಮುಂದಿನ ತಲೆಮಾರಿನ ಹೆಣ್ಣುಮಕ್ಕಳಿಗೂ ಮನೆಗೆಲಸದ ಹೊರೆ ಮತ್ತಿನ್ನಿತರ ಜವಾಬ್ದಾರಿ ಕಟ್ಟಿಟ್ಟಬುತ್ತಿ. ಕೆಲಸವೇನಾದರು ಸಿಗುವುದಾದರೆ ಹುಡುಕಲು ಪ್ರೋತ್ಸಾಹಿಸುವ ವಾತಾವರಣವೇ ಇಲ್ಲ. ಇಂತಹ ಸಾಧ್ಯತೆ ಸಾಧ್ಯವಾಗುವುದು ಜನಪರ ಚಳವಳಿ ಅಥವ ರೈತ ಸಂಘಟನೆಗಳ ಮದ್ಯಸ್ಥಿಕೆಯಿಂದ ಮಾತ್ರ. ಅವು ಮಾತ್ರ ಜಾತಿ ನಿರ್ಬಂಧಗಳನ್ನು ಸಂಪೂರ್ಣವಾಗಿ ಅಲ್ಲಾಡಿಸಬಲ್ಲವು. ಸಹಕಾರ ಸಂಘಗಳ ಅಥವ ಆದಾಯ ತರುವ ಯೋಜನೆಗಳ ಪ್ರಯತ್ನ ಇಲ್ಲಿ ನಡೆದಂತಿಲ್ಲ. ಹಣ ಸಂಪಾದನೆ ಮಾಡಲಿ ಬಿಡಲಿ ಯಾವ ನಿರೀಕ್ಷೆಯೂ ಇಲ್ಲದೆ ಮಹಿಳೆಯರು ಮನೆಗೆಲಸದಲ್ಲಿ ಬಿಡುವಿಲ್ಲದೆ ತೊಡಗಿರುತ್ತಾರೆಂಬುದಂತು ಸತ್ಯ. ವಿಶೇಷವಾಗಿ ರಾಯ್‌ಸಿಖ್ಖರಲ್ಲಿ ಹಲವರು ತಮಗಿರುವ ತುಂಡು ಭೂಮಿಯಲ್ಲಿ ವ್ಯವಸಾಯ ಮಾಡುವುದರ ಜೊತೆಗೆ ಸಂಬಳಕ್ಕಾಗಿಯೂ ದುಡಿದು ಖರ್ಚು ನಿಭಾಯಿಸುತ್ತಾರೆ.

ಫಿರೋಜ್‌ಪುರ್ ಜಿಲ್ಲೆಯ ಹರ್‌ಜಿತ್‌ಕೌರ್‌ಳ ಕುಟುಂಬವು ಒಂದು ಎಕರೆ ಭೂಮಿಯಲ್ಲಿ ವ್ಯವಸಾಯ ಮಾಡುವುದರ ಜೊತೆಗೆ ಸಂಬಳಕ್ಕೂ ದುಡಿದು ವರ್ಷಕ್ಕೆ 40000 ರೂ. ಸಂಪಾದಿಸುತ್ತದೆ. ಅವಳ ಹಿರಿಯಮಗ ವ್ಯವಸಾಯದ ದುಡಿಮೆ ಹುಟ್ಟಿಸಿದ ಖಿನ್ನತೆ ಮತ್ತು ಆತಂಕದ ಜೀವನದಿಂದ ಬೇಸತ್ತು 2008ರಲ್ಲಿ ಆತ್ಮಹತ್ಯೆ ಮಾಡಿಕೊಂಡ. ಅನಾರೋಗ್ಯದಿಂದಾಗಿ ಮಹಿಳೆಯರು ಕೆಲಸಮಾಡುವುದು ಕಷ್ಟದಾಯಕ ವಾಗಿದೆ. ತೀವ್ರವಾದ ಆತಂಕದಿಂದಾಗಿ ಅವರ ಆರೋಗ್ಯ ಇನ್ನಷ್ಟು ಬಿಗಾಡಾಯಿಸಿದೆ. ಮಗನ ಸಾವಿನ ನಂತರ ಫಿರೋಜ್‌ಪುರ್‌ನ ಕುಲ್‌ವಿಂದರ್ ಕೌರ್ ಎಲ್ಲಾ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾಳೆ. ಹಲವು ಶಸ್ತ್ರಚಿಕಿತ್ಸೆಗಳಾಗಿ ಆರೋಗ್ಯ ಸರಿ ಇಲ್ಲದ ಆಕೆ ದಿನಕ್ಕೆ 12 ಗಂಟೆಗಿಂತಲೂ ಹೆಚ್ಚಿಗೆ ದುಡಿಯುತ್ತಾಳೆ. ಗಂಡ, ಅಸ್ವಸ್ಥನಾಗಿರುವ ಮಾವನ ಜತೆಗೆ ಕೂಲಿಗೆ ಬರುವ ಕೆಲಸಗಾರರನ್ನು ನೋಡಿಕೊಳ್ಳುವುದೂ ಆಕೆಯೆ. ಮಗನಿಗಾಗಿ ದುಃಖಿಸಲೂ ಆಕೆಗೆ ಸಮಯವಿಲ್ಲ. ಅದೇ ಜಿಲ್ಲೆಯ ಲಕ್‌ಬಿರ್‌ರಾಣಿಯ ಗಂಡ ನವೆಂಬರ್ 2008ರಲ್ಲಿ ತೀರಿಕೊಂಡಾಗ ನಾಲ್ಕು ಮಕ್ಕಳನ್ನು ಸಾಕುವ ಸಲುವಾಗಿ ಆಕೆ ಸಂಬಳಕ್ಕೆ ದುಡಿಯಲಾರಂಭಿಸಿದಳು. ಎರಡು ವರ್ಷದಿಂದ ಕ್ಯಾನ್ಸರ್‌ನೊಂದಿಗೆ ಹೋರಾಡುತ್ತಿರುವ ಆಕೆಯೂ ನಿತ್ರಾಣಳಾಗಿದ್ದಾಳೆ.

ದವೀಂದರ್ ಕೌರಳ ಗಂಡ ಸ್ಥಳೀಯ ಬಸ್‌ನಿಲ್ದಾಣದಲ್ಲಿ ಬರುವ, ಹೋಗುವ ಬಸ್‌ಗಳ ವಿವರವನ್ನು ಘೋಷಿಸುವ ಕೆಲಸ ಮಾಡುತ್ತಿದ್ದ. ತಿಂಗಳಿಗೆ ಸುಮಾರು 4000 ರೂ. ಸಿಗುತ್ತಿತ್ತು. 2003ರಲ್ಲಿ ಆತ ಆತ್ಮಹತ್ಯೆ ಮಾಡಿಕೊಂಡ. ಅವನಿಗಿದ್ದ ಜಮೀನು ಬರಡಾಗಿತ್ತು. ಅಲ್ಲಿ ನೀರಿನ ಮಟ್ಟವೂ ತೀರಾ ಕೆಳಗಿಳಿದಿದ್ದು, ಕೊಳವೆ ಬಾವಿ ತೋಡಿಸುವುದು ದುಬಾರಿಯಾಗಿತ್ತು. ಮಗಳ ಮದುವೆಗೆ 2 ಲಕ್ಷ ರೂ. ಸಾಲಮಾಡಿದ್ದ. ಈ ಸಾಲ ತೀರಿಸಲು ಮತ್ತು ಇತರೆ ಖರ್ಚಿಗಾಗಿ ಸಹಕಾರ ಸಂಘದಲ್ಲಿ ಮತ್ತೆ ಸಾಲ ಮಾಡಿಕೊಂಡಿದ್ದ. ಬರಪೀಡಿತ ಪ್ರದೇಶವಾದ್ದರಿಂದ ಜಮೀನು ಮಾರಾಟವೂ ಸಾಧ್ಯವಿಲ್ಲದ ಮಾತಾಗಿತ್ತು. "ನನ್ನ ಬಳಿ ಈಗೇನೂ ಉಳಿದಿಲ್ಲ. ದುಡ್ಡಿಗಾಗಿ ಗ್ಯಾಸ್ ಸಿಲಿಂಡರನ್ನೂ ಮಾರಿದ್ದೇನೆ. ನನಗೂ ಹುಷಾರಿಲ್ಲ; ಯಾವಾಗಲೂ ಕೀಲುಗಳು ವಿಪರೀತ ನೋಯುತ್ತವೆ" ಎಂದು ದವೀಂದರ್‌ಕೌರ್ ಹೇಳಿದಳು. ಆಕೆಯ ಮಗ ಅಲ್ಲೆ ಮನೆಯಲ್ಲಿದ್ದ. ಮೌನವಾಗಿದ್ದ ಆತ ತನ್ನದೇ ಲೋಕದಲ್ಲಿ ಕಳೆದು ಹೋಗಿದ್ದ. ಅದೇ ದಿನ ಬೆಳಗ್ಗೆ ಪೊಲೀಸ್ ಪೇದೆ ನೇಮಕಾತಿ ಪರೀಕ್ಷೆ ಬರೆಯಲು ಸಂಗ್ರೂರಿಗೆ ಹೋಗಿ ಬಂದಿದ್ದ. ತಾಯಿ ಮಗ ಇಬ್ಬರೂ ಭವಿಷ್ಯ ಕುರಿತು ಆತಂಕಗೊಂಡಿದ್ದರು, ಅತಂತ್ರರಾಗಿದ್ದರು. ಅವರಿಗೆ ಯಾವ ಭರವಸೆಯೂ ಇರಲಿಲ್ಲ. ಮಾನ್ಸಾ ಜಿಲ್ಲೆಯ ಮಜ್‌ಹೆಬಿಸಿಖ್ ಸಮುದಾಯಕ್ಕೆ ಸೇರಿದ 60 ವರ್ಷದ ಮಹಿಳೆ 2003ರಲ್ಲಿ ತನ್ನ ಮಗನನ್ನು ಕಳೆದುಕೊಂಡಳು. ಈಗ ಆಕೆ ಹತ್ತಿರದ ಮುನಿಸಿಪಲ್ ಕಛೇರಿಯಲ್ಲಿ ಗುಡಿಸುವ ಕೆಲಸ ಮಾಡುತ್ತಾಳೆ. ತಿಂಗಳಿಗೆ 750ರೂ. ಸಂಬಳ ಸಿಗುತ್ತದೆ. ಪ್ರತಿದಿನ ಬಸ್‌ಚಾರ್ಜಿಗೆಂದು 8 ರೂಪಾಯಿ ಖರ್ಚು ಮಾಡುತ್ತಾಳೆ. ಅದೇ ತಿಂಗಳಿಗೆ 200ರೂ. ಆಗುತ್ತದೆ. ದಿನಗೂಲಿ ಕೆಲಸವನ್ನು ಮಾಡಿ ದಿನಕ್ಕೆ 50ರೂ. ಸಂಪಾದಿಸುತ್ತಾಳೆ. ಆಕೆಯ ಗಂಡನೂ ಕೆಲಸ ಸಿಗುವ ಕಾಲದಲ್ಲಿ ದಿನಗೂಲಿ ಕೆಲಸ ಮಾಡಿ ದಿನಕ್ಕೆ 70ರೂ. ಸಂಪಾದಿಸುತ್ತಾನೆ. ಕೆಲಸ ಸಿಗುವುದು ಮಾತ್ರ ಕಡಿಮೆ ಅವಧಿಗೆ. ಎಲ್ಲ

ಸೇರಿಸಿದರೆ ಅವರ ವಾರ್ಷಿಕ ವರಮಾನ ಅಂದಾಜು 20000ರೂ. ಬತ್ತ, ಗೋಧಿ ಕೊಯ್ಲಿನ ಸಮಯದಲ್ಲಿ ಹೆಚ್ಚೆಂದರೆ ಮೂರು ತಿಂಗಳಿಗೆ ಸಿಗುವ ಕೆಲಸವನ್ನು ಬಹುಪಾಲು ಮಹಿಳೆಯರು ಮಾಡುತ್ತಾರೆ. ಇಷ್ಟೆಲ್ಲ ದುಡಿದರು ಹಣದ ಕೊರತೆ ತಪ್ಪಿದ್ದಲ್ಲ ಎನ್ನುವ ಆಕೆ ದುಡಿಯಲು ಆರಂಭಿಸಿದ್ದು ದಿನಕ್ಕೆ 10ರೂ. ಕೂಲಿಗೆ!

ಫಿರೋಜ್‌ಪುರ್ ಜಿಲ್ಲೆಯ ಜಸ್ಪಾಲ್‌ಕೌರ್ ದಿನಗೂಲಿಯಿಂದ ಸಂಪಾದಿಸುವುದು ಬಿಡಿಗಾಸು. ಆಕೆಯ ಗಂಡ 1994ರಲ್ಲಿ ಆತ್ಮಹತ್ಯೆ ಮಾಡಿಕೊಂಡ, ಅವಳ ಮಾವ ಅದಕ್ಕೂ ಮೊದಲು. ಅವಳ ಬಳಿ ಭೂಮಿ ಇಲ್ಲ. ಅವಳ ಸಂಪಾದನೆ ವರ್ಷಕ್ಕೆ 12000. "ನನ್ನ ಮಗನಿಗೆ ದುಡಿದು ಸಂಪಾದನೆ ಮಾಡೆಂದು ಹೇಳುತ್ತೇನೆ. ಆದರೆ ಯಾವಾಗಲೂ ನಶೆಯಲ್ಲಿರುವ ಅವನು ಸಂಪಾದನೆ ಮಾಡುವುದು ಕಡಿಮೆ" ಎಂದಳು ಆಕೆ. ಹತ್ತಿ ಬಿಡಿಸುವುದೋ ಗಜ್ಜರಿ ಕೀಳುವುದೊ ಮಾಡಿ ದಿನಕ್ಕೆ 50 ರೂ. ಸಂಪಾದಿಸುತ್ತಾಳೆ. ವರ್ಷಕ್ಕೆ 60 ದಿನ ಕೆಲಸ ಸಿಕ್ಕರೆ ಹೆಚ್ಚು. "ಒಂದು ಎಮ್ಮೆಯನ್ನೂ ಕೊಳ್ಳಲಾಗುವುದಿಲ್ಲ ನನಗೆ. ಎಮ್ಮೆ ಇದ್ದಿದ್ದರೆ ಹಾಲು ಮಾರಿ ಸಂಪಾದಿಸುತ್ತಿದ್ದೆ" ಎನ್ನುತ್ತಾಳೆ ಆಕೆ.

ಮಜ್‌ಹಬಿ ಮತ್ತು ಲಾಮ್‌ದಾಸಿಯ ಸಿಖ್ ಮಹಿಳೆಯರು ಮಾತ್ರ ಕೂಲಿಗಾಗಿ ಕೆಲಸ ಮಾಡುತ್ತಾರೆ. ಆ ಬಗ್ಗೆ ಅವರಿಗೆ ಹೆಮ್ಮೆಯೂ ಇದೆ. ಒಬ್ಬರೊ ಇಬ್ಬರೊ ಜಾಟ್‌ಸಿಖ್ ಮಹಿಳೆಯರು ಅಂತಹ ಕೆಲಸ ಮಾಡಬೇಕೆನ್ನುವ ಆಸಕ್ತಿ ತೋರಿಸಿದರು. ಅವರಲ್ಲಿ ಒಬ್ಬಾಕೆ



ಹಾಗೇನಾದರು ಕೆಲಸ ಮಾಡಿದರೆ ಹಳ್ಳಿಯಿಂದಲೆ ಬಹಿಷ್ಕರಿಸುತ್ತಾರೆ ಎಂದು ಹೇಳಿದಳು. 65 ವರ್ಷದ ಜಾಟ್‌ಸಿಖ್ ಮಹಿಳೆಯೊಬ್ಬಳಿಗೆ ನೋಡಿಕೊಳ್ಳಲು ಯಾರೂ ಇಲ್ಲದಿರುವುದರಿಂದಾಗಿ ಜಾತಿನಿಯಮ ಮುರಿದು ದಿನಗೂಲಿ ಕೆಲಸ ಮಾಡುತ್ತಾಳೆ. ಆಕೆ ಬೆರಣಿ ತಟ್ಟಿ ತಿಂಗಳಿಗೆ 450 ರೂ.ಗಳನ್ನು ಸಂಪಾದಿಸುತ್ತಾಳೆ. 12 ಎಮ್ಮೆಗಳಿರುವ ಒಬ್ಬರಿಂದ ರೂ. 300, 5 ಎಮ್ಮೆಗಳಿರುವ ಒಬ್ಬರಿಂದ 150 ರೂ. ಸಿಗುತ್ತದೆ. ಕೆಲಸ 12 ಗಂಟೆಗೆ ಮುಗಿದರೂ ಆ ವಯಸ್ಸಿಗೆ ಆ ಕೆಲಸ ಕಷ್ಟಕರವಾದ್ದು. ಆಕೆಯ ಕೈಯ್ತುಂಬ ಕುಯ್ದುಗಾಯಗಳಿದ್ದವು. ಗಾಯವಿಲ್ಲದಿದ್ದರೆ ಹತ್ತಿಕೀಳುವ ಕೆಲಸ ಮಾಡಿ ಇನ್ನೂ ಸ್ವಲ್ಪ ಸಂಪಾದಿಸಬಹುದಿತ್ತು ಎನ್ನುತ್ತಾಳೆ ಆಕೆ.

ಮನೆಗೆಲಸದಲ್ಲೆ ಮುಳುಗಿರುವ ಆ ಹೆಂಗಸರನ್ನು ಒಂದು ಗಂಟೆ ಕಾಲ ಸಂದರ್ಶನ ಮಾಡುವುದು ಸುಲಭವಾಗಿರಲಿಲ್ಲ. ಪಶುಸಾಕಾಣಿಕೆ, ಹಾಲು ಕರೆಯುವುದರಲ್ಲಿ ಬೆಳಗಿನ ಸಮಯವೆಲ್ಲ ಕಳೆದುಹೋಗುತ್ತದೆ. ಮನೆಗೆಲಸವಂತು ನಿತ್ಯದ ಜವಾಬ್ದಾರಿಯಾಗಿದ್ದರೂ ಅದನ್ನು ಅವರು ಕೆಲಸವೆಂದು ಕರೆಯುವುದಿಲ್ಲ. ಮೂರು ಹೊತ್ತು ಅಡುಗೆ ಮಾಡಿ ಬಡಿಸುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದಕ್ಕೇ ದಿನದ ಹೆಚ್ಚಿನ ಸಮಯ ತೆಗೆದುಕೊಳ್ಳುತ್ತದೆ. ಜೊತೆಗೆ ಮನೆ, ಅಂಗಳ ಗುಡಿಸುವುದು, ಬೆರಣಿ ತಟ್ಟುವುದೂ ನಡೆಯುತ್ತಲೆ ಇರುತ್ತದೆ. ಬಹುಪಾಲು ಮನೆಗಳಲ್ಲಿ ಹಿರಿಯರನ್ನು ನೋಡಿಕೊಳ್ಳುವ ಜವಾಬ್ದಾರಿ. ಕೆಲವು ಮನೆಗಳಲ್ಲಿ ಇಡೀ ದಿನ ಆರೈಕೆ ಬೇಡುವ ಹಾಸಿಗೆ ಹಿಡಿದ ಅತ್ತೆ-ಮಾವಂದಿರಿದ್ದರು. ಪಿತೃಪ್ರಧಾನ ಕುಟುಂಬವುಳ್ಳ ಸಮಾಜದ ವಾಸ್ತವ ಈ ಮಹಿಳೆಯರೊಂದಿಗೆ ಮಾತನಾಡುವಾಗ ಕಣ್ಣಿಗೆ ರಾಚುತ್ತದೆ. ಸೊಸೆಯರಾದ್ದರಿಂದ ಹಿರಿಯರಿಗೆ ಮಾರ್ಯಾದೆ ಕೊಡಬೇಕು. ಹಾಗಾಗಿ ಜೋರಾಗಿ ಮಾತನಾಡದೆ ಪಿಸಿಪಿಸಿ ಮಾತನಾಡುತ್ತಾರೆ. ಮದುವೆಯೊಂದಿಗೆ ಬರುವ ಗಂಡಸಿನ ತೋರಿಕೆಯ ರಕ್ಷಣೆ ಅಥವ ಆತ್ಮೀಯತೆಯೂ ನಿರಾಕರಿಸಲ್ಪಟ್ಟಿರುವುದರಿಂದ "ಪ್ರೀತಿಗಾಗಿ ದುಡಿಮೆ" ಎಂಬ ಮಿಥ್ಯೆಯೂ ಸವಕಲಾಗಿ ಬಿಟ್ಟಿದೆ.

ಕುಟುಂಬ ಮತ್ತು ಮನೆಗೆಲಸದೊಂದಿಗೆ ಮಹಿಳೆಯರನ್ನು ಗುರುತಿಸುವುದು ಪಿತೃಪ್ರಧಾನ ವ್ಯವಸ್ಥೆಯು ಕೊಂಚವೂ ಧಕ್ಕೆಯಾಗದ ರೀತಿಯಲ್ಲಿ ಹೇರುವ ಸಾಂಪ್ರದಾಯಿಕ ಹೊರೆಗೆ ಪೂರಕವಾಗಿದೆ. ಈ ಸಾಂಪ್ರದಾಯಿಕ ಹೊರೆಯೊಂದಿಗೆ ತಂದೆ ಇಲ್ಲದ ಕುಟುಂಬಗಳನ್ನು ನಡೆಸುವ ಹೊಸ ಜವಾಬ್ದಾರಿಗಳನ್ನೂ ನಿಭಾಯಿಸುತ್ತಿರುವುದು ಜಿಜ್ಞಾಸೆಯ ಅಂಶವಾಗಿದೆ.

ಮದುವೆಯ ವೆಚ್ಚಗಳು

ಲಿಂಗ ಅನುಪಾತ ಗಣನೀಯವಾಗಿ ಇಳಿಯುತ್ತಿರುವ ರಾಜ್ಯಗಳಲ್ಲಿ ಪಂಜಾಬ್ ಮುಂದಿರುವುದು ಅಲ್ಲಿನ ಮಹಿಳೆಯರ ಅಪಮೌಲೀಕರಣವನ್ನು ಸ್ಪಷ್ಟಪಡಿಸುತ್ತದೆ. 2001ರ ಜನಗಣತಿಯ ಪ್ರಕಾರ ರಾಷ್ಟ್ರೀಯ ಅಂದಾಜು 933 ಇದ್ದರೆ, ಪಂಜಾಬ್‌ನಲ್ಲಿ 1000 ಪುರುಷರಿಗೆ 876 ಮಹಿಳೆಯರಿದ್ದಾರೆ. ಅಲ್ಲಿ ಸಂದರ್ಶನ ಮಾಡಿದ ಕುಟುಂಬಗಳಲ್ಲಿ ಅರ್ಧಕ್ಕಿಂತ ಹೆಚ್ಚಿನ ಕುಟುಂಬಗಳು ಎರಡೂ ಗಂಡು ಮಕ್ಕಳು ಅಥವ ಒಂದೇ ಗಂಡು ಮಗುವನ್ನು ಹೊಂದಿರುವುದು ಆಶ್ಚರ್ಯವೇನಲ್ಲ. ಹೆಣ್ಣುಮಕ್ಕಳನ್ನು ಈ ಜಗತ್ತಿಗೆ ತರುವುದೇ ದುಬಾರಿಯಾಗಿರುವುದು ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿರುವುದಕ್ಕೆ ಕಾರಣವಾಗಿದೆ. ಕೃಷಿಯನ್ನು ನೆಚ್ಚಿಕೊಂಡು ಬದುಕುವುದೇ ದುಸ್ತರವಾಗಿರುವ ಸಮಯದಲ್ಲಿ ಸಂಪಾದನೆಗೆ ಬೇರೆ ಸಾಧ್ಯತೆಗಳನ್ನು ಹುಡುಕಿಕೊಳ್ಳುವುದಕ್ಕೆ ಜಾತಿ ಬಹುದೊಡ್ಡ ಅಡ್ಡಗೋಡೆಯಾಗಿರುವುದು. ದಿವಾಳಿ ಎದ್ದರೂ ವರದಕ್ಷಿಣೆ ಕೂಡಲೇ ಬೇಕೆಂಬ ಕಾರಣಕ್ಕೆ ಹೆಣ್ಣುಮಕ್ಕಳನ್ನು ಹೊರೆ ಎಂದು ಭಾವಿಸಲಾಗುತ್ತದೆ. ಬಡವರು ವರದಕ್ಷಿಣೆಯ ಸ್ವರೂಪದಲ್ಲಿ ಭಾರಿ ಮೊತ್ತವನ್ನೆ ಖರ್ಚು ಮಾಡುತ್ತಿದ್ದಾರೆ; ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೊ ವರದಕ್ಷಿಣೆ ಖರ್ಚಿಗಾಗಿ ಸಾಲದ ಸುಳಿಗೆ ಸಿಕ್ಕಿಕೊಂಡಿರುವುದು ಆತ್ಮಹತ್ಯೆಗೆ ಕಾರಣವಾಗಿದೆ. ಅಸಹಾಯಕ ಪರಿಸ್ಥಿತಿಯಲ್ಲಿ ಕೊಳವೆ ಬಾವಿ ತೋಡಿಸಲೆಂದೊ, ಪಂಪ್‌ಕೊಳ್ಳಲೆಂದೊ, ಭೂಮಿಕೊಳ್ಳಲೆಂದೊ, ಮದುವೆ ಖರ್ಚು ಅಥವ ವರದಕ್ಷಿಣೆ ಬೇಡಿಕೆ ನಿಭಾಯಿಸಲೆಂದೊ ಸಾಲ ಮಾಡುತ್ತಾರೆ. ಆತ್ಮಹತ್ಯೆಗಳು ನಡೆದಿರುವ ಕುಟುಂಬಗಳಲ್ಲಿಯೂ ಸಹ ಕನಿಷ್ಠವೆಂದರೆ 2 ಲಕ್ಷ ವರದಕ್ಷಿಣೆ ನೀಡಲಾಗಿರುತ್ತದೆ. ಭೂಮಿ ಇಲ್ಲದ ಕುಟುಂಬಗಳೂ ಮದುವೆ ವ್ಯವಹಾರದಲ್ಲಿ ರೂ. 60 ಸಾವಿರದಷ್ಟು ಖರ್ಚು ಮಾಡುತ್ತಾರೆ.

ಸಂಗ್ರೂರ್ ಜಿಲ್ಲೆಯಲ್ಲಿ ಮಗನನ್ನು ಕಳೆದುಕೊಂಡ ಒಂದೇ ತಿಂಗಳಿನೊಳಗೆ ತಾಯಿಯೊಬ್ಬಳು 1 ಲಕ್ಷ ಸಾಲ ತೆಗೆದುಕೊಳ್ಳಬೇಕಾಯ್ತು. ಪ್ರತಿ 6 ತಿಂಗಳಿಗೊಮ್ಮೆ ಆಕೆ 12000 ರೂ. ಕಟ್ಟಬೇಕು. ಸಾಲದ ಹಣದಲ್ಲಿ ಆಕೆ ಹಳೆ ಸಾಲ ತೀರಿಸಿ, ಮಗಳ ಮದುವೆ ಮಾಡಿದ್ದಲ್ಲದೆ ಸ್ವಲ್ಪ ಚಿನ್ನವನ್ನೂ ಖರೀದಿಸಬೇಕಾಯ್ತು. ತಂಗಿಯ ಮದುವೆ ಖರ್ಚಿನ

ಬಗ್ಗೆ ವ್ಯಾಕುಲಗೊಂಡ ಆಕೆಯ ಮಗ ಪ್ರಾಣ ಕಳೆದುಕೊಂಡಿದ್ದ. ಅವನ ತಾಯಿ ಮತ್ತೆ ಹಳೆಸಾಲ ತೀರಿಸಲು, ಮಗಳ ಮದುವೆ ಮಾಡಲು ಬೇರೆದಾರಿಯೇ ಇರಲಿಲ್ಲವಾದ್ದರಿಂದ ಸಾಲಮಾಡಲೇಬೇಕಾಯ್ತು ಎಂದು ಹೇಳಿದಳು. ಅಲ್ಲಿದ್ದ ಇತರರು ಹಲವಾರು ಜನ ಹೀಗೇ ಮಾಡುತ್ತಾರೆಂದು ಹೇಳಿದರು. ಆಕೆಯ ಮಗಳು ಹೆರಿಗೆಗಾಗಿ ತಾಯಿ ಮನೆಗೆ ಬಂದಿದ್ದಳು. ಮಗಳನ್ನು ಅತ್ತೆಮನೆಗೆ ಕಳಿಸುವ ಮೊದಲು ಮೊಮ್ಮಗನಿಗಾಗಿ ಹಣ ಖರ್ಚು ಮಾಡುವ ಬಗ್ಗೆ ತಾಯಿ ಯೋಚಿಸುತ್ತಿದ್ದಾಳೆ. "ಇಷ್ಟನ್ನಾದರೂ ಮಾಡಲೇಬೇಕು ಇದು ಸಂಪ್ರದಾಯ" ಎನ್ನುತ್ತಾಳೆ ಆಕೆ. ಈಗ ಬದುಕುತ್ತಿರುವ ಹೊಸಾಕಾಲದಲ್ಲಿ ಆ ಖರ್ಚನ್ನು ನಿಭಾಯಿಸಬೇಕಾಗಿದೆ. ಸಂಗ್ರೂರ್ ಜಿಲ್ಲೆಯ ಬಲ್ಜಿತ್‌ಸಿಂಗ್ ವಿಪರೀತ ಸಾಲಮಾಡಿದ್ದು, ಅಗತ್ಯಕ್ಕಿಂತಲೂ ಕಡಿಮೆ ಸಂಪಾದನೆ ಇದ್ದುದರಿಂದಾಗಿ ಸಾಲ ತೀರಿಸಲಾಗಲಿಲ್ಲ. ಆತನಿಗೆ 5 ಜನ ಸೋದರಿಯರಿದ್ದು ಮೂವರಿಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡಿದ್ದ. ಅದವನ ಜವಾಬ್ದಾರಿಯಾಗಿತ್ತು. ಇನ್ನಿಬ್ಬರ ಮದುವೆಯನ್ನು ಆತನ ತಂದೆ ಮಾಡಿಸಿದ್ದರು. 1.5 ಎಕರೆ ಜಮೀನು ಮಾರಿದ್ದಲ್ಲದೆ, ಖಾಸಗಿ ಫೈನಾನ್ಸ್ ಕಂಪನಿಯಿಂದ 209000 ರೂ. ಸಾಲವನ್ನು ತೆಗೆದುಕೊಂಡಿದ್ದ.

ಗಂಡಂದಿರ ಆತ್ಮಹತ್ಯೆಯ ನಂತರವೂ ಮಹಿಳೆಯರು ಹೆಣ್ಣುಮಕ್ಕಳ ಮದುವೆಗಾಗಿ ಒಂದಕ್ಕಿಂತ ಹೆಚ್ಚಿನ ಸಲ ಸಾಲ ಮಾಡಿದ್ದಾರೆ. ಬಲ್ಜಿತ್‌ಕೌರಳ ಗಂಡ ಬಡ್ಡಿ ವ್ಯಾಪಾರಿಗೆ ಅಸಲು ತೀರಿಸಲು 1.5 ಎಕರೆ ಜಮೀನು ಮಾರಿದ ನಂತರ 2001ರಲ್ಲಿ ಆತ್ಮಹತ್ಯೆಮಾಡಿಕೊಂಡ. ಅದಾದ ನಂತರ ಆಕೆ 2 ಲಕ್ಷ ಸಾಲಮಾಡಿ ಅಡವಿಟ್ಟ 1 ಎಕರೆ ಜಮೀನು ಬಿಡಿಸಿಕೊಂಡು, ಮಗಳ ಮದುವೆಯನ್ನೂ ಹೇಗೊ ಮಾಡಿದಳು. ಕನಿಷ್ಟ ಚಿನ್ನವನ್ನು ನೀಡಿ ಸರಳವಾಗಿ ಮದುವೆ ಮಾಡುವುದಕ್ಕೂ 2 ಲಕ್ಷ ರೂ. ಖರ್ಚಾಗುತ್ತದೆ. ಅಷ್ಟು ಮೊತ್ತ ಎರಡನೆ ಮಗಳ ಮದುವೆಗೂ ಬೇಕಾಗಿದೆ ಎನ್ನುತ್ತಾಳೆ. ಆಕೆ ಹೊಸ ಸಾಲ ಮಂಜೂರಾದ ಕಾಗದ ಪತ್ರಗಳನ್ನು ತೋರಿಸುತ್ತ "ಸಾಲ ಮರುಪಾವತಿಸುವುದು ನನ್ನಿಂದಾಗದು" ಎಂದಳು. ಪ್ರತಿಯೊಂದು ಮನೆಗೆಲಸವನ್ನು ಮಾಡಿ ಜಾನುವಾರುಗಳ ಪಾಲನೆ ಮತ್ತು ವ್ಯವಸಾಯದಲ್ಲಿ ಸಹಾಯ ಮಾಡಿದರೂ ಹೆಣ್ಣು ಮಕ್ಕಳನ್ನು ಹೊರೆ ಎಂದೆ ನೋಡಲಾಗುತ್ತದೆ. ಕಾರಣ ವರದಕ್ಷಿಣೆಗಾಗಿ ಹಣ ಹೊಂದಿಸಿ ಮದುವೆ ಮಾಡದಿದ್ದರೆ ಮೋಕ್ಷ ಸಿಗುವುದಿಲ್ಲವೆಂಬ ನಂಬಿಕೆ. ಫಿರೋಜ್‌ಪುರ್ ಜಿಲ್ಲೆಯ ಮಾಮ್‌ಡಾಟ್ ಬ್ಲಾಕ್‌ನಲ್ಲಿರುವ ಹರ್‌ಪ್ರೀತ್‌ಕೌರಳಿಗೆ ಮೂರುಜನ ಹದಿಹರೆಯದ ಹೆಣ್ಣು ಮಕ್ಕಳಿದ್ದಾರೆ. ಆಕೆಗಿದ್ದ ಒಬ್ಬನೆ ಮಗ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈಗಾಗಲೆ ರೂ. 3.5 ಲಕ್ಷ ಸಾಲವಿದ್ದು, ಬೆಳೆಯುತ್ತಲೇ ಇದೆ. ಇರುವ ಮೂರು ಎಕರೆಯಲ್ಲಿ ವ್ಯವಸಾಯ ಮಾಡಿ ವರ್ಷಕ್ಕೆ 60 ಸಾವಿರ ಸಂಪಾದಿಸಿದರೂ ಅದರ ಬಹುತೇಕ ಮೊತ್ತ ಬಡ್ಡಿಗೇ ಹೋಗುತ್ತದೆ. ಅಸಲು ಮಾತ್ರ ಇದ್ದ ಹಾಗೇ ಇದೆ. ತಾಯಿ, ತಂದೆ, ಮಕ್ಕಳೆಲ್ಲರೂ ವ್ಯವಸಾಯದಲ್ಲಿ ತೊಡಗಿದ್ದಾರೆ. ಹೆಣ್ಣುಮಕ್ಕಳ ಮದುವೆಯದೇ ಚಿಂತೆಯಾಗಿರುವ ಆಕೆಗೆ ಮದುವೆಗೆ ಮತ್ತೆ ಸಾಲ ಮಾಡಲು ದಾರಿ ಯಾವುದೆಂದು ತಿಳಿಯದಾಗಿದೆ. "ನಮಗೆ ಮತ್ತೆ ಸಾಲ ಸಿಗುವುದೆ?" ಉತ್ತರ ತಿಳಿಯಲು ಆಕೆ ಉತ್ಸುಕಳಾಗಿದ್ದಾಳೆ.

ಹೆಣ್ಣುಮಕ್ಕಳಿಗೆ ಹಣ ಕಳುಹಿಸುವುದು ಮದುವೆಯ ನಂತರವೂ ಮುಂದುವರೆಯುತ್ತದೆ. ಮೊಮ್ಮಕ್ಕಳು ಹುಟ್ಟುವುದೆಂದರೆ ಹೆಚ್ಚಿನ ಹಣ ಖರ್ಚು ಮಾಡುವುದು. ಮಾನ್ಸಜಿಲ್ಲೆಯ ಸೋನುಕೌರ್ ದಲಿತ ಭೂಹೀನ ಕೃಷಿ ಕಾರ್ಮಿಕಳು. ಆಕೆಗಿರುವ ಸಾಲ ರೂ. 50000. ಸಾಲದ ಹೊರೆ ಮತ್ತು ಮೂರು ಜನ ತಂಗಿಯರ ಮದುವೆ ಮಾಡಬೇಕೆಂಬ ಚಿಂತೆಯಿಂದ ಬೇಸತ್ತು ಆಕೆಯ ಮಗ 2003ರಲ್ಲಿ ಆತ್ಮಹತ್ಯೆ ಮಾಡಿಕೊಂಡ. ಒಬ್ಬ ಮಗಳಿಗೆ ತನ್ನ ಕುಟುಂಬದಲ್ಲಾಗುತ್ತಿರುವ ಮದುವೆಗೆ 30000 ಕೊಡಬೇಕೆಂದೂ ಇಲ್ಲದಿದ್ದರೆ ಆಕೆ ಮನೆಗೆ ಬರಕೂಡದೆಂದೂ ಒತ್ತಾಯ ಮಾಡುತ್ತಿದ್ದಾರೆ.

ಮಾನ್ಸ ಜಿಲ್ಲೆಯ ಪ್ರೀತ್‌ಕೌರ್ ತನ್ನ ಹಿರಿಯ ಮಗಳ ಮದುವೆಗೆಂದು 1.50 ಲಕ್ಷ ರೂ. ಸಾಲ ತೆಗೆದುಕೊಂಡಿದ್ದಾಳೆ. ಮದುವೆಯಾಗ ಬೇಕಾಗಿರುವ ಹೆಣ್ಣುಮಕ್ಕಳು ಇನ್ನೂ ಇಬ್ಬರಿದ್ದು ಮತ್ತೆ ಸಾಲ ಮಾಡಬೇಕಾಗಿದೆ. ಗಂಡುಮಕ್ಕಳ ಮದುವೆಯೂ ಸಹ ಸಾಲ ತೆಗೆದುಕೊಳ್ಳದೆ, ಆಸ್ತಿ ಮಾರದೆ ನಡೆಯುವುದಿಲ್ಲ, ಮಗನ ಮದುವೆ ಮಾಡಲು ಆಕೆ ಎಮ್ಮೆಯೊಂದನ್ನು 45000ಕ್ಕೆ ಮಾರಿದ್ದಾಳೆ. ಅದರಿಂದ ಹಾಲಿನ ಮಾರಾಟದಿಂದ ಸಿಗುತ್ತಿದ್ದ ವರಮಾನ ನಿಂತುಹೋಯಿತು. ಇರುವ ಒಂದು ಎಕರೆ ಭೂಮಿಯಲ್ಲಿ ವ್ಯವಸಾಯ ಮಾಡುವುದರಿಂದ ಸಿಗುತ್ತಿದ್ದ ವಾರ್ಷಿಕ ವರಮಾನ ರೂ. 2000ಕ್ಕೆ ಹಾಲಿನ ವರಮಾನವೂ ಸೇರಿತ್ತು.

ಸಂಗ್ರೂರು ಜಿಲ್ಲೆಯ ಪರ್ಮಿಂದರ್‌ಕೌರ್‌ಗೆ ಭೂಮಿಯೇ ಉಳಿದಿಲ್ಲ ರುವುದರಿಂದ ಹಳ್ಳಿಯೊಳಗೆ, ಸಮುದಾಯದೊಳಗೆ ಬಹುದೊಡ್ಡ ಅವಮಾನ ಎದುರಿಸಬೇಕಾಗಿದೆ. ಆಕೆಯ ಮೂರುಜನ ಗಂಡುಮಕ್ಕಳು ದಿನಗೂಲಿ ಮಾಡುತ್ತಿದ್ದಾರೆ. ಅವರ್‍ಯಾರಿಗೂ ಮದುವೆಯಾಗಿಲ್ಲ, ಭೂಮಿ ಇಲ್ಲದವರಿಗೆ ಹೆಣ್ಣು ಕೊಡುವುದಕ್ಕೆ ಯಾರೂ ಇಷ್ಟಪಡುವುದಿಲ್ಲ ವಾದ್ದರಿಂದ ಮದುವೆಯಾಗುವುದೂ ಸಾಧ್ಯವಿಲ್ಲ. ಸಮುದಾಯದಿಂದ ಬಹಿಷ್ಕಾರಕ್ಕೊಳಗಾಗುವುದು ಅವಮಾನವನ್ನು ಇನ್ನೂ ಹೆಚ್ಚಿಸುತ್ತದೆ. ಆಕೆಯ ಗಂಡು ಮಕ್ಕಳು ದಿನವೊಂದಕ್ಕೆ 70ರಿಂದ 80ರ ವರೆಗೂ ಸಂಪಾದಿಸುತ್ತಾರೆ. ಆದರೆ ಪ್ರತಿ ತಿಂಗಳು ಕೆಲಸ ಸಿಗುವ ಗ್ಯಾರಂಟಿ ಇಲ್ಲ. ಗಂಡುಮಕ್ಕಳ ಮದುವೆ ಮಾಡಿಸದೇ ಇರುವುದು ಆಕೆಗೆ ಚಿಂತೆಯ ಜೊತೆಗೆ ಅವಮಾನದ ವಿಷಯವೂ ಆಗಿದೆ. ಆಕೆಯ ಗಂಡ ಸಾಲ ಮರುಪಾವತಿಸುವ ಸಲುವಾಗಿ ಇದ್ದೆಲ್ಲ ಭೂಮಿಯನ್ನು ಮಾರಿ 2000ದಲ್ಲಿ ಆತ್ಮಹತ್ಯೆ ಮಾಡಿಕೊಂಡ. ಮದುವೆ ಎನ್ನುವುದು ಇಂದಿಗೂ ಸಾಮಾಜಿಕ ಮಾನ್ಯತೆಯ ಗುರುತಾಗಿ ಉಳಿದಿರುವುದು ಮಹಿಳಾ ಚಳವಳಿಯ ಬಹುದೊಡ್ಡ ವೈಫಲ್ಯವಾಗಿದೆ. ಕನ್ಯಾದಾನದಂತಹ ಸಾಂಸ್ಕೃತಿಕ ನಿರ್ಬಂಧತೆಯ ಕಪಿಮುಷ್ಠಿಯಲ್ಲಿ ಹಳ್ಳಿಯ ಜನರು ಹೇಗೆ ಸಿಲುಕಿಕೊಂಡಿದ್ದಾರೆ ಎಂಬುದನ್ನು ವರದಕ್ಷಿಣೆ ಮತ್ತು ಅದ್ದೂರಿ ಸಮಾರಂಭಗಳಲ್ಲಿ ಕಾಣಬಹುದಾಗಿದೆ. ಕನ್ಯಾದಾನಕ್ಕೆ ಅಂತಹ ಮಾನ್ಯತೆ ಇರುವುದು ಕ್ರೂರ ವ್ಯಂಗ್ಯವೆ ಸರಿ. ವರದಕ್ಷಿಣೆ ಹೊಂದಿಸುವವರ ಜೀವವನ್ನೆ ನುಂಗುವ, ಅನೇಕ ಬಡಕುಟುಂಬಗಳ ನಿದ್ದೆಯಿಲ್ಲದ ರಾತ್ರಿಗಳಿಗೆ ಕಾರಣವಾಗಿರುವ ಕ್ರೂರ ಸಾಂಸ್ಕೃತಿಕ ಆಚರಣೆಯ ಮೂಲಕವೇ ಚಿತ್ತಸ್ವಾಸ್ಥ್ಯ ಮತ್ತು ಅಸ್ಮಿತೆಯು ಉಳಿದುಕೊಳ್ಳ ಬೇಕಾಗಿರುವುದು ದುರಂತವೇ ಸರಿ. ವರದಕ್ಷಿಣೆಯು ಹಲವಾರು ವಿಧಗಳಲ್ಲಿ ಪರಿಸ್ಥಿತಿಯನ್ನು ಹದಗೆಡಿಸುತ್ತಿದೆ. ಅವುಗಳಲ್ಲಿ ಅಪಾಯಕಾರಿ ಯಾಗಿ ಇಳಿಯುತ್ತಿರುವ ಲಿಂಗಾನುಪಾತವೂ ಒಂದು.

ಫಿರೋಜ್‌ಪುರ ಜಿಲ್ಲೆಯಲ್ಲಿ ಅತ್ತೆಯೊಬ್ಬರನ್ನು ಮಾತನಾಡಿಸಿದಾಗ ಆಕೆ, ತನ್ನೆರೆಡು ಹೆಣ್ಣುಮಕ್ಕಳನ್ನು 80ರ ದಶಕದಲ್ಲಿ ವರದಕ್ಷಿಣೆ ಇಲ್ಲದೆ ಮದುವೆ ಮಾಡಲು ಸಾಧ್ಯವಾಗಿದ್ದು, ಖಲಿಸ್ತಾನ್ ಚಳವಳಿಯ ಉಗ್ರರು ವರದಕ್ಷಿಣೆಯ ಮೇಲೆ ನಿಷೇಧ ಹೇರಿದ್ದ ಕಾರಣಕ್ಕೆ ಎಂದು ಉತ್ಸಾಹದಿಂದ ಹೇಳಿದ್ದು ಆಸಕ್ತಿದಾಯಕವಾಗಿತ್ತು. ಆ ಅವಧಿಯಲ್ಲಿ ಹೆಚ್ಚು ಕಡಿಮೆ ಯಾವ ವಧು ಅಥವ ವರನ ಕಡೆಯವರೂ ವರದಕ್ಷಿಣೆಯನ್ನಾಗಲಿ, ಉಡುಗೊರೆಯನ್ನಾಗಲಿ ತೆಗೆದುಕೊಳ್ಳಲು ಧೈರ್ಯಮಾಡಿರಲಿಲ್ಲ. ಈಗ ಬಹುತೇಕ ಎಲ್ಲ ರೈತ ಸಂಘಗಳು ಅದ್ದೂರಿ ಮದುವೆ ಮತ್ತು ವರದಕ್ಷಿಣೆಯನ್ನು ವಿರೋಧಿಸುವ ಪ್ರಚಾರಾಂದೋಲನವನ್ನು ಕೈಗೊಂಡಿವೆ. ಖರ್ಚಿನ ಸ್ರೋತಾ, ಕಾರ್ಖಾನೆಗಳು ಮುಚ್ಚಿ ಹೋಗುತ್ತಿರುವುದು, ನಿರುದ್ಯೋಗ, ಸ್ಥಳಾಂತರ, ರೈತರ

ಆತ್ಮಹತ್ಯೆಯಂತಹುದು ವ್ಯಾಪಕವಾಗಿ ಹೆಚ್ಚುತ್ತಿರುವ ಇಂದಿನ ಸಂದರ್ಭದ ಹಿನ್ನೆಲೆಯಲ್ಲಿ ವರದಕ್ಷಿಣೆಯನ್ನು ಮರುಪರಿಶೀಲಿಸುವ ಕೆಲಸವನ್ನು ಮಹಿಳಾ ಚಳವಳಿ ಮಾಡುವ ಅಗತ್ಯವಿದೆ. ಇಂದಿನ ಮಹಿಳಾ ಯುವ ತಲೆಮಾರಿನ, ವಿಶೇಷವಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ವರ್ಗದ ಮತ್ತು ನಗರದ ಬಡವರ್ಗ ರೈತವರ್ಗಕ್ಕೆ ಸೇರಿದ ಮಹಿಳೆಯರ ವಾಸ್ತವಕ್ಕೆ ಹತ್ತಿರವಾಗುವ ಅಗತ್ಯ ನಮ್ಮೆಲ್ಲರಿಗಿದೆ.

ಬಾಲ್ಯಾವಸ್ಥೆಯಿಂದಲೇ ಸ್ಥಿತ್ಯಂತರ : ಸಾಲದ ಹೊರೆ ಮತ್ತು ರೈತರು ಆತ್ಮಹತ್ಯೆಗೆ ಶರಣಾಗುತ್ತಿರುವುದು ನೂರಾರು ತಂದೆಯಿಲ್ಲದ ಕುಟುಂಬಗಳಿಗೆ ಕಾರಣವಾಗಿದೆ. ಈ ಕುಟುಂಬಗಳ ಮಕ್ಕಳು ಬೇರೆ ಆ ವಯಸ್ಸಿನ ಮಕ್ಕಳಂತಲ್ಲದೆ ಅನ್ಯೋನ್ಯವಾಗಿದ್ದರೂ ಅದೇ ಮುಗ್ಧತನ, ಅಸಹಾಯಕತನ ಹೊಂದಿದ್ದರು. ಶಾಲೆಗೆ ಹೋಗುವ ಬಹುತೇಕ ಮಕ್ಕಳು ಹೆಚ್ಚು ಗಂಭೀರವಾಗಿ, ಕೊಂಚ ಖಿನ್ನರಾಗಿ ಕಾಣುತ್ತಿದ್ದರು. ಬಹುಪಾಲು ಮನೆಗಳಲ್ಲಿ ಮಕ್ಕಳು ಪುಸ್ತಕ ಹಿಡಿದುಕೊಂಡು ಹೋಂವರ್ಕ್ ಮಾಡುತ್ತಿದ್ದರು, ಸದ್ದಿಲ್ಲದೆ ಉಣ್ಣುತ್ತಿದ್ದರು ಅಥವ ಮೌನವಾಗಿ ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಬಹುಪಾಲು ತಾಯಂದಿರು ತಮ್ಮ ಮಕ್ಕಳು ತುಂಬಾ ಸಹಕರಿಸುವುದಲ್ಲದೆ ವಿಧೇಯರಾಗಿಯೂ ಇದ್ದಾರೆಂದು ಹೇಳಿದರು. ದೊಡ್ಡ ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳಿಗೆ ನಾವು ಮಾತನಾಡುತ್ತಿದ್ದ ವಿಷಯಗಳ ಅರಿವಿತ್ತು. ಕೆಲವೊಮ್ಮೆ ಆ ಹೆಣ್ಣುಮಕ್ಕಳು ನಮ್ಮ ಮಾತಿನಲ್ಲಿ ಭಾಗಿಗಳಾಗುತ್ತಿದ್ದರೂ ಮೌನವಾಗಿರುತ್ತಿದ್ದುದೇ ಹೆಚ್ಚು.

ಸಂಗ್ರೂರು ಜಿಲ್ಲೆಯ ಬಲ್ಜಿತ್‌ಸಿಂಗ್‌ಗೆ ಇಬ್ಬರು ಗಂಡು ಮಕ್ಕಳು. ಅವರಲ್ಲೊಬ್ಬರಿಗೆ ತೀವ್ರಸ್ವರೂಪದ ಮಾನಸಿಕ ಅಸ್ವಸ್ಥತೆಯಿದೆ. ಅವನ ಕುರಿತಂತೆ ಯಾವ ಭರವಸೆಯೂ ಆಕೆಗಿಲ್ಲ. ಮತ್ತೊಬ್ಬ ಮಗನಿಗೆ 16 ಅಥವ 17 ವರ್ಷವಿರಬೇಕು. ಅವನು ಖಾಸಗಿ ಶಾಲೆಯೊಂದರಲ್ಲಿ ಓದುತ್ತಿದ್ದಾನೆ. ಯಾವಾಗಲೂ ಉದ್ವಿಗ್ನನಾಗಿರುತ್ತಾನೆ. ಶಾಲೆಯಿಂದ ಬಂದ ನಂತರ ಮೌನವಾಗಿರುತ್ತಾನೆ. ಅವನ ಆರೋಗ್ಯ ಯೋಗಕ್ಷೇಮ ಕುರಿತು ಚಿಂತೆ ಮಾಡುವ ಬಲ್ಜಿತ್, ಅವನೂ ಈ ವಿಶಿಷ್ಟ ಪರಿಸ್ಥಿತಿಯಿಂದ ಖಿನ್ನತೆಗೊಳಗಾಗುವನೋ ಅಥವ ಅದರಲ್ಲಿಯೆ ಕಳೆದು ಹೋಗುವನೇನೊ ಎಂದು ಆತಂಕ ಪಡುತ್ತಾಳೆ. "ನನ್ನ ಮಕ್ಕಳನ್ನು ಅವರ ಪಾಡಿಗೆ ಬಿಡಲು ಬಯಸುತ್ತೇನೆ. ನಮ್ಮ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ. ಮುಂದೆ ಅವರಿಗೇನಾಗುವುದೊ? ಎರಡನೆ ಮಗನೊಬ್ಬನೇ ನನಗಿರುವ ಭರವಸೆ. ನಾನು ಸತ್ತುಹೋದರೂ ಪರವಾಗಿಲ್ಲ ಅವನು ಬದುಕುಳಿಯಬೇಕು" ಎಂದು ಆಕೆ ಹೇಳಿದಳು.

ನವೆಂಬರ್ 2008ರಲ್ಲಿ ಫಿರೋಜ್‌ಪುರದಲ್ಲಿ ಆತ್ಮಹತ್ಯೆಯ ಪ್ರಕರಣ ಜರುಗಿತು. ಆತ ಬ್ಯಾಂಕಿನ ಏಜೆಂಟರು ಮತ್ತು ಅರ್ತಿಯಾನಿಂದ ನಿರಂತರವಾಗಿ ಕಿರುಕುಳ ಅನುಭವಿಸುತ್ತಿದ್ದ. ಇದರಿಂದ ತುಂಬಾ ಅವಮಾನವಾಯಿತೆಂದು ಆತನ ತಂದೆ ಕಣ್ಣೀರಿಡುತ್ತ ಹೇಳಿದ. ಹಣಕಾಸಿನ ತೊಂದರೆ, ಏಜೆಂಟರುಗಳ ಕಾಟ, ಮಕ್ಕಳ ಓದು ಇತ್ಯಾದಿಗಳ ಕುರಿತು ಯಾವಾಗಲೂ ಚಿಂತೆ ಮಾಡುತ್ತಿದ್ದ. ಮಕ್ಕಳನ್ನು ಖಾಸಗಿ ಶಾಲೆಯಿಂದ ಬಿಡಿಸಿ ಸರ್ಕಾರಿ ಶಾಲೆಗೆ ಹಾಕಬೇಕಾಯ್ತು. ಮೂರು ಹೆಣ್ಣುಮಕ್ಕಳ ಮದುವೆಯಂತು ದೂರದ ಮಾತಾಗಿತ್ತು. ನಮ್ಮ ಪ್ರತಿಯೊಂದು ಮಾತನ್ನು ಕೇಳಿಸಿಕೊಳ್ಳುತ್ತಿದ್ದ ಮಗ ಆಘಾತಗೊಂಡಿದ್ದೂ ನಡುನಡುವೆ ಅಳುತ್ತಿದ್ದ. ಒಳಗೆ ಬರುತ್ತಿದ್ದ ಪ್ರತಿವ್ಯಕ್ತಿಯೂ "ಈತನೇ ನಿನಗಿರುವ ಒಂದೇ ಭರವಸೆ" ಎಂದು ಹೇಳುತ್ತಿದ್ದರು. ನಾವು ಅಲ್ಲಿಂದ ಹೊರಡುವಾಗ 11 ವರ್ಷದ ಆ ಹುಡುಗ "ನಾನು ನನ್ನ ತಾಯಿ ಮತ್ತು ಸಹೋದರಿಯರನ್ನು ನೋಡಿಕೊಳ್ಳುವೆ" ಎಂದು ಹೇಳಿದ.

ಸೋದರನ ಸಾವು ಉಂಟು ಮಾಡಿದ್ದ ಹತಾಶೆ, ದುಃಖದಲ್ಲಿ ಆ ಸೋದರಿಯರ ಭವಿಷ್ಯ ಕುರಿತ ಹತಾಶೆಯೂ ಸೇರಿಕೊಂಡಿತ್ತು. ಸಾಲದ ಸುಳಿಯಿಂದಾಗಿಯೇ ಆ ಮನೆಯ 25 ವರ್ಷದ ಯುವಕ ಜೂನ್ 2008ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ಮಾನ್ಸ ಜಿಲ್ಲೆಯ 18, 19 ವಯಸ್ಸಿನ ಬಲ್ವಿಂದರ್‌ಕೌರ್ ಮತ್ತು ಕುಲ್ಜಿತ್ ಕೌರ್ 10ನೇ ತರಗತಿಯವರೆಗೂ ಓದಿದ್ದಾರೆ. ಅವರು ಮಜ್ಹಬಿಸಿಕ್ ಸಮುದಾಯಕ್ಕೆ ಸೇರಿದವರು. ಕುಟುಂಬ ನಡೆಯುತ್ತಿರುವುದೇ ದಿನಗೂಲಿಯಿಂದ, ಸಾಲ 50000ಕ್ಕಿಂತ ಕಡಿಮೆ ಇದೆ. ಈಗ ಮದುವೆಯು ಸಹ ದೂರದ ಮಾತಾಗಿದೆ. ಹಾಗಾದರೂ ಭರವಸೆ, ಸಮತೆ ಕಾಯ್ದುಕೊಂಡಿರುವ ಅವರಿಗೆ ಇನ್ನೂ ಓದಬೇಕು ಅಥವ ಸಂಪಾದಿಸಬೇಕೆಂಬ ಇಚ್ಛೆ ಇದೆ. ಆದರೆ ಹೇಗೆಂದು ತಿಳಿದಿಲ್ಲ. ಫಿರೋಜ್‌ಪುರದ ಮಾಮ್‌ದಟ್ ಹೈಸ್ಕೂಲಿನಲ್ಲಿ ಓದುತ್ತಿರುವ 16 ವಯಸ್ಸಿನ ಹುಡುಗಿಗೆ ಓದಿ ಕೆಲಸ ಮಾಡಬೇಕೆಂಬ ತೀವ್ರವಾದ ಇಚ್ಛೆ ಇದೆ. ಆದರೆ ಕುಟುಂಬದ ಆರ್ಥಿಕ ಪರಿಸ್ಥಿತಿ ಆಕೆಯನ್ನು ಕೆಂಗೆಡಿಸಿದೆ. "2 ಲಕ್ಷ ಸಾಲ ತೀರಿಸುವುದು ಹೇಗೆ? ಇರುವುದು ಕೊಂಚವೇ ಭೂಮಿ ಯಾವ ಭೂಮಿಯನ್ನು ಮಾರುವುದು? ಮದುವೆ ಅಥವ ಓದು ಸಹ ಸಾಧ್ಯವಾಗುವುದು ಭೂಮಿಯನ್ನು ಮಾರಿದರೆ ಮಾತ್ರ. ಮಾರಲು ಭೂಮಿ ಇಲ್ಲ ಏನು ಮಾಡಬೇಕೆಂದು ನಿರೀಕ್ಷಿಸುತ್ತೀರಾ? ಪರಿಹಾರವೇ ಇಲ್ಲ. ಬೆಳೆಯಿಂದ ಸಿಗುವುದು ವರ್ಷಕ್ಕೆ ಬರಿ ರೂ. 20000. ನಿತ್ಯದ ಖರ್ಚು ತೂಗಿಸುವುದು ಹಾಲಿನ ಮಾರಾಟದಿಂದ ಮಾತ್ರ" ಎಂದು ಹೇಳಿದಳು. ಇವಳೊಬ್ಬಳೆ ಅವಳ ತಾಯಿ, ತಮ್ಮಂದಿರಿಗೆ ಸ್ಫೂರ್ತಿ. ಅವಳ ತಾಯಿಯೊಡನೆ ನಡೆಸುತ್ತಿದ್ದ ಸಂದರ್ಶನದಲ್ಲಿ ಆಕೆ ತುಂಬಾ ಆಸಕ್ತಿ ವಹಿಸಿದಳು. ಗಂಡಸರಿಲ್ಲದಿದ್ದಾಗ ಆಕೆಯೂ ಮಾತನಾಡಿದಳು. ಅವಳು ಹೆಚ್ಚು ಮಾತನಾಡಿದ್ದು ಕುಟುಂಬದ ಪರವಾಗಿ. ಕೊನೆಯಲ್ಲಿ ಆಕೆ ಹೇಳಿದಳು. "ನಮ್ಮನ್ನು ನೋಡಿದರೆ ನಾವಿಷ್ಟು ಬಡವರೆಂದು ಯಾರಿಗೂ ಅನಿಸುವುದಿಲ್ಲ. ನಮ್ಮ ಬಳಿ ಏನೂ ಇಲ್ಲ. ಹೊಸದೇನನ್ನೂ ನಾವು ಕೊಳ್ಳುವುದೇ ಇಲ್ಲ". ಸಂಗ್ರೂರು ಜಿಲ್ಲೆಯ ಲೆಹ್ರಾಗಾಗ್ ಬ್ಲಾಕ್‌ನಲ್ಲಿರುವ ಇಬ್ಬರು ಸೋದರಿಯರನ್ನು ಇಬ್ಬರು ಸೋದರರಿಗೆ ಮದುವೆ ಮಾಡಲಾಗಿತ್ತು. ಆ ಇಬ್ಬರೂ ಸೋದರರು 2001 ಮತ್ತು 2003ರಲ್ಲಿ ಆತ್ಮಹತ್ಯೆಮಾಡಿಕೊಂಡರು. ಹಿರಿಯವಳಿಗೆ ತನ್ನ ಮಕ್ಕಳನ್ನು ಓದಿಸಿ, ಕೆಲಸಕ್ಕೆ ಕಳುಹಿಸುವ ಆಸೆ ಇದೆ. ಆದರೆ ಹೇಗೆಂದು ಗೊತ್ತಿಲ್ಲ. ತನ್ನ ಮಗಳನ್ನು ಹೊರಗೆ ಕಳಿಸಲು ಆಕೆ ಸಿದ್ಧವಿದ್ದಾಳೆ. ಅಲ್ಲಿಯವರೆಗೂ ನಡೆಸಿದ್ದ ಸಂದರ್ಶನದಲ್ಲಿ ಅಂತಹ ಅಭಿಪ್ರಾಯ ಕೇಳಿದ್ದು ಅದೇ ಮೊದಲ ಸಲ. ಅಂತಹ ಎದೆಗುಂದಿಸುವ ಪರಿಸ್ಥಿತಿಯಲ್ಲೂ ಆಕೆಯಲ್ಲಿ ಧೈರ್ಯ, ಚೈತನ್ಯವಿತ್ತು. ತನ್ನ ಮಕ್ಕಳಿಗೆ ಬೇರೆ ಕೆಲಸ ಸಾಧ್ಯವಾಗುವುದಾದರೆ ಭೂಮಿ ಮೇಲಿನ ಅವಲಂಬನೆಯನ್ನು ಬಿಡುವುದಾಗಿ ಆಕೆ ಹೇಳಿದಳು. ತಾಯಂದಿರು ಸಂಪ್ರದಾಯವನ್ನು ವಿರೋಧಿಸಲು ಸಿದ್ಧವಾಗಿದ್ದರೂ ಈ ಹೆಣ್ಣುಮಕ್ಕಳಿಗೆ ಉಳಿದಿರುವ ಸಾಧ್ಯತೆಗಳಾದರೂ ಎಲ್ಲಿವೆ?

ಮಾನ್ಸ ಜಿಲ್ಲೆಯಲ್ಲಿ ಕುಲ್‌ದೀಪ್‌ಸಿಂಗ್‌ರವರ ತಂದೆ 2000ದಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಆತನಿಗೀಗ 24 ವರ್ಷ. ಅವನ ತಂದೆ ಕೀಟನಾಶಕ ಕುಡಿದಾಗ ಆತನಿಗೆ 16 ವಯಸ್ಸಿರಬೇಕು. ಅವರ ಸಾಲ ಹೇಗೆ 2.5 ಲಕ್ಷಕ್ಕೇರಿತು ಎಂಬುದನ್ನು ಆತ ತಣ್ಣಗೆ ಹೇಳಿದ. 4 ಎಕರೆ ಭೂಮಿ ಇದ್ದರೂ ಬಡ್ಡಿ ಸಾಲದವರಿಗೆ, ಬ್ಯಾಂಕಿನವರಿಗೆ ಬಡ್ಡಿ ಕಟ್ಟಿದ ಮೇಲೆ ಅವರಿಗೆ ಉಳಿಯುವುದು ವರ್ಷಕ್ಕೆ 1 ಲಕ್ಷ. ಸಾಲ ಮಾಡಿದ್ದು ಸೋದರಿಯರ ಮದುವೆಗಾಗಿ. ಹಾಗಾದರೂ ಆತನಿಗೆ ಸೋದರಿಯರ ಬಗ್ಗೆ ಕಾಳಜಿ ಇದೆ. ಎರಡನೆ ಸೋದರಿಯ ಗಂಡನ ಮನೆಯವರು ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ. ಈಗ ಕೊನೆ ತಂಗಿಯ ಮದುವೆ ಮಾಡಲು ಇನ್ನೂ ಮೂರು ಲಕ್ಷವಾದರೂ ಬೇಕು ಎಂದು ಆತ ಚಿಂತಿಸುತ್ತಿದ್ದಾನೆ. ತನ್ನ ತಲೆಯ ಮೇಲೆ ಹೊರಲಾರದಷ್ಟು ಹೊರೆ


ಇದ್ದರೂ ಸೋದರಿಯರ ಬಗ್ಗೆ ಆತನಿಗಿರುವ ಕಾಳಜಿ ಮಾತ್ರ ಕಲ್ಪನಾತೀತ. ಕಳೆದೆಂಟು ವರ್ಷ ಆತ ಹೇಗೆ ಕಳೆದಿರಬಹುದು ಮತ್ತು ಆತನ ಮುಂದಿನ ದಿನಗಳು ಹೇಗಿರಬಹುದೆಂದು ಅರಗಿಸಿಕೊಳ್ಳುತ್ತಿರುವಾಗಲೆ ಆತ ನಾವು ಆಗಷ್ಟೆ ಭೇಟಿ ಮಾಡಿದ ಸೋದರ ಸಂಬಂಧಿ ಖಿನ್ನತೆಗೊಳಗಾಗಿದ್ದಾನೆಂದು ಹೇಳಿದ. ಆ ಸೋದರ ಸಂಬಂಧಿ ತುಂಬಾ ದುಃಖ, ಸಂಕಟದಲ್ಲಿದ್ದ, ಚಿತ್ತಸ್ವಾಸ್ಥ್ಯ ಕಳೆದುಕೊಂಡವನಂತಿದ್ದ. ಆತನ ತಂದೆ 2005ರಲ್ಲಿ ತೀರಿಕೊಂಡಿದ್ದರು. 3 ಲಕ್ಷದಷ್ಟು ಸಾಲವಿದೆ, ಎರಡು ಎಕರೆಯಲ್ಲಿ ಬೆಳೆದಿದ್ದ ಬೆಳೆಯನ್ನಷ್ಟೂ ಅರ್ತಿಯಾ ಬಡ್ಡಿಗೆ ಮುರಿದುಕೊಂಡಿದ್ದ. "ಅವನು ಪ್ರತಿದಿನ ತಲೆಯನ್ನು ಗೋಡೆಗೆ ಗುದ್ದಿಕೊಳ್ಳುತ್ತಿದ್ದ" ಎಂದು ಕುಲ್‌ದೀಪ್ ಹೇಳಿದ. ಕಾರ್ಖಾನೆಯಲ್ಲಿ ಕೆಲಸ ಹುಡುಕಿಕೊಳ್ಳಲು ಪಟ್ಟಣಕ್ಕೆ ಹೋಗುವಷ್ಟು ಕಾಸೂ ಅವನ ಬಳಿ ಇಲ್ಲ. ಇವರಿಬ್ಬರು 80ರ ದಶಕದ ಸಂತತಿಯವರು. ಬಹುಶಃ ಆಪರೇಷನ್ ಬ್ಲೂಸ್ಟಾರ್ ವರ್ಷದಲ್ಲಿ ಜನಿಸಿರಬೇಕು. ಹಸಿರುಕ್ರಾಂತಿಯ ಪರಿಣಾಮಗಳು ನಶಿಸಲಾರಂಭಿಸಿದ್ದ ಕಾಲವದು. ಅದು 90ರ ದಶಕಕ್ಕೂ ಮುಂದುವರೆಯಿತು.

ಮಕ್ಕಳ ಮೌನ ಮತ್ತು ವಿಧೇಯತೆಯು ದೊಡ್ಡ ಹುಡುಗರ, ಹರೆಯದ ಯುವಕರ ಮಾದಕ ವ್ಯಸನದ ಫಲವಾಗಿದೆ. ಮಗುವಾಗಿ ಅತಿಯಾದ ವಿಧೇಯತೆ, ಹದಿಹರಯದಲ್ಲಿ ಮಾದಕ ವ್ಯಸನದಲ್ಲಿ ಮುಳುಗುವುದು ಇದು ಹದಿಹರಯವಯಸ್ಸಿನಿಂದ ಯುವಕರಾಗುವ ಸ್ಥಿತ್ಯಂತರದ ಪ್ರಮುಖ ಲಕ್ಷಣವಾಗಿದೆ. ಯಾವ ಮಾನಸಿಕ ಸ್ಥಿತಿ ಇಂತಹ ಸ್ಥಿತ್ಯಂತರವನ್ನು ರೂಪಿಸುತ್ತದೆ ಎಂಬ ಹಿನ್ನೆಲೆಯಲ್ಲಿ ಮಕ್ಕಳಿಂದ ಪ್ರೌಢರಾಗುವ ಇಡೀ ಸಂತತಿ ಕುರಿತಂತೆ ಸ್ಪಷ್ಟವಾಗಿ ಕಲ್ಪಿಸಿಕೊಳ್ಳಬಹುದು. ಕೃಷಿ ಬಿಕ್ಕಟ್ಟಿನ ಪರಿಣಾಮದ ಫಲವನ್ನು ನಿಜಕ್ಕೂ ಅನುಭವಿಸುತ್ತಿರುವವರು ಪಂಜಾಬಿನ ಯುವಕರು. ಕುಟುಂಬದ ಯಜಮಾನನಾಗಿ ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಲಾಗದ ಗಂಡುಮಕ್ಕಳ ತಂದೆಯಂದಿರು ಇಡೀ ವ್ಯಕ್ತಿತ್ವವನ್ನೆ, ಜೀವವನ್ನೆ ನುಂಗಿ ಹಾಕುತ್ತಿವುದರಿಂದ ಭೂಮಿ ಎಂಬುದು ಮಾರಲೂ ಆಗದ ಕಿತ್ತೊಗೆಯಲೂ ಆಗದ ಕುತ್ತಿಗೆಗೆತ್ತಿರುವ ನೇಣಿನ ಕುಣಿಕೆಯಂತೆ ಆಗಿದೆ. ಭೂಮಾಲೀಕತ್ವವೆಂಬ ಅದಮ್ಯಗತ್ತಿನಲ್ಲಿ ರೂಪಿಸಲ್ಪಟ್ಟ ಕಟ್ಟಾಜಾತಿ ರಚನೆಯಿಂದಾಗಿ ಜಾಟ್ ಸಿಖ್‌ರು ಕೃಷಿಯಿಂದ ಹೊರಬರಲಾರದವರಾಗಿದ್ದಾರೆ. ಬಹುತೇಕ ಎಲ್ಲಾ ಹಳ್ಳಿಗಳಲ್ಲೂ ಹೆಚ್ಚಿನ ಯುವಕರು ಮಾದಕ ವ್ಯಸನಕ್ಕೆ ಶರಣಾಗಿದ್ದಾರೆ. ಅಲೋಪತಿ ಔಷಧಿಗಳನ್ನು ತಾವೇ ಹೆಚ್ಚೆಚ್ಚಾಗಿ ಸೇವಿಸಿಕೊಂಡು ತಮ್ಮ ಜೀವಗಳೊಂದಿಗೆ ಆಟವಾಡುತ್ತಿದ್ದಾರೆ. ಈ ಮೂಲಕ ಕಟುವಾಸ್ತವ ಮತ್ತು ಎಳೆಯ ತೋಳುಗಳ ಮೇಲೆ ಹೆಚ್ಚುತ್ತಿರುವ ಹೊರೆಯಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಮಾದಕ ಔಷಧ ಮತ್ತು ಪಾನೀಯಗಳ ಸೇವನೆ ಕಣ್ಣಿಗೆ ಕಾಣಿಸುವುದಕ್ಕಿಂತಲೂ ಹೆಚ್ಚು ವ್ಯಾಪಕವಾಗಿದೆ. ಆ ಯುವ ಮುಖಗಳ ಮೇಲೆ ಬರೆದಿರುವ ಖಿನ್ನತೆ, ಏಕಾಕಿತನ, ಆತ್ಮಹತ್ಯೆಯನ್ನು ಬಹಳ ಸುಲಭವಾಗಿ ಗ್ರಹಿಸಿಬಿಡಬಹುದು. ಹಸಿರು ಕ್ರಾಂತಿಯ ಪ್ರಚಾರಕ್ಕೆಂದು ಬಳಸಲಾಗುತ್ತಿದ್ದ ಸಂತೃಪ್ತ, ಸುಖಿ ಪಂಜಾಬಿ ರೈತನ ಚಿತ್ರವಿದ್ದ ಕ್ಯಾಲೆಂಡರುಗಳು ಕೇವಲ ಭ್ರಮೆಯಷ್ಟೆ. ಸತ್ಯವೇನೆಂದರೆ ಆ ಚಿತ್ರಣವೆ 20 ವರ್ಷಗಳ ನಂತರ ಬಿಚ್ಚಿಕೊಂಡ ಕೃಷಿ ಬಿಕ್ಕಟ್ಟಿನ ಬೀಜಗಳನ್ನು ಬಿತ್ತಿದ್ದು.

ದುಬಾರಿಯಾದ ಆರೋಗ್ಯ ಸೇವೆ

ಹಲವಾರು ಮಹಿಳೆಯರು ಖಾಯಿಲೆ, ಶಸ್ತ್ರಚಿಕಿತ್ಸೆಗಳಂತಹ ಕಷ್ಟಗಳು ಅವರನ್ನು ಸಾಲಕ್ಕೆ ದೂಡಿರುವುದನ್ನು ಕುರಿತು ಹೇಳಿದರು. ಈ ಖಾಯಿಲೆ, ಶಸ್ತ್ರಚಿಕಿತ್ಸೆಗಳಂತಹ ಕಷ್ಟಗಳು ಹೆಚ್ಚಾಗಿ ಸಂಭವಿಸಿರುವುದು ಅವರ ಗಂಡಂದಿರ ಸಾವಿನ ನಂತರ. ಕೆಲವೊಮ್ಮೆ ಸಾಲದ ಸುಳಿಯೊಳಗೆ ಮುಳುಗಿದ ನಂತರ. ಬಹುಪಾಲು ಕುಟುಂಬಗಳಲ್ಲಿ ಖಿನ್ನತೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾದರೂ ಅದಕ್ಕಾಗಿ ಚಿಕಿತ್ಸೆ ಪಡೆಯುತ್ತಿರುವವರಂತು ಬಹಳ ಕಡಿಮೆ. ಅಂಡಾಶಯದಲ್ಲಿನ ಸಿಸ್ಟ್‌ಗಳು (ದ್ರವ ತುಂಬಿದ ಗುಳ್ಳೆಗಳು), ಗರ್ಭಾಶಯದ ಶಸ್ತ್ರಚಿಕಿತ್ಸೆಗಳು ಸಾಮಾನ್ಯ. ಇತರೆ ಶಸ್ತ್ರಚಿಕಿತ್ಸೆಗಳೆಂದರೆ ಕಿಡ್ನಿಕಲ್ಲುಗಳು, ಅಪೆಂಡಿಕ್ಸ್ ಮತ್ತು ಹರ್ನಿಯಾದಂತಹವು. ಕ್ಯಾನ್ಸರ್ ಸಹ ಇದೆ, ವಿಶೇಷವಾಗಿ ಬಂಟಿಂಡಾ ಜಿಲ್ಲೆಯಲ್ಲಿ. ಅಲ್ಲಿನ್ನೂ ಅಧ್ಯಯನವನ್ನು ಪ್ರಾರಂಭಿಸಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವುದೆಂದರೆ ಖರೀದಿಗಾಗಿ ಸಾಲ ಮಾಡಿಕೊಳ್ಳಬೇಕಾಗುತ್ತದೆ. ದೇಶಾದ್ಯಂತ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹಾಳಾಗುತ್ತಿರುವುದರಿಂದಲೆ ಅವರು ಖಾಸಗಿ ಆರೋಗ್ಯ ವ್ಯವಸ್ಥೆಯನ್ನು ಹೆಚ್ಚಾಗಿ ಅವಲಂಬಿಸಬೇಕಾಗಿದೆ.

ಶಸ್ತ್ರಚಿಕಿತ್ಸೆಯನ್ನು ಸೂಚಿಸಿದಾಗಲೆಲ್ಲ ಹಣವಿಲ್ಲವೆಂಬ ಕಾರಣಕ್ಕೆ ಅಥವ ಮದುವೆ ಮತ್ತು ಮೊಮ್ಮಕ್ಕಳಿಗೆ ಉಡುಗೊರೆ ನೀಡಬೇಕೆಂಬಂತಹ ಸಾಮಾಜಿಕ ಒತ್ತಾಯಗಳೆ ಆದ್ಯತೆಯಾಗುವುದರಿಂದ ಮಾಡಿಸಿಕೊಳ್ಳಲಾಗುವುದಿಲ್ಲ. ಆಗಸ್ಟ್ 2005ರಲ್ಲಿ 23 ವರ್ಷದ ಮಗನನ್ನು ಕಳೆದುಕೊಂಡ ಸಂಗ್ರೂರ್ ಜಿಲ್ಲೆಯ ನರೇಂದರ್ ಕೌರ್‌ಳ ಆರೋಗ್ಯ ಸರಿ ಇಲ್ಲದೆ ನಿತ್ರಾಣಳಾಗಿದ್ದಾಳೆ. ಅವಳ ಕಿಡ್ನಿಯಲ್ಲಿ ಎರಡು ಕಲ್ಲುಗಳಿವೆ. ಅಲ್ಲದೆ ಗರ್ಭಕೋಶದಲ್ಲಿಯೂ ಸಮಸ್ಯೆಯಿದ್ದು ಆ ಬಗ್ಗೆ ಹೆಚ್ಚಿಗೆ ಮಾತನಾಡಲಿಲ್ಲ. ಕೇವಲರೋಗ ಪತ್ತೆಗೆಂದು ಸ್ಕ್ಯಾನಿಂಗ್‌ಗಾಗಿ ಸಂಗ್ರೂರ್‌ಗೆ ಹೋಗಬೇಕೆಂದರೆ 1200ರೂ. ಖರ್ಚಾಗುತ್ತದೆ. ಶಸ್ತ್ರಚಿಕಿತ್ಸೆಗೆ 150000 ಖರ್ಚಾಗುವುದೆಂದು ವೈದ್ಯರು ಹೇಳಿರುವುದನ್ನು ಆಕೆ ಯೋಚಿಸಲು ಸಹ ಸಾಧ್ಯವಿಲ್ಲ. "ಕಾಯಿಲೆ ಏನೆಂದು ಕಂಡು ಹಿಡಿಯಲೆ ಇಷ್ಟೊಂದು ಕಾಸು ಖರ್ಚಾಯಿತು" ಎನ್ನುವ ಆಕೆ ಸಾಲದ ಪ್ರತಿ ಪೈಸೆಯನ್ನು ಮಗಳ ಮದುವೆಗೆಂದು, ಈಗ ಮೊಮ್ಮಗುವಿನ ಜನನಕ್ಕೆಂದು ಖರ್ಚು ಮಾಡಿದ್ದಾಳೆ. ಈಗಿರುವ ಕಾಯಿಲೆಯಿಂದ ವೇದನೆ, ಅಸೌಖ್ಯ ಹೆಚ್ಚುತ್ತಿದ್ದರೂ ಏನೂ ಮಾಡಲಾಗದ ಸ್ಥಿತಿಯಲ್ಲಿದ್ದಾಳೆ. ಮಹಿಳೆಯರ ಆರೋಗ್ಯ ನಗಣ್ಯವಾಗಿರುವಂತಹ ಸ್ಥಿತಿಯಲ್ಲಿ ಕಾಯಿಲೆ ಸರಿಪಡಿಸಿಕೊ ಎಂದು ಮನ ಒಲಿಸುವವರು



ಯಾರೂ ಆಕೆಯ ಸುತ್ತಮುತ್ತ ಇಲ್ಲ. ಸಂಗ್ರೂರು ಜಿಲ್ಲೆಯ ಬಲ್ಜಿತ್ ಸಿಂಗ್ ಹತಾಶೆಗೊಂಡಿದ್ದಳು; ತನ್ನ ವಯಸ್ಸಿಗಿಂತಲೂ ಹೆಚ್ಚು ವಯಸ್ಸಾದವಳಂತೆ ಕಾಣುತ್ತಿದ್ದಳು. ಸದಾ ನಿರಾಶೆ, ಉದ್ವೇಗದಲ್ಲಿರುತ್ತಾಳೆ. ನೆರೆಹೊರೆಯವರು ಆಕೆಯ ಮನಸ್ಸು ಕೆಲಸವೇ ಮಾಡುತ್ತಿಲ್ಲವೆಂದರು. ಆದರೆ ಆಕೆ ನಮ್ಮೊಡನೆ ಸ್ಪಷ್ಟವಾಗಿ ಎಲ್ಲಾ ವಿವರಗಳನ್ನು ಹೇಳಿದಳು ಮತ್ತು ಗಂಡ ಆತ್ಮಹತ್ಯೆ ಮಾಡಿಕೊಂಡಾಗ ದಾಖಲಿಸಿದ್ದ ಪ್ರಥಮ ಮಾಹಿತಿ (FIR) ವರದಿಯನ್ನು ತೋರಿಸಿದಳು. ಆಕೆಯ ಒಬ್ಬ ಮಗನಿಗೆ ತೀವ್ರವಾದ ಮಾನಸಿಕ ಅಸ್ವಸ್ಥತೆ ಇದೆ. ಆಕೆಯು ಖಿನ್ನತೆ ಮತ್ತು ಇತರೆ ಕಾಯಿಲೆಗಳಿಗೆ ಹೆಚ್ಚು ಔಷಧಿ ಸೇವಿಸುತ್ತಾಳೆ. ಔಷಧಿಗೆಂದೆ ತಿಂಗಳಿಗೆ 400ರೂ. ಖರ್ಚಾಗುತ್ತದೆ. ಔಷಧಿ ಹಾಗೂ ವೈದ್ಯರ ಚೀಟಿಗಳನ್ನೆಲ್ಲ ನಮಗೆ ತೋರಿಸಿದಳು. ಆಕೆಯ ಎರಡನೇ ಮಗ 16–17 ವರ್ಷದವನು. ಖಾಸಗಿ ಶಾಲೆಯಲ್ಲಿ ಓದುತ್ತಿರುವ ಅವನು ಶಾಲೆಯಿಂದ ಬಂದ ಮೇಲೆ ಸದಾ ಉದ್ವಿಗ್ನನಾಗಿ, ಮೌನವಾಗಿ ಇರುತ್ತಾನೆ. ತೀವ್ರವಾದ ಚಿಂತೆ, ವ್ಯಾಕುಲತೆಯಿಂದಾಗಿರುವ ಅನಾರೋಗ್ಯಕ್ಕೇ ಔಷಧಿ. ಅದಕ್ಕೂ ಆಕೆ ತುಂಬಾ ಹಣ ಖರ್ಚು ಮಾಡುತ್ತಿದ್ದಾಳೆ. "ವೈದ್ಯರು ಚಿಂತೆ ಮಾಡಬೇಡವೆಂದು ಹೇಳುತ್ತಾರೆ. ನಿದ್ದೆ ಮಾಡುವಾಗ ಮಾತ್ರ ಚಿಂತೆ ಮಾಡುವುದಿಲ್ಲ. ಆಗ ಚಿಂತೆ ಮಾಡಲು ಹೇಗೆ ಸಾಧ್ಯ?" ಎನ್ನುತ್ತಾಳೆ. ಇಂತಹ ಲಕ್ಷಣ ಭೇಟಿಮಾಡಿದ ಬಹುಪಾಲು ಕುಟುಂಬಗಳಲ್ಲಿ ಸರ್ವೇಸಾಮಾನ್ಯ. ಆತ್ಮಹತ್ಯೆಗಳ ಪರಿಣಾಮದಿಂದಾಗಿ ಈ ಮಹಿಳೆಯರು ಅನುಭವಿಸುತ್ತಿರುವ ಮಾನಸಿಕ ಯಾತನೆ ಮತ್ತು ಒತ್ತಡ, ಅಳಿದುಳಿದ ಬದುಕಿನೆಳೆಗಳ ಕಾಪಾಡಿಕೊಳ್ಳಲು ಪಡುತ್ತಿರುವ ಪಾಡನ್ನು ಲೆಕ್ಕ ಹಾಕಲು ಸಾಧ್ಯವಿಲ್ಲ.

18 ವರ್ಷದ ಬಲ್ವಿಂದರ್ ಕೌರ್ ತಾಯಿಯ ಹೆಪಟೈಟಸ್ ಕಾಯಿಲೆಗೆ, ಅಂಗಡಿಗಳಲ್ಲಿ ಸಾಮಾನುಕೊಳ್ಳಲು ಪಡೆದುಕೊಂಡ ಸಾಲ ಇತ್ಯಾದಿಯಿಂದಾಗಿ ತನ್ನ ಕುಟುಂಬ ಸಾಲದ ಸುಳಿಗೆ ಸಿಕ್ಕಿಕೊಂಡಿತೆಂದು ನಮಗೆ ಹೇಳಿದಳು. ಅವರಿಗಿರುವ ಸಾಲ 50000ಕ್ಕಿಂತ ಕಡಿಮೆ ಯಾದರೂ ಭೂಹೀನ ಕೃಷಿ ಕಾರ್ಮಿಕರಾದ್ದರಿಂದ ಸಾಲ ತೀರಿಸುವ ದಾರಿಯೇ ಅವರಿಗಿಲ್ಲ. ಆಕೆಯ ತಾಯಿ ಈಗಲೂ ಅನಾರೋಗ್ಯದಿಂದ ಬಳಲುತ್ತಿದ್ದಾಳೆ.

ಫಿರೋಜ್‌ಪುರ್‌ನ ಮಾಮಡಾಟ್ ಬ್ಲಾಕ್‌ನಲ್ಲಿರುವ 50 ವರ್ಷದ ಕುಲ್ವಿಂದರ್ ಕೌರ್‌ಳ ಮಗ 2007ರಲ್ಲಿ ಆತ್ಮಹತ್ಯೆ ಮಾಡಿಕೊಂಡ. ಆಕೆಯ ಆರೋಗ್ಯ ತುಂಬಾ ಹದಗೆಟ್ಟಿದೆ. 13 ಎಕರೆ ಜಮೀನಿದ್ದರೂ ಸಹ ಆಕೆಗೆ 6 ಲಕ್ಷ ಸಾಲವಿದೆ; ಆಕೆ ತನ್ನ ಶಸ್ತ್ರಚಿಕಿತ್ಸೆಗೆಂದೂ ಸಾಲ ಮಾಡಿದ್ದಾಳೆ. ಕಳೆದ ಕೆಲವು ವರ್ಷಗಳಲ್ಲಿ ಕಣ್ಣು, ಮೂತ್ರನಾಳ, ಅಪೆಂಡಿಕ್ಸ್ ತೊಂದರೆಯಿಂದಾಗಿ 3–4 ಬಾರಿ ಶಸ್ತ್ರಚಿಕಿತ್ಸೆಗೊಳಗಾಗಿದ್ದಾಳೆ. ಒಂದು ಶಸ್ತ್ರಚಿಕಿತ್ಸೆಯನ್ನು ಸರ್ಕಾರಿ ಆಸ್ಪತ್ರೆಯಲ್ಲಿ, ಇನ್ನೆರಡನ್ನು ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಮಾಡಿಸಿಕೊಂಡಿದ್ದಾಳೆ. ವೈದ್ಯಕೀಯ ಖರ್ಚಿಗೆಂದೇ 50000ರೂ. ಸಾಲ ಮಾಡಿದ್ದಾಳೆ. ತನ್ನದೇ ಆರೋಗ್ಯ ಹದಗೆಟ್ಟಿರುವಾಗ ಗಂಡ ಮತ್ತು ಅಸ್ವಸ್ಥ ಮಾವನನ್ನು ನೋಡಿಕೊಳ್ಳಬೇಕಾಗಿದೆ.

ಫಿರೋಜ್‌ಪುರ್ ಜಿಲ್ಲೆಯ ನಿವಾಸಿ ಲಕೀರ್‌ರಾನಿಯ ಗಂಡನಿಗೆ ಆರ್ಥಿಕ ತೊಂದರೆಗಳು, ಏಜೆಂಟರುಗಳ ಕಾಟ, ಮಕ್ಕಳ ಶಿಕ್ಷಣದ ಚಿಂತೆಗಳು ಕಾಡುತ್ತಿದ್ದವು. ಇರುವುದು ಒಂದು ಎಕರೆ ಗಿಂತಲೂ ಕಡಿಮೆ ಜಮೀನು, ಸಾಲ ಮೂರುಲಕ್ಷದಷ್ಟಿದೆ. ಎರಡು ವರ್ಷಗಳ ಹಿಂದೆ ಗರ್ಭಕೋಶದ ಕ್ಯಾನ್ಸರ್‌ಗಾಗಿ ಜಲಂದರ್‌ನ ಖಾಸಗಿ ಆಸ್ಪತ್ರೆಯಲ್ಲಿ ಮಾಡಿಸಿಕೊಂಡ ಶಸ್ತ್ರಚಿಕಿತ್ಸೆ ಮತ್ತು ಇತರೆ ದುಬಾರಿ ವೈದ್ಯಕೀಯ ಚಿಕಿತ್ಸೆಗಳು ಕುಟುಂಬಗಳನ್ನು ಸಾಲದ ಸುಳಿಗೆ ದೂಡಿದ್ದರೆ ಅನಾರೋಗ್ಯವು ಕೆಲಸ ಮಾಡಲು ಅಡ್ಡಿಯಾಗಿದೆ.

ಹಿರಿಯರ ಚಿಕಿತ್ಸೆ ಮತ್ತು ಆಸ್ಪತ್ರೆ ವಾಸದ ಖರ್ಚನ್ನು ನಿಭಾಯಿಸಲು ಮಾಡಿಕೊಂಡ ಸಾಲಗಳನ್ನು ಅವರು ತೀರಿ ಹೋದ ನಂತರವೂ ತೀರಿಸುತ್ತಿದ್ದಾರೆ. ಮಾನ್ಸದ ಎರಡು ಕುಟುಂಬಗಳು ಅತ್ತೆಯರ ಕ್ಯಾನ್ಸರ್ ಚಿಕಿತ್ಸೆಗೆಂದು ಮಾಡಿಕೊಂಡ ಸಾಲವನ್ನು ಇನ್ನೂ ತೀರಿಸುತ್ತಿವೆ. ಫಿರೋಜ್‌ಪುರ್‌ನ ಕುಲ್ಜೀತ್‌ಕೌರ್, ಅವಳ ಅತ್ತೆ ಇತ್ತೀಚೆಗೆ ತೀರಿಕೊಂಡಿದ್ದು, ಅಂತ್ಯಸಂಸ್ಕಾರಕ್ಕೆಂದು ಇತರೆ ಮೈದುನರ ಜೊತೆಗೆ ತನ್ನ ಭಾಗದ 13000 ಕೊಟ್ಟಿದ್ದನ್ನು ಕುರಿತು ಹೇಳಿದಳು. ಕೊಡದಿದ್ದರೆ ಅತ್ತೆ ಪಾಲಿನಿಂದ ಸಿಗುವ ಎರಡು ಕನಾಲ್ ಭೂಮಿ ಸಿಗುತ್ತಿರಲಿಲ್ಲವೆಂದು ಹೇಳಿದಳು. ಅವಳ ತಾಯಿ ತನ್ನ ಮಗಂದಿರಿಂದ ತಲಾ 2 ಸಾವಿರ ತೆಗೆದುಕೊಂಡು ನೀಡಿದ್ದರಿಂದ ಖರ್ಚು ನಿಭಾಯಿಸಲು ಆಕೆಗೆ ಸಾಧ್ಯವಾಯಿತು. ತಾಯಿ ಮನೆಯವರಿಂದ ಇಂತಹ ಬೆಂಬಲ ಸಿಗುವುದು ವಿರಳ. ಕಾರಣ ಅವರಿಗೂ ಇರುವ ಬಡತನ ಅಥವ ಉದಾಸೀನತೆ.

ಆರೋಗ್ಯ ಸೇವೆಯ ವಾಣೀಜ್ಯೀಕರಣದ ವಿಲಕ್ಷಣ ಮುಖವನ್ನು ಪಂಜಾಬ್‌ನಲ್ಲಿ ಕಾಣಬಹುದು. ಹತಾಶ ಕುಟುಂಬಗಳು ಸಾಯುತ್ತಿರುವ ರೈತರನ್ನು ಚಿಕಿತ್ಸೆಗೆಂದು ಒಯ್ಯುವಂತಹ ತುರ್ತಿನ ಪರಿಸ್ಥಿತಿಯ ಅವಕಾಶವನ್ನು ಖಾಸಗಿ ಆಸ್ಪತ್ರೆಗಳು ಲಾಭಕ್ಕಾಗಿ ಬಳಸಿಕೊಳ್ಳುತ್ತಿವೆ. ಮಾನ್ಸಾಜಿಲ್ಲೆಯ ಪೋಲಾಸಿಂಗ್ 2000ದಲ್ಲಿ ಆತ್ಮಹತ್ಯೆ ಮಾಡಿಕೊಂಡಾಗ ಆತನನ್ನು ಲೂಧಿಯಾನದ ಆಸ್ಪತ್ರೆಗೆ ಸೇರಿಸಲಾಗಿತ್ತು. ಆತ 4 ದಿನಗಳ ನಂತರ ತೀರಿಕೊಂಡ. ಆಸ್ಪತ್ರೆಯ ಖರ್ಚು ರೂ. 90000. ಆದ್ದರಿಂದ ಕುಟುಂಬವು ಹೊಸದಾಗಿ ಸಾಲಮಾಡಬೇಕಾಯ್ತು. ಮಾನ್ಸದಲ್ಲಿರುವ ಖಾಸಗಿ ಆಸ್ಪತ್ರೆಗಳೂ ಸಹ ಆತ್ಮಹತ್ಯೆಗೆ ಪ್ರಯತ್ನಿಸಿದ ಕೇಸುಗಳಿಗೆ ಕನಿಷ್ಠ 70000ರೂ. ಚಾರ್ಜು ಮಾಡುತ್ತಾರೆ. ಕೇವಲ ಹೊಟ್ಟೆ ತೊಳೆಯುವುದಕ್ಕೆ ಅಥವ ಒಂದೆರಡು ದಿವಸ ತುರ್ತುಚಿಕಿತ್ಸಾ ಘಟಕದಲ್ಲಿರಿಸಿಕೊಳ್ಳಲು ಸಾವಿರಾರು ರೂಪಾಯಿಗಳನ್ನು ವಸೂಲಿ ಮಾಡುವುದರಿಂದ ಕುಟುಂಬಗಳಿಗೆ ಸಾಲದ ಹೊರೆ ಇಳಿಸಿಕೊಳ್ಳಲು ಇನ್ನಷ್ಟು ವರ್ಷಗಳು ಬೇಕಾಗುತ್ತವೆ; ಅದೂ ಸಹ ಹಾವು ಏಣಿಯಾಟದಲ್ಲಿ ಏಣಿಯೇ ಹಾವಾದಾಗ!

ನಿರ್ಧಾರ ಕೈಗೊಳ್ಳುವುದು ಮತ್ತು ನೀರೀಕ್ಷೆಗಳಿಗೆ ದನಿಯಾಗುವುದು

ಬಹಳಷ್ಟು ಮಹಿಳೆಯರು ನಿರ್ಧಾರ ಕೈಗೊಳ್ಳಲೇ ಬೇಕಾದಂತಹ ವಾಸ್ತವವನ್ನು ಹಿಡಿತಕ್ಕೆ ತೆಗೆದುಕೊಂಡಿದ್ದಾರೆ. ಮಹಿಳೆಯರು ಇತರರ ನಿರ್ಧಾರಗಳಿಗೆ ಒಳಗಾಗುತ್ತಿದ್ದ ಸಾಮಾಜಿಕ ವಾತಾವರಣದಲ್ಲಿ ಸಧ್ಯದ ಪರಿಸ್ಥಿತಿ ಅವರಿಗೆ ಗೊಂದಲಮಯವೂ ಆಗಿದೆ, ಸವಾಲಿನದೂ ಆಗಿದೆ. ಈ ಮಹಿಳೆಯರ ಬಹುದೊಡ್ಡ ನಿರೀಕ್ಷೆ ಎಂದರೆ ಮಕ್ಕಳ ಭವಿಷ್ಯ. ಅವರ ಶಾಲೆಯ ಫೀಸು, ತಾಂತ್ರಿಕ ತರಬೇತಿ ಮತ್ತು ಉದ್ಯೋಗ ಕುರಿತೇ ಹೆಚ್ಚು ಯೋಚಿಸುವುದು. ಈ ಮಹಿಳೆಯರು ತಮ್ಮನ್ನು ತಾವು ನಿಚ್ಚಳವಾಗಿ ಪ್ರತಿಪಾದಿಸಿಕೊಳ್ಳುವುದು ಮಕ್ಕಳನ್ನು ಬೆಳೆಸಬೇಕೆನ್ನುವ ವಿಷಯದಲ್ಲಿ. ಅದನ್ನು ಅತ್ಯಂತ ಕಾಳಜಿಯಿಂದ ಮಾಡುವುದಲ್ಲದೆ ಭವಿಷ್ಯದ ಭರವಸೆಯಾಗಿ ನೋಡುತ್ತಾರೆ. ಹಾಗಾದರೂ ಕೂಲಿಗೆ ಕಾರ್ಮಿಕರನ್ನು ನೇಮಿಸುವುದು, ಬಾಡಿಗೆಗೆಂದು ಭೂಮಿಯನ್ನು ಭೋಗ್ಯಕ್ಕೆ ಕೊಡುವುದು, ಹೊಸ ಸಾಲ ತೆಗೆದುಕೊಳ್ಳುವುದು, ಭೂಮಿಗೆ ಸಂಬಂಧಿಸಿದ ವಿಷಯಗಳನ್ನು ಕುರಿತು ಮಹಿಳೆಗೆ ಅಥವ ಅವಳ ಮಗನಿಗೆ ಭೂಮಿ ವರ್ಗಾವಣೆಯಾಗಿದ್ದರೂ ಸಹ – ಈಗಲೂ ನಿರ್ಧರಿಸುವವರು ಗಂಡನ ಸೋದರರು ಅಥವ ತಂದೆಯಂದಿರು. ಬಹುಪಾಲು ಕುಟುಂಬಗಳಲ್ಲಿ ಮಹಿಳೆಯರು ತಾಯಂದಿರ ಮನೆಗೆ ಹೋಗುವುದು ಇತರರ ಸಮ್ಮತಿಯ ಮೇಲೆ. ಒಂದೆರೆಡು ಸಂದರ್ಭಗಳಲ್ಲಿ ಮಾತ್ರ ಮಹಿಳೆಯರು ತಾವೇ ನಿರ್ಧರಿಸುತ್ತಾರೆ. ರೈತ ಸಂಘಗಳು

ಇರುವೆಡೆ ಸಂಘದ ಸದಸ್ಯತ್ವ ಮತ್ತು ಮತ ಚಲಾವಣೆಯು ಮಹಿಳೆಯರನ್ನು ಸಂಘಟನೆಯ ಸಂಪರ್ಕಕ್ಕೆ ತರುತ್ತದೆ. ಈ ಭಾಗ ಕುರಿತ ಪ್ರಸ್ತುತ ಅಧ್ಯಯನವನ್ನು ಇನ್ನೂ ಹೆಚ್ಚು ಪರಿಶೀಲಿಸಲಾಗುವುದು. ನಾವೇನಾದರೂ ಪಂಜಾಬಿನ ಪರಿಸ್ಥಿತಿ ಕುರಿತಂತೆ ವಾಸ್ತವಿಕವಾದ ಪರಿಹಾರ ಮತ್ತು ತಂತ್ರಗಳನ್ನು ಯೋಚಿಸಬೇಕಾದರೆ ಇರುವುದು ಇದೊಂದೇ ದಾರಿ.

ಕೆಲವು ಕಾಳಜಿಗಳೂ ಹಲವು ವಿಷಯಗಳೂ

ಪಿತೃಪ್ರಧಾನತೆ ಕುರಿತ ವೈಚಾರಿಕ ವಿಮರ್ಶೆ ಮೂಲಕ ಕುಟುಂಬ ಎಂಬುದು ಮಹಿಳೆಯರಿಗೆ ಆಶ್ರಯ ತಾಣವೆಂಬ ಮಿಥ್ಯೆಯು ಪಲ್ಲಟಗೊಳ್ಳುತ್ತಿದ್ದರೂ ಕಡ್ಡಾಯ ಭಿನ್ನ ಲಿಂಗಲೈಂಗಿಕತೆಯು ಇನ್ನೂ ಈ ದೇಶದ ಸಾವಿರಾರು ಮಹಿಳೆಯರನ್ನು ತನ್ನ ಬಿಗಿ ಹಿಡಿತದಲ್ಲಿಟ್ಟುಕೊಂಡಿರುವುದರಿಂದ ಯಾವ ಆಯ್ಕೆಯೂ ಇಲ್ಲದೆ ಮದುವೆಯನ್ನಷ್ಟೆ (ಸಹಜ) ಸಾಮಾನ್ಯ ಕ್ರಿಯೆಯಾಗಿ ಆಯ್ಕೆಮಾಡಿಕೊಳ್ಳಬೇಕಾಗಿದೆ. ರೈತರ ಆತ್ಮಹತ್ಯೆಯ ಸಂದರ್ಭದಲ್ಲಿ ಪಿತೃಪ್ರಧಾನತೆಯು ಮಹಿಳೆಯರಿಗೆ ಅನುಗ್ರಹಿಸುವ ಸೌಲಭ್ಯಗಳು ಹೊಯ್ದಾಡುತ್ತವೆ. ಈ ಮಹಿಳೆಯರು ಯಾವುದೇ ಆಯ್ಕೆಯನ್ನು ಚಲಾಯಿಸಿದ್ದಾರಾ? ಇಂದು ಅವರಿಗಿರುವ ಆಯ್ಕೆಗಳಾದರೂ ಏನು? ದುಡಿವವರ್ಗದ ಪುರುಷರು ಮತ್ತು ರೈತಾಪಿ ಜನರ ಮೇಲಿರುವ ಪಿತೃಪ್ರಧಾನತೆಯ ಹೊರೆ ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಪ್ರತಿಯೊಂದು ಆತ್ಮಹತ್ಯೆಯೂ ಪ್ರಸ್ತುತದಲ್ಲಿ ತಮ್ಮ ಶಕ್ತಿಯನ್ನು ತೀವ್ರವಾದ, ಸಂಕಟಮಯ ಸಂಘರ್ಷಕ್ಕೆ ಒಡ್ಡಿದ ಮೇಲೂ ಭವಿಷ್ಯವನ್ನು ರೂಪಿಸಲಾಗದ ಅಸಾಮರ್ಥ್ಯದ ಗುರುತಾಗಿದೆ. ಕುಟುಂಬಗಳನ್ನು "ನಡೆಸಲು" ಅಥವ ಕುಟುಂಬಗಳನ್ನು "ಸಲಹಲು" ಬಡವರು ನಡೆಸುತ್ತಿರುವ ಹೋರಾಟಗಳ ಸುತ್ತ ಆವರಿಸಿರುವ ಮೌನಕ್ಕೆ ಪ್ರಮುಖ ಕಾರಣವೆಂದರೆ ವರ್ಗ, ಜಾತಿ ಮತ್ತು ಪಿತೃಪ್ರಧಾನತೆಯು ವಿಷಯ ಕುರಿತಂತೆ ಸೂಕ್ತವಾಗಿ ತೊಡಗಿಕೊಂಡಿಲ್ಲದಿರುವುದು ಹಾಗು ಪ್ರತಿರೋಧದ ತಂತ್ರಗಳು ಬಲಹೀನಗೊಂಡಿರುವುದು. ವರ್ಗ, ಜಾತಿ ಮತ್ತು ಪಿತೃಪ್ರಧಾನತೆಯು ಒಂದಾಗಿ ನಡೆಸುವ ದಬ್ಬಾಳಿಕೆಯು ಹಲವು ಶ್ರೇಣಿಯದಾಗಿದ್ದು ಮಹಿಳೆಯರ ಮೇಲೆ ಅನೇಕ ರೀತಿಯ ಪರಿಣಾಮ ಬೀರುತ್ತಿದೆ. ಅಸ್ಮಿತಾ ರಾಜಕಾರಣವು ಮುಂದಿಡುವ ಸವಾಲುಗಳನ್ನು ಉತ್ತಮವಾಗಿ ಅರಿಯಬೇಕು. ಅದು ದೃಷ್ಟಿಕೋನವನ್ನು ನಮ್ಮ ಕಲ್ಪನೆ ಮತ್ತು ಆಳವಾದ ನಂಬಿಕೆಗಳನ್ನು ನವೀಕರಿಸುವ ಸಲುವಾಗಿ ಒಟ್ಟಾಗಿ ನೋಡಿದಾಗ ಮಾತ್ರ ಸಾಧ್ಯ. ಸಾಮಾನಿನ ಪಟ್ಟಿಯಂತೆ ಅಸ್ಮಿತೆಗಳ ಪಟ್ಟಿ ಮಾಡುವುದು ಅಥವ ಲೆಸ್ಬಿಯನ್ ಮಹಿಳೆಯ ಅಥವ ದುಡಿವ ವರ್ಗದ ಮಹಿಳೆ ಅಥವ ದಲಿತ ಮಹಿಳೆಯ ಕುರಿತು ಅತಿ ಎನಿಸುವ ಗಮನ ನೀಡುವುದು ವಿರೋಧಿ ಪರಿಣಾಮಹೊಂದಿದೆ. ಜಾತಿ ಸಂಸ್ಥೆಯನ್ನು ಪರಿಗಣಿಸುವುದೆಂದರೆ ದಲಿತ ಎಂಬ ವಿಭಾಗವನ್ನು ಒಳಗೊಂಡು ದಬ್ಬಾಳಿಕೆಯ ಕಡತದಲ್ಲಿ ಜಾತಿ ಎಂಬುದನ್ನು ಗುರುತು ಹಾಕಿಕೊಳ್ಳುವುದಲ್ಲ. ಜಾತಿ ಎಂಬುದು ಹೇಗೆ ವರ್ಗ ಮತ್ತು ಪಿತೃಪ್ರಧಾನತೆಯನ್ನು ತಳುಕು ಹಾಕಿದೆ ಎಂಬುದನ್ನು ಗ್ರಹಿಸುವ ಅಗತ್ಯವಿದೆ. ಇದನ್ನು ಜಾಟ್‌ಸಿಖ್ ಮಹಿಳೆಯರ ಸಂದರ್ಭದಲ್ಲಿ ಕಾಣಬಹುದಾಗಿದೆ. ಭೂ 'ಒಡೆತನ' ವಿದ್ದೂ ದಿವಾಳಿಯಾದಂತಹ ಸಂದರ್ಭದಲ್ಲೂ ಮಹಿಳೆಯರ ಚಲನೆಯ ಮೇಲೆ ನಿರ್ಬಂಧ ಹೇರುವುದು ಆ ಸಮುದಾಯದಲ್ಲಿ ಪ್ರಬಲವಾಗಿದೆ. ಮದುವೆ ಮತ್ತು ಪಿತೃಪ್ರಧಾನತೆ ಕುರಿತ ಆಮೂಲಾಗ್ರ ವಿಮರ್ಶೆಯು "ಮಾಲೀಕತ್ವ"ದ ವಿಷಯವನ್ನು ಸಂಬೋಧಿಸುವ (ಅವಲೋಕಿಸುವ) ಅಗತ್ಯವಿದೆ. ಈ ಮಾಲೀಕತ್ವವೆ ಮಹಿಳೆಯರನ್ನು ಗುಲಾಮರಾಗಿಸಿದೆ, ಆಳವಾದ ಸಮಸ್ಯೆ ಇರುವ ಜಾತಿ ಸಮಾಜವನ್ನು ಜಿಗುಟಾಗಿಸಿದೆ, ವರ್ಗ ಸಂಬಂಧಿ ಪ್ರಯೋಜನಗಳನ್ನು ಎತ್ತಿ ಹಿಡಿದಿದೆ. ಮತ್ತು ಸಲಿಂಗ ಲೈಂಗಿಕತೆಯನ್ನು ಮೌನವಾಗಿಸಿರುವ ರೀತಿ ಎಂತಹುದೆಂದರೆ ಬೇರೆ ಬೇರೆ ರೀತಿಯಲ್ಲಿ ಪರಿಣಾಮವಾಗಿರುವ ಎಲ್ಲ ವಿಭಾಗಗಳ ಸ್ವಯಂ ಬಿಡುಗಡೆಗೆ ಅಂತಿಮವಾಗಿ ಎಡೆಮಾಡಿ ಕೊಡುವಂತಹುದಾಗಿದೆ.

ಪಿತೃಪ್ರಧಾನ ಸಿದ್ಧಾಂತವನ್ನು ಅಂತರ್ಗತಮಾಡಿಕೊಳ್ಳುವುದು ಮಹಿಳೆಯರ ಮುಂದಿನ ಸಂತತಿಯಲ್ಲೂ ಅಧೀನತೆ ಮರುಉತ್ಪಾದನೆಯಾಗುವುದಕ್ಕೆ ಎಡೆಮಾಡಿಕೊಡುತ್ತದೆ. ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ಮಹಿಳೆ ಮತ್ತು ಮಹಿಳೆಯ ದುಡಿಮೆಯ ಅಪಮೌಲ್ಯೀಕರಣ ಇನ್ನೂ ಹದಗೆಡುತ್ತಿದೆ. ಕಾರಣ, ನಿಮ್ಮ ಕಡೆ ಪ್ರಯತ್ನದೊಂದಿಗೆ ನೀವು ನೋಡಿದ್ದನ್ನು ಮತ್ತು ತಿಳಿದಿದ್ದನ್ನು ಪುನರಾವರ್ತಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಬಹುಸಂಖ್ಯೆಯಲ್ಲಿ ಆತ್ಮಹತ್ಯೆಗಳಾಗುತ್ತಿರುವಾಗ ಜಾರಿಯಲ್ಲಿರುವ ವಾಸ್ತವತೆಯಾಚೆಯ ಕನಸು ಕಾಣುವ ಧೈರ್ಯ ಮಾಡಲಾಗುವುದಿಲ್ಲ. ಈ ಮಹಿಳೆಯರ ಕನಸು, ಆಕಾಂಕ್ಷೆಗಳು ಹೊಸ ಮಹಿಳಾ ಚಳವಳಿಯ ಭರವಸೆಗಳಾಗಬಹುದೇ ಎಂಬುದೆ ನಾವು ಕೈಗೊಳ್ಳಬೇಕಾಗಿರುವ ಸವಾಲು. ಪರಿಸ್ಥಿತಿಯು ಜಾತಿ ಸಮಾಜದ ನಿರ್ಬಂಧಗಳಿಂದ ಮಿಳಿತಗೊಂಡಿದ್ದು ಅದರ ಸಂಕೋಲೆಗಳು ಕೃಷಿ ಬಿಕ್ಕಟ್ಟಿನ ಸಮಯದಲ್ಲಿ ತಮ್ಮ ಹಿಡಿತವನ್ನು ಬಿಗಿಗೊಳಿಸುತ್ತವೆ. ಅಥವ ಕೆಲವೊಮ್ಮೆ ಮುರಿಯಲಾರಂಭಿಸಬಹುದು. ಈ ಅಂಶವನ್ನು ಅಮೂಲಾಗ್ರವಾಗಿ ಪರಿಶೀಲಿಸುವ ಅಗತ್ಯವಿದೆ.

ಆತ್ಮಹತ್ಯೆಯು ವೈಯಕ್ತಿಕ ಕ್ರಿಯೆಯಲ್ಲ ಎಂಬುದು ಸ್ಪಷ್ಟ. ಇದು ಪ್ರಭುತ್ವದ ನೀತಿಗಳು ಮತ್ತು ಆರ್ಥಿಕ ರಚನೆಗಳ ವೈಫಲ್ಯವನ್ನು ಪ್ರತಿಬಿಂಬಿಸುತ್ತದೆ. ಈ ನೀತಿ, ರಚನೆಗಳನ್ನು ಇಂದು ಜಾಗತಿಕ ಬಂಡವಾಳ ಶಕ್ತಿಗಳು ನಿರ್ದೇಶಿಸುತ್ತಿವೆ. ಪಂಜಾಬ್ ಹಾಗು ದೇಶಾದ್ಯಂತ ಇತರೆ ರಾಜ್ಯಗಳಲ್ಲಿ ಸಂಭವಿಸುತ್ತಿರುವ ರೈತರ ಆತ್ಮಹತ್ಯೆಗಳು ಕೋಟ್ಯಾಂತರ ಗ್ರಾಮೀಣ ಬಡವರ ಪರಿಸ್ಥಿತಿಯನ್ನು ಸೂಚಿಸುವ ಮೇಲ್ಪದರ ಅಂಶವಾಗಿದೆಯಷ್ಟೆ. ಇದು ಹಲವಾರು ವಿಧದಲ್ಲಿ ಜನಸಮೂಹದ ಮೇಲೆ ಪರಿಣಾಮ ಬೀರುವ ವ್ಯವಸ್ಥೆಯ ಕುಸಿತವಾಗಿದೆ. ಕೃಷಿ ಆರ್ಥಿಕತೆಯಲ್ಲಿ ದುಡಿಮೆಗೆ ವೇತನವನ್ನು ಅವಲಂಬಿಸಿರುವ ಸಣ್ಣ ಹಿಡುವಳಿದಾರರು ಮತ್ತು ಭೂಹೀನ ಕೃಷಿಕಾರ್ಮಿಕರು ಇಕ್ಕಟ್ಟಿನಲ್ಲಿದ್ದಾರೆ. ಘನತೆಯ ಬದುಕಿಗಾಗಿ ಹೋರಾಟ ಮತ್ತು ಅವರ ಮಕ್ಕಳ ಭವಿಷ್ಯ ಎರಡರ ಹೊರೆಯೂ ಅವರ ಮೇಲಿದೆ.

ವಾಸ್ತವದ ಪರಿಸ್ಥಿತಿಯು ಪ್ರಭುತ್ವ ಮತ್ತು ಹಣಕಾಸು ಸಂಸ್ಥೆಗಳು ಕೈಗೊಳ್ಳಬೇಕಾದ ಕ್ರಮಗಳ ಗಂಭೀರ ಸೂಚಕವಾಗಿದೆ. ಇದಕ್ಕೆ ರೈತ ಚಳವಳಿ, ಮಹಿಳಾ ಚಳವಳಿ, ಯುವ ಸಂಘಟನೆಗಳು ಮತ್ತು ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಮಧ್ಯಸ್ಥಿಕೆಯ ಅಗತ್ಯವೂ ಇದೆ. ನಮ್ಮ ಹೋರಾಟಗಳು ವ್ಯಾಪಕವಾಗುತ್ತಿರುವ ವಿಘಟಕ ಸಾಂಪ್ರದಾಯಿಕ ಶಕ್ತಿಗಳು ಮತ್ತು ಜನವಿರೋಧಿ ಆರ್ಥಿಕ ನೀತಿಗಳಿಂದ ಹೇಗೆ ಹತ್ತಿಕ್ಕಲ್ಪಡುತ್ತಿವೆ ಎಂಬುದನ್ನು ಗುರುತಿಸುವುದು ಪ್ರತಿರೋಧದ ಹೊಸ ತಂತ್ರಗಳ ಆವಿಷ್ಕಾರಕ್ಕೆ ಮತ್ತು ದಮನಿತ ಗುಂಪುಗಳ ಹೊಸ ಮೈತ್ರಿಕೂಟಕ್ಕೆ ಸಹಾಯಕವಾಗುತ್ತದೆ. ಈ ವಿಷಯಗಳ ಸಂಕೀರ್ಣತೆಯನ್ನು ಮತ್ತು ಅವುಗಳ ಅಂತರ್ ಸಂಬಂಧವನ್ನು ಅರಿಯಲು ದಮನಕಾರಿ ರಚನೆಗಳ, ಆಚರಣೆಗಳ ಮತ್ತು ಸಂಸ್ಥೆಗಳ ಕುರಿತ ಸಮಗ್ರವಾದ ದೃಷ್ಟಿಕೋನದ ಅಗತ್ಯವಿದೆ. ಅಲ್ಲಿಂದಲೆ ಪ್ರತಿರೋಧದ ಹೊಸವಿಧಾನಗಳು ಹುಟ್ಟುವುದು.

❑

ಕನ್ನಡಕ್ಕೆ : ***ದು. ಸರಸ್ವತಿ***

ಕೃಪೆ: ಇಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಮೇ 9, 2009,

Edited, Printed, Published and owned by Rajeshwari H.S., No. 114/5, 9th Cross, 2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.

ಅವನು

● ದರ್ಶಿನಿ ದಾದಾವಾಲ



ಕೊಳೆತು ನಾರುವ ಪಾಚಿಗಟ್ಟಿ ಹುಳಬಿದ್ದ ಕೊಳದಲ್ಲಿ
ಅರಳಿದ ಹೂ ನೋಡಿ ಅವನಂದುಕೊಂಡ,
ಈ ಹೂ ನನ್ನ ಕೈಲೇ ಇರಬೇಕಾದ್ದು ಎಂದು.

ಕೂಡಲೇ ಮುನ್ನಡೆದ ಕೊಳದ ಕಡೆಗೆ

ಹೂವೇನೋ ದಡದ ಹತ್ತಿರಕ್ಕೇ ಇತ್ತು
ಕೈ ಚಾಚಿದ, ಆಲೋಚಿಸಿದ.
ಇನ್ನೇನು ಇದು ನನ್ನ ಕೈಗೆ ಬಂದಹಾಗೇ...

ಆದರೆ, ಕೈ ನೀರಲ್ಲಿಳಿದಿದ್ದೇ ತಡ
ಕೊಳ ಕಲಕಿತ್ತು
ಹೂ ಜಾರಿ ಮುಂದೆ ಸರಿದಿತ್ತು.
ಹೂ ಬೇಕಿದ್ದರೆ ಈಗ, ಇನ್ನೊಂಚೂರು
ಮುಂದೆ ಹೋಗಲೇಬೇಕಿತ್ತು ಅನ್ನೋಹಾಗೆ.

ಕೊಳದಲ್ಲಿ ಒಂದು ಕಾಲಿಡಲೇಬೇಕು
ಅಂದುಕೊಂಡ ಅವನು.
ಬೂಟು ಬಿಚ್ಚಿ ಬದಿಗಿಟ್ಟ
ಕೊಳದಲ್ಲಿ ಕಾಲಿಟ್ಟ
ಕೊಂಚ ಮುಂದೆ ಬಾಗಿ ಕೈ ಚಾಚಿದ.
ಆದರೆ ಅವನ ಕೈ ಹೂವಿಂದ ಸ್ವಲ್ಪವೇ ದೂರ
ಉಳಿಯಿತು.

ಹೂವ ಹತ್ತಿರ ಹೋಗಬೇಕಿದ್ದರೆ
ಮತ್ತೊಂದು ಕಾಲನ್ನೂ ನೀರಿಗಿಡಲೇಬೇಕೆಂದು
ಈಗವನಿಗನ್ನಿಸಿತು.
ಕೂಡಲೇ ಆ ಕಾಲನ್ನೂ ಕೊಳದೊಳಗಿಟ್ಟ
ಹೂಗಾಗಿ ಮತ್ತೆ ಮುನ್ನಡೆದ.

ಹೀಗೆ ಅವನು ಒಂದರಹಿಂದೊಂದು ಕಾಲಿಟ್ಟದ್ದೇ,
ಕೊಳದಲ್ಲಿ ಅಲ್ಲೋಲ ಕಲ್ಲೋಲ

ಹೂ ಅವನಿಂದ ಮುಂದೆ.. ಇನ್ನೂ ಮುಂದೆ ಜಾರಿತ್ತು.
ಅವನು ನೀರಿಗಿಳಿದಾಗಿತ್ತು, ಈಗ ಯೋಚಿಸಲಿಕ್ಕೇನಿತ್ತು
ಯೋಚಿಸುವ ಜರೂರತ್ತೂ ಇರಲಿಲ್ಲ.

ಅವನು ಇನ್ನೂ ಒಂಚೂರು ಮುನ್ನಡೆದ
ಬಟ್ಟೆ ಎಲ್ಲ ಒದ್ದೆ, ಅವನು ಕೊಳದೊಳಗೆ
ಒಳಗೆ ಇಳಿಯುತ್ತ ಹೋದ
ಇಳಿಯುತ್ತ ಹೋದ... ಇಳಿಯುತ್ತ ಹೋದ...
ಇಳಿಯುತ್ತಲೇ ಹೋದ
ಹೂ ಮುದಕ್ಕೆ ಜಾರುತ್ತ ಹೋಯ್ತು..
ಜಾರುತ್ತ ಹೋಯ್ತು.. ಜಾರುತ್ತಲೇ ಹೋಯ್ತು..

ತಕ್ಷಣ ಅವನು ತಲೆ ಎತ್ತಿ ನೋಡುತ್ತಾನೆ.
ಅರೆ, ಇದೇನು! ದಡ ಎಷ್ಟು ಹಿಂದಕ್ಕುಳಿಯಿತು!
ಅವನೆಷ್ಟು ಮುಂದೆ ಬಂದಿದ್ದ!

ಈಗವನು...
ಕೊಳೆತು ನಾರುವ ಪಾಚಿಗಟ್ಟಿ ಹುಳಬಿದ್ದ ಕೊಳದಲ್ಲಿ
ಕೊರಳ ಮಟ್ಟ ಮುಳುಗಿಬಿಟ್ಟಿದ್ದ.
ಕೆಸರಲ್ಲಿ ಸಂಪೂರ್ಣವಾಗಿ ಸಿಕ್ಕಿ ಬಿಟ್ಟಿದ್ದ
ಕಣ್ಣ ದೃಷ್ಟಿ ಹರಿಸುತ್ತಾನೆ..
ಆ ಹೂ ಇನ್ನೂ ಅವನ ಎಟುಕಿಂದ ದೂರವೇ ಉಳಿದಿತ್ತು
ನೋಡುತ್ತಲೇ ಇದ್ದ...
ಆ ಹೂ ಜಾರುತ್ತಲೇ ನಡೆದಿತ್ತು ಇನ್ನೂ ಮುಂದೆ.

– **ಮಮತ. ಜಿ ಸಾಗರ** (ಗುಜರಾತಿಯಿಂದ ಕನ್ನಡಕ್ಕೆ)

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A)/ 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದ ಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆ ಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸ ಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine



Posted on 9th of every month
at Chamarajpet Post Office

1. Ramachandra A.
No 105, Yaraganahalli
Urigalapete post,
Peddapalli
KGF, 563112

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ
ಚಾಮರಾಜಪೇಟೆ
ಬೆಂಗಳೂರು - 560 018